ಸಂಪುಟ: 05 ಸಂಚಿಕೆ: 248 ಪುಟಗಳು: 08 ಶನಿವಾರ 22 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನೀವು ಇತರರಿಗೆ ಸಹಾಯ ಮಾಡಿದರೆ, ನೀವು ನಿಜವಾದ ಯಶಸ್ಸನ್ನು ಸಾಧಿಸಿದ್ದೀರಿ ಎಂದರ್ಥ. ಹಾಗಾಗಿ ಅಗತ್ಯವಿರುವವರಿಗೆ ಸಹಾಯ ಮಾಡಿ.

## ನಾನು ಎಲ್ಲರಿಗೂ ಆಪ್ತ, ಬಣ ರಾಜಕಾರಣವಿಲ್ಲ

• ಉದಯವಾಹಿನಿ, ಬೆಂಗಳೂರು

'ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ಆಪ್ತರೇ ಆಗಿದ್ದಾರೆ. ನಮ್ಮಲ್ಲಿ ಯಾವುದೇ ಬಣ ರಾಜಕಾರಣವಿಲ್ಲ. ನಮ್ಮಲ್ಲಿರುವುದು ಕಾಂಗ್ರೆಸ್ ಬಣ ಮಾತ್ರ' ಎಂದು ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು. ಡಿ.ಕೆ. ಶಿವಕುಮಾರ್ ಬೆಂಬಲಿಗರು ದೆಹಲಿಗೆ ಹೋಗಿದ್ದಾರಲ್ಲ ಎನ್ನುವ ಪ್ರಶ್ನೆಗೆ 'ಅದನ್ನೆಲ್ಲ ಗಮನಿಸಲು ಹೈಕಮಾಂಡ್ ಹಾಗೂ ರಾಜ್ಯದ ನಾಯಕರು ಇದ್ದಾರೆ. ಒಳ್ಳೆಯ ತೀರ್ಮಾನ ಕೈಗೊಳ್ಳುತ್ತಾರೆ. ನಾಲ್ಕು ದಿನ ನಾನೂ ದೆಹಲಿಯಲ್ಲಿದ್ದೆ. ಏನೂ ಆಗುವುದಿಲ್ಲವೆಂದು ಕೊಂಡಿದ್ದೇನೆ. ಏನಾದರೂ ಬೆಳವಣಿಗೆ ಇದ್ದರೆ ಹೈಕಮಾಂಡ್‌ನವರೇ ಹೇಳುತ್ತಾರೆ' ಎಂದು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. 'ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟಿದೆ. ಚಾಮರಾಜನಗರದಲ್ಲಿ ಖುದ್ದು ಮುಖ್ಯಮಂತ್ರಿಯೇ ಇದನ್ನು ಸ್ಪಷ್ಟಪಡಿಸಿದ್ದರೂ ಅನಗತ್ಯ ವಿವಾದ ಯಾಕೆ' ಎಂದು ಪ್ರಶ್ನಿಸಿದ ಅವರು 'ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ' ಎಂದರು.

## ಜಾಗತಿಕ ಸಾಮರ್ಥ್ಯ ಕೇಂದ್ರ ಈಗ ಜಾಗತಿಕ ಭ್ರಷ್ಟಾಚಾರ ಕೇಂದ್ರ

• ಉದಯವಾಹಿನಿ, ಬೆಂಗಳೂರು

ಒಂದು ಕಾಲದಲ್ಲಿ ಬೆಂಗಳೂರು 'ಜಾಗತಿಕ ಸಾಮರ್ಥ್ಯ ಕೇಂದ್ರ'ಗಳ (ಜಿಸಿಸಿ) ಪೈಕಿ ಮುಂಚೂಣಿಯಲ್ಲಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಬೆಂಗಳೂರು 'ಜಾಗತಿಕ ಭ್ರಷ್ಟಾಚಾರ ಕೇಂದ್ರ'ಗಳಲ್ಲಿ ಮುನ್ನಡೆಯಲ್ಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಭಾರತದ ಜಾಗತಿಕ ಸಾಮರ್ಥ್ಯ ಕೇಂದ್ರಗಳ (ಜಿಸಿಸಿ) ಪಟ್ಟಿಯಲ್ಲಿ ಬೆಂಗಳೂರನ್ನು ಹಿಂದಿಕ್ಕಿರುವ ಹೈದರಾಬಾದ್ ಅಗ್ರಸ್ಥಾನಕ್ಕೇರಿದೆ ಎಂಬುದಕ್ಕೆ ಸಂಬಂಧಿಸಿದಂತೆ ವರದಿಯನ್ನು ಹಂಚಿಕೊಂಡಿರುವ ವಿಜಯೇಂದ್ರ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. 'ರಾಜ್ಯದ ಪ್ರತಿಯೊಂದು ಇಲಾಖೆ, ಸಚಿವಾಲಯವು ಭ್ರಷ್ಟಾಚಾರದಿಂದ ತುಂಬಿಕೊಂಡಿದೆ. ಗುಂಡಿ ಮುಚ್ಚುವ ಕಾರ್ಯ, ಕಸ ಗುಡಿಸುವ ಯಂತ್ರಗಳಲ್ಲಿ 600 ಕೋಟಿ ಹಗರಣ ಮತ್ತು ನಗರದಾದ್ಯಂತ ಮೂಲಸೌಕರ್ಯದ ಸ್ಥಿತಿ ಶೋಚನೀಯವಾಗಿದೆ' ಎಂದು ಅವರು ಆರೋಪಿಸಿದ್ದಾರೆ. 'ಇತರೆ ರಾಜ್ಯಗಳನ್ನು ಆಯ್ಕೆ ಮಾಡಿದ್ದಕ್ಕಾಗಿ ಕಾರ್ಪೊರೇಟರ್‌ಗಳನ್ನು ರಾಜ್ಯ ಸರ್ಕಾರ ಅಪಹಾಸ್ಯ ಮಾಡುತ್ತಿದೆ. ಈಶಾನ್ಯ ರಾಜ್ಯಗಳ ನಾಗರಿಕರ ವಿರುದ್ಧ ಜನಾಂಗೀಯ ನಿಂದನೆ ಮಾಡಲು ಹಿಂಜರಿಯುವುದಿಲ್ಲ. ಇಡೀ ಸಮಸ್ಯೆಗೆ ರಾಜ್ಯ ನಾಯಕರ ಅಸಮರ್ಥತೆ ಹಾಗೂ ಭ್ರಷ್ಟಾಚಾರವು ಮೂಲ ಕಾರಣ ಎಂಬುದನ್ನು ಮರೆತಂತಿದೆ' ಎಂದು ಟೀಕಿಸಿದ್ದಾರೆ.

## ಬೆಂಗಳೂರಿನ ಜೈಲು ಅಧಿಕಾರಿಗಳಿಗೆ ಡಿಕೆಶಿ ತರಾಟೆ

• ಉದಯವಾಹಿನಿ, ಬೆಂಗಳೂರು

ಹಾಲಿ ಡಿಸಿಎಂ ಡಿ.ಕೆ.ಶಿವಕುಮಾರ್ 1992ರಲ್ಲಿ ಮೊದಲ ಭಾರಿಗೆ ರಾಜ್ಯ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಆಗ ಬಂಗಾರಪ್ಪ ಕ್ಯಾಬಿನೆಟ್ ನಲ್ಲಿ ಅವರಿಗೆ ಸಿಕ್ಕಿದ್ದು ಬಂಧಿಖಾನೆ ಇಲಾಖೆ. ಈಗ ಅದೇ ತಾವು ಮೊದಲ ಭಾರಿಗೆ ಮಂತ್ರಿಯಾಗಿದ್ದ ಇಲಾಖೆಯ ವ್ಯಾಪ್ತಿಯ ಜೈಲಿಗೆ ಡಿ.ಕೆ.ಶಿವಕುಮಾರ್ ಭೇಟಿ ನೀಡಿದ್ದರು. ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ್ದ ಡಿ.ಕೆ. ಶಿವಕುಮಾರ್ ಜೈಲಿನ ಲೋಪದೋಷಗಳ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಜೈಲಿನ ಖೈದಿಗಳಿಗೆ ಜೈಲಿನೊಳಗೆ ರಾಜ್ಯಾತಿಥ್ಯ ಸಿಗುತ್ತಿರುವುದು ಹೇಗೆಂದು ಪ್ರಶ್ನಿಸಿದ್ದಾರೆ. ಜೈಲಿನೊಳಗೆ ಮೊಬೈಲ್ ಹೇಗೆ ಬಂತು ಖೈದಿಗಳಿಗೆ ವಿಐಪಿ ಸೌಲಭ್ಯ ನೀಡಿದವರು ಯಾರೆಂದು ಪ್ರಶ್ನಿಸಿದ್ದಾರೆ. ಖೈದಿಗಳಿಗೆ ಮೊಬೈಲ್ ನೆಟ್ ವರ್ಕ್ ಹೇಗೆ ಸಿಗುತ್ತಿದೆ ಜೈಲಿನ ಆಕ್ರಮಗಳ ಬಗ್ಗೆ ಮಾಧ್ಯಮಗಳಲ್ಲಿ ಇಷ್ಟೆಲ್ಲಾ ವರದಿಯಾಗುತ್ತಿದೆ, ಜೈಲು ಅಧಿಕಾರಿಗಳು ಏನ್ ಮಾಡ್ತಿದ್ದೀರಿ ಎಂದು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡಿದ್ದಾರೆ.

## ಪಾಕ್ ಪರ ಬೇಹುಗಾರಿಕೆ ಮಲ್ಪೆಯಲ್ಲಿ ಇಬ್ಬರು ಅರೆಸ್ಟ್

• ಉದಯವಾಹಿನಿ, ಉಡುಪಿ

ಪಾಕಿಸ್ತಾನ ಪರ ಬೇಹುಗಾರಿಕೆ ಮಾಡುತ್ತಿದ್ದ ಇಬ್ಬರನ್ನು ಉಡುಪಿ ಜಿಲ್ಲೆಯ ಮಲ್ಪೆಯಲ್ಲಿ ಬಂಧಿಸಲಾಗಿದೆ. ಮಲ್ಪೆಯಲ್ಲಿರುವ ಕೊಚ್ಚಿನ್ ಶಿಪ್ ಯಾರ್ಡ್ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ರೋಹಿತ್ ಮತ್ತು ಸಂತ್ರಿ ಬಂಧಿತರು. ಆರೋಪಿಗಳು ಪಾಕಿಸ್ತಾನಕ್ಕೆ ರಹಸ್ಯ ಮಾಹಿತಿಯನ್ನು ರವಾನಿಸುತ್ತಿದ್ದರು ಎನ್ನಲಾಗಿದೆ.

ಸುಷ್ಮಾ ಮೆರಿನ್ ಪ್ರೈವೇಟ್ ಲಿಮಿಟೆಡ್ ಮೂಲಕ ಗುತ್ತಿಗೆ ಆಧಾರದಲ್ಲಿ ಕೊಚ್ಚಿನ್ ಶಿಪ್ ಯಾರ್ಡ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಕಳೆದ ಒಂದೂವರೆ ವರ್ಷಗಳಿಂದ ಆರೋಪಿಗಳು ಹಡಗುಗಳಿಗೆ ಸಂಬಂಧಿಸಿದ ಗೌಪ್ಯ ಮಾಹಿತಿ, ರಹಸ್ಯ ತಾಂತ್ರಿಕ ಮಾಹಿತಿಗಳನ್ನು ವಾಟ್ಸಾಪ್ ಮೂಲಕ ಪಾಕಿಸ್ತಾನದಲ್ಲಿ ಸಂಪರ್ಕದಲ್ಲಿದ್ದವರಿಗೆ ಕಳುಹಿಸುತ್ತಿದ್ದರು. ಈ ಕುರಿತು ಕೊಚ್ಚಿನ್ ಶಿಪ್ ಯಾರ್ಡ್ ಸಿಇಒ ನೀಡಿದ ದೂರಿನ ಆಧಾರದಲ್ಲಿ ಉಡುಪಿ ಪೊಲೀಸರು ಇಬ್ಬರನ್ನೂ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ತನಿಖೆ ವೇಳೆ ಮಾಹಿತಿ ಹಂಚಿಕೆ ಮಾಡಿ ಹಣ ಪಡೆಯುತ್ತಿದ್ದರೆಂಬ ಅಂಶವೂ ಬೆಳಕಿಗೆ ಬಂದಿದೆ. ಕೊಚ್ಚಿನ್ ಶಿಪ್ ಯಾರ್ಡ್ ಭಾರತೀಯ ನೌಕಾಪಡೆಗೆ ಟಗ್‌ಗಳನ್ನು ನಿರ್ಮಿಸಿ ಕೊಡುವ ಸಂಸ್ಥೆಯಾಗಿದೆ.

**ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರವು ಬೂದಿಮುಚ್ಚಿದ ಕೆಂಡದಂತೆ ಇದೆ. ಇತ್ತೀಚಿಗಷ್ಟೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ದೆಹಲಿ ಭೇಟಿಯು ಭಾರೀ ಕುತೂಹಲ ಮೂಡಿಸಿದ್ದು, ಸಿಎಂ ಕುರ್ಚಿ ಗಿಟ್ಟಿಸಿಕೊಳ್ಳಲು ಡಿ.ಕೆ.ಶಿವಕುಮಾರ್ ಅವರು ಹೊಸ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದಾರೆ. ಅತ್ತ ಐದು ವರ್ಷವೂ ನಾನೇ ಸಿಎಂ ಎಂದು ಸಿದ್ದರಾಮಯ್ಯ ಘೋಷಣೆ ಮಾಡುತ್ತಿರುವ ಹಿನ್ನೆಲೆ ಡಿಕೆಶಿ ತನ್ನದೇ ಆದ ತಂತ್ರ ರೂಪಿಸಿ, ಹೈಕಮಾಂಡ್‌ಗೆ ತನ್ನ ಪವರ್ ತೋರಿಸಲು ಮುಂದಾಗಿದ್ದಾರೆ.**

# ಬಣ ಬಡಿದಾಟ ಕುರ್ಚಿ ಕಾದಾಟ

ಸಿಎಂ ಕುರ್ಚಿ ಗಿಟ್ಟಿಸಿಕೊಳ್ಳಲು ಹೈಕಮಾಂಡ್ ಮೇಲೆ ಡಿಕೆಶಿ ಹೊಸ ಅಸ್ತ್ರ




**ದೆಹಲಿಗೆ ಶಾಸಕರ ಪರೇಡ್**

ರಾಜ್ಯ ಸರ್ಕಾರಕ್ಕೆ ಎರಡುವರೆ ವರ್ಷ ತುಂಬಿದ ಬೆನ್ನಲ್ಲೇ ನಾಯಕತ್ವ ಬದಲಾವಣೆ ಮುನ್ನಲೆಗೆ ಬಂದಿದೆ. ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ದಿಢೀರ್ ಆಗಿ ದೆಹಲಿಗೆ ಶಿಫ್ಟ್ ಆಗಿದೆ. ದೆಹಲಿಗೆ ಡಿಕೆ ಶಿವಕುಮಾರ್ ಅವರ ಆಪ್ತ ಬಳಗದಲ್ಲಿ ಕಾಣಿಸಿಕೊಂಡ ಶಾಸಕರು ಪರೇಡ್ ನಡೆಸಿದ್ದಾರೆ. ಸಚಿವ ಚಲುವರಾಯಸ್ವಾಮಿ ಕೂಡಾ ಈ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ. ಶಾಸಕರಾದ ಗುಬ್ಬಿ ಶ್ರೀನಿವಾಸ್, ಬಿ ಶಿವಣ್ಣ, ಎನ್ ಶ್ರೀನಿವಾಸ್, ಕುಣಿಗಲ್ ರಂಗನಾಥ್ ,ಇಕ್ಬಾಲ್ ಹುಸೇನ್, ದಿನೇಶ್ ಗೂಳಿಗೌಡ, ರವಿ ಗಣಿಗ, ರಾಜೇಗೌಡ ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ.

**ಐದು ವರ್ಷ ನಾನೇ ಸಿಎಂ**

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆಯ ನಡುವೆ ಸಿಎಂ ಸಿದ್ದರಾಮಯ್ಯ ಅವರು ಖಡಕ್ ಹೇಳಿಕೆ ನೀಡಿದ್ದಾರೆ. ಶಾಸಕರ ದೆಹಲಿ ಪ್ರವಾಸದ ನಡುವೆಯೇ ಐದು ವರ್ಷ ನಾನೇ ಸಿಎಂ ಎಂದಿದ್ದಾರೆ. ಈ ಮೂಲಕ ದೆಹಲಿಗೆ ತೆರಳಿರುವ ಶಾಸಕರಿಗೆ ಖಡಕ್ ಸಂದೇಶ ರವಾನಿಸಿದ್ದಾರೆ. ಐದು ವರ್ಷ ನಾನೇ ಸಿಎಂ ಅಷ್ಟೇ ಅಲ್ಲ, ಮುಂದಿನ ಎರಡು ಬಜೆಟ್ ಗಳನ್ನು ನಾನೇ ಮಂಡಿಸುತ್ತೇನೆ ಎಂದು ಹೇಳುವ ಮೂಲಕ ಸಂದೇಶ ರವಾನೆ ಮಾಡಿದ್ದಾರೆ.

## ಸಿಎಂ ಬದಲಾವಣೆ ಜಟಾಪಟಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರವು ಬೂದಿಮುಚ್ಚಿದ ಕೆಂಡದಂತೆ ಇದೆ. ಇತ್ತೀಚಿಗಷ್ಟೇ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ದೆಹಲಿ ಭೇಟಿಯು ಭಾರೀ ಕುತೂಹಲ ಮೂಡಿಸಿದ್ದು, ಸಿಎಂ ಕುರ್ಚಿ ಗಿಟ್ಟಿಸಿಕೊಳ್ಳಲು ಡಿ.ಕೆ. ಶಿವಕುಮಾರ್ ಅವರು ಹೊಸ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದಾರೆ. ಅತ್ತ ಐದು ವರ್ಷವೂ ನಾನೇ ಸಿಎಂ ಎಂದು ಸಿದ್ದರಾಮಯ್ಯ ಘೋಷಣೆ ಮಾಡುತ್ತಿರುವ ಹಿನ್ನೆಲೆ ಡಿಕೆಶಿ ತನ್ನದೇ ಆದ ತಂತ್ರ ರೂಪಿಸಿ, ಹೈಕಮಾಂಡ್‌ಗೆ ತನ್ನ ಪವರ್ ತೋರಿಸಲು ಮುಂದಾಗಿದ್ದಾರೆ.

**1** ನಾಯಕತ್ವ ಬದಲಾವಣೆ ಕ್ರಾಂತಿ ನಡುವೆ ಮತ್ತೊಂದು ಕುರ್ಚಿಗಾಗಿ ಸಿಎಂ-ಡಿಸಿಎಂ ಬಣ ಪೈಪೋಟಿ

**2** ಬೆಂಗಳೂರಿಗೆ ದೌಡಾಯಿಸಿದ ಖರ್ಗೆ, ನವೆಂಬರ್ ಕ್ರಾಂತಿನಾ ಶಾಂತಿನಾ..?

**3** ನಾನು ಈಗಲೂ ಮಾತಿಗೆ ತಪ್ಪಿಲ್ಲ: ಡಿ.ಕೆ. ಸುರೇಶ್ ಹೇಳಿಕೆಗೆ ಸಿದ್ದರಾಮಯ್ಯ ಪ್ರತಿಕ್ರಿಯೆ

ಹೌದು, ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ನಿನ್ನೆ, ಮೊನ್ನೆಯದಲ್ಲ. ಈ ಸರ್ಕಾರ ರಚನೆಯಾದಾಗಿನಿಂದಲೂ ಅಧಿಕಾರದ ಹಂಚಿಕೆ ಗುಸುಗುಸು ಇದ್ದೇ ಇದೆ. ಈ ಬಾರಿಯ ಕಾಂಗ್ರೆಸ್ ಸರ್ಕಾರದಲ್ಲಿ ಇಬ್ಬರು ಮುಖ್ಯಮಂತ್ರಿಗಳಾಗಿ ಅಧಿಕಾರ ಪಡೆಯಲಿದ್ದಾರೆ ಎಂಬ ಚರ್ಚೆಗಳು ನಡೆಯುತ್ತಲೇ ಇವೆ. ಆಗಾಗ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರ ನಡುವೆ ಅಧಿಕಾರದ ಒಪ್ಪಂದವೂ ನಡೆದಿದೆ ಎಂದೆಲ್ಲ ಸುದ್ದಿ ಸದ್ದು ಮಾಡಿತ್ತು. ಆದರೆ ಹೈಕಮಾಂಡ್ ಈ ವಿಚಾರದಲ್ಲಿ ಸೈಲೆಂಟಾಗಿ ಇರುವಂತೆ ಎಲ್ಲರ ಬಾಯಿಗೆ ಬೀಗ ಹಾಕಿತ್ತು.

ಇತ್ತೀಚೆಗೆ ಸೆಪ್ಟೆಂಬರ್ ಕ್ರಾಂತಿ, ನವೆಂಬರ್ ಕ್ರಾಂತಿ ಎಂದೆಲ್ಲ ಚರ್ಚೆಗಳು ನಡೆಯುತ್ತಿವೆ. ಸೆಪ್ಟೆಂಬರ್ ಮುಗಿಯಿತು, ಯಾವುದೇ ಕ್ರಾಂತಿಯಾಗಲಿಲ್ಲ. ಈಗ ನವೆಂಬರ್ ಕ್ರಾಂತಿ ಮುನ್ನೆಲೆಯಲ್ಲಿದೆ. ಇದಕ್ಕೆ ಪುಷ್ಟಿ ನೀಡುವಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿವೆ. ಇತ್ತೀಚೆಗೆ ಹೈಕಮಾಂಡ್ ನಾಯಕರನ್ನು ಭೇಟಿಯಾಗಿರುವ ಡಿಕೆಶಿ, ಸಿದ್ದರಾಮಯ್ಯ ಇದೇ ವಿಚಾರವಾಗಿ ಚರ್ಚೆ ನಡೆಸಿಬಂದಿದ್ದಾರೆ. ಆದರೆ ಡಿಕೆಶಿ ಅವರ ಕನಸಿಗೆ ಹೈಕಮಾಂಡ್ ರೆಡ್‌ಸಿಗ್ನಲ್ ನೀಡಿದೆ ಎನ್ನುವುದು ರಾಜಕೀಯ ವಲಯಲ್ಲಿದ ಚರ್ಚೆ. ಈ ಹಿನ್ನೆಲೆ ಕನಕಪುರದ ಬಂಡೆ ಹೈಕಮಾಂಡ್‌ಗೆ ತನ್ನ ಶಕ್ತಿ ಪ್ರದರ್ಶಿಸಲು ಹೊಸ ಮಾಸ್ಟರ್‌ಪ್ಲ್ಯಾನ್ ಮಾಡಿದ್ದಾರಂತೆ. ಕಾಂಗ್ರೆಸ್ ಸರ್ಕಾರವು ಈಗಾಗಲೇ ತನ್ನ ಅಧಿಕಾರದ ಅರ್ಧ ಅವಧಿಯನ್ನು ಪೂರೈಸಿದೆ. ಇನ್ನು ಎರಡೂವರೆ ವರ್ಷವಷ್ಟೇ ಬಾಕಿ ಇದೆ. ಈ ಹಿನ್ನೆಲೆ ಡಿ.ಕೆ. ಶಿವಕುಮಾರ್ ಅವರ ಬಣದ ಶಾಸಕರು ದೆಹಲಿಗೆ ತೆರಳಿ, ಹೈಕಮಾಂಡ್ ಭೇಟಿಗೆ ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ವರದಿಗಳ ಪ್ರಕಾರ ಡಿ.ಕೆ.ಶಿವಕುಮಾರ್ ಬಣದ ಹತ್ತು ಕಾಂಗ್ರೆಸ್ ಶಾಸಕರು ಈಗಾಗಲೇ ದೆಹಲಿಗೆ ತೆರಳಿದ್ದಾರೆ. ಡಿ.ಕೆ.ಶಿವಕುಮಾರ್ ಅವರನ್ನು ತಕ್ಷಣವೇ ಮುಖ್ಯಮಂತ್ರಿಯಾಗಿ ಘೋಷಿಸಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರಲು ಮುಂದಾಗಿದ್ದಾರೆ ಎನ್ನಲಾಗಿದೆ. ಇತ್ತೀಚಿನ ದೆಹಲಿ ಭೇಟಿಯು ಡಿಕೆಶಿಗೆ ಯಶಸ್ವಿಯಾಗದ ಹಿನ್ನೆಲೆ ಇದೀಗ ಶಾಸಕರ ಮೂಲಕ ತಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಅವರು ತಂತ್ರ ರೂಪಿಸಿದ್ದಾರೆ ಎನ್ನಲಾಗಿದೆ. ಹಲವು ವೇದಿಕೆಗಳಲ್ಲಿ ಸಿದ್ದರಾಮಯ್ಯ ಅವರು ಐದು ವರ್ಷವೂ ನಾನೇ ಸಿಎಂ ಎಂದು ಹೇಳಿಕೊಂಡಿದ್ದಾರೆ. ಹೀಗಾಗಿ ಸಿಎಂ ಆಗುವ ಅವಕಾಶ ಕೈತಪ್ಪುವ ಭೀತಿಯಲ್ಲಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಶಾಸಕರು ದೆಹಲಿಗೆ ಕಳಿಸಿದ್ದಾರೆ ಎಂಬ ಗುಸುಗುಸು ಕೇಳಿಬರುತ್ತಿದೆ. ನಾನು ಪಕ್ಷದ ನಿಷ್ಠಾವಂತ ಎನ್ನುತ್ತಿರುವ ಡಿಕೆ ಶಿವಕುಮಾರ್ ಅವರಿಗೆ ಸಿಎಂ ಪಟ್ಟ ಸಿಗುತ್ತಾ ಕಾದು ನೋಡಬೇಕಿದೆ.

**ರಾಜ್ಯದ ಅಭಿವೃದ್ಧಿ ಕುಂಠಿತ :** ರಾಜ್ಯ ಸರ್ಕಾರದ ಸಿಎಂ ಕುರ್ಚಿ ಚರ್ಚೆಯಲ್ಲಿ ಕಳೆದ 5-6 ತಿಂಗಳಿನಿಂದ ನಮ್ಮ ರಾಜ್ಯದ ಅಭಿವೃದ್ಧಿ ವಿಚಾರಗಳು ಚರ್ಚೆ ಆಗುತ್ತಿಲ್ಲ ಎಂದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದ ಬಿ.ವೈ.ರಾಘವೇಂದ್ರ ಟೀಕಿಸಿದ್ದಾರೆ. ಶಿವಮೊಗ್ಗದಲ್ಲಿಂದು ಮಾತನಾಡಿದ ಅವರು, ಸಿಎಂ ಸ್ಥಾನ ಬದಲಾವಣೆ ಕುರಿತು ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಅಧಿಕಾರ ಹಂಚಿಕೆ ಕುರಿತು ಹಿಂದೆ ಮಾತುಕತೆ ನಡೆದಿತ್ತು ಎಂದು ಡಿಸಿಎಂ ಶಿವಕುಮಾರ್ ಹೇಳುತ್ತಿದ್ದಾರೆ. ಆದರೆ ನಾನೇ ಐದು ವರ್ಷ ಸಿಎಂ ಎಂದು ಸಿದ್ದರಾಮಯ್ಯನವರು ಹೇಳುತ್ತಾರೆ. ಯಾರಾದರೂ ಎಷ್ಟೇ ವರ್ಷ ಇರಿ. ಆದರೆ ನಿಮ್ಮ ಈ ಚರ್ಚೆಯಲ್ಲಿ ಕಳೆದ 5-6 ತಿಂಗಳಿನಿಂದ ನಮ್ಮ ರಾಜ್ಯದ ಅಭಿವೃದ್ಧಿ ವಿಚಾರಗಳು ಚರ್ಚೆ ಆಗುತ್ತಿಲ್ಲ. ಒಟ್ಟಾರೆ ಆಡಳಿತಕ್ಕೆ ಸಾಕಷ್ಟು ಹೊಡೆತವಾಗಿದೆ. ನಮಗೆ ಯಾರಿದ್ದರೇನು? ನಮ್ಮ ರಾಜ್ಯಕ್ಕೆ ಉತ್ತಮ ಆಡಳಿತ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ ಎಂದರು.

**ಖರ್ಗೆ ಜೊತೆಗೆ ಮಾತುಕತೆ**

ಈ ಎಲ್ಲಾ ಬೆಳವಣಿಗೆ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಶನಿವಾರ ಆಗಮಿಸಲಿದ್ದಾರೆ. ಶನಿವಾರ ಸದಾಶಿವ ನಗರದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಖರ್ಗೆ ಅವರನ್ನು ಭೇಟಿ ಮಾಡಲಿದ್ದಾರೆ. ಖರ್ಗೆ ಜೊತೆಗೆ ಸದ್ಯದ ರಾಜಕೀಯ ಬೆಳವಣಿಗೆಗಳ ಕುರಿತಾಗಿ ಅವರು ಚರ್ಚೆ ನಡೆಸುವ ಸಾಧ್ಯತೆ ಇದೆ. ಹೀಗಾಗಿ ಖರ್ಗೆ ಅವರನ್ನು ಸಿದ್ದರಾಮಯ್ಯ ಅವರು ಭೇಟಿ ಮಾಡುತ್ತಿರುವುದು ಸಾಕಷ್ಟು ಕುತೂಹಲ ಕೆರಳಿಸಿದೆ.

**ಎಂಟ್ರಿ ಕೊಟ್ಟ ಸುರ್ಜೇವಾಲ**

ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಬಣ ರಾಜಕೀಯ ಸ್ಫೋಟದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅಖಾಡಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಬಣ ರಾಜಕೀಯಕ್ಕೆ ಬ್ರೇಕ್ ಹಾಕುವ ಬದಲಾಗಿ ಮಾಧ್ಯಮಗಳ ಮೇಲೆ ಗೂಬೆ ಕೂರಿಸಿದ್ದಾರೆ. ಕರ್ನಾಟಕದ ಗೊಂದಲ ವಿಚಾರವಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲಾ ಪೋಸ್ಟ್ ಮಾಡಿದ್ದು, ''ಕರ್ನಾಟಕದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರೊಂದಿಗೆ ಚರ್ಚೆ ನಡೆಸಲಾಯಿತು. ನಿರ್ಣಾಯಕವಾಗಿ ಸೋತ ಮತ್ತು ಬಣದಿಂದ ಬಳಲುತ್ತಿರುವ ಕರ್ನಾಟಕ ಬಿಜೆಪಿ ಮತ್ತು ಮಾಧ್ಯಮದ ಒಂದು ಭಾಗವು ಕರ್ನಾಟಕ ಮತ್ತು ಅದರ ಕಾಂಗ್ರೆಸ್ ಸರ್ಕಾರದ ವಿರುದ್ಧ ಉದ್ದೇಶಪೂರ್ವಕವಾಗಿ ಅಪಪ್ರಚಾರ ನಡೆಸುತ್ತಿದೆ'' ಎಂದು ಅವರು ಒಪ್ಪಿಕೊಂಡರು ಎಂದು ಹೇಳಿದ್ದಾರೆ.

**ಗ್ಯಾರಂಟಿ ಸರ್ಕಾರದಲ್ಲಿ ತಾರಕಕ್ಕೇರಿದ ಕಚ್ಚಾಟ**

# ಅಮಿತ್ ಶಾ ಭೇಟಿ ಮಾಡಿದ ರಾಜಣ್ಣ ಪುತ್ರ ರಾಜೇಂದ್ರ

## ನಾಯಕತ್ವ ಬದಲಾವಣೆಯ ಕೂಗು ಕೇಳಿಬಂದ ಬೆನ್ನಲ್ಲೇ ಈ ಭೇಟಿಯಿಂದ ಕುತೂಹಲ

• ಉದಯವಾಹಿನಿ, ಬೆಂಗಳೂರು

ಮಹತ್ವದ ಬೆಳವಣಿಗೆಯೊಂದರಲ್ಲಿ ಮಾಜಿ ಸಚಿವ ಕೆಎನ್ ರಾಜಣ್ಣ ಅವರ ಪುತ್ರ ರಾಜೇಂದ್ರ ಅವರು ನವದೆಹಲಿಯಲ್ಲಿ ನ. 21ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾರೆ. ಇದು ಸಹಜವಾಗಿ ಕರ್ನಾಟಕದ ರಾಜಕಾರಣದಲ್ಲಿ ಕುತೂಹಲ ಎಬ್ಬಿಸಿದೆ. ರಾಜ್ಯದಲ್ಲಿ ನಡೆಯುತ್ತಿರುವ ನಾಯಕತ್ವ ಬದಲಾವಣೆ ಮತ್ತಿತರ ಕೂಗಿನ ನಡುವೆ ರಾಜಣ್ಣ ಪುತ್ರನ ದೆಹಲಿ ಪ್ರಯಾಣ ಹಾಗೂ ದಿಢೀರನೆ ಅಮಿತ್ ಶಾ ಅವರ ಭೇಟಿ ಸಹಜವಾಗಿಯೇ ಕುತೂಹಲ ಕೆರಳಿಸಿದೆ.

ಇತ್ತೀಚೆಗೆ, ರಾಜಣ್ಣ ಅವರು, ಮುಂದೆ ನಾನು ಯಾವ ಪಕ್ಷದ ಬಾವುಟ ಹಿಡಿಯಬೇಕು ಎಂಬುದನ್ನು ಸದ್ಯದಲ್ಲೇ ತೀರ್ಮಾನಿಸುತ್ತೇನೆ ಎಂದಿದ್ದರು. ಆ ಕಾರಣಕ್ಕಾಗಿಯೇ, ರಾಜಣ್ಣ ಪುತ್ರ ಅವರ ಅಮಿತ್ ಶಾ ಭೇಟಿ ಕುತೂಹಲ ಕೆರಳಿಸಿದೆ.ಮತ್ತೊಂದು ಮೂಲದ ಪ್ರಕಾರ, ಕೆಎನ್ ರಾಜಣ್ಣ ಅವರು ಸಿದ್ದರಾಮಯ್ಯನವರ ಆಪ್ತರು. ಈಗ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕೂಗು ತಾರಕಕ್ಕೇರಿರುವಾಗ, ಕಾಂಗ್ರೆಸ್ಸಿನಲ್ಲಿರುವ ಒಕ್ಕಲಿಗ ನಾಯಕರೆಲ್ಲರೂ ಡಿಕೆಶಿಯವರಿಗೆ ಮುಖ್ಯಮಂತ್ರಿ ಸ್ಥಾನ ಕೊಡುವಂತೆ ಹೈಕಮಾಂಡ್ ಮೇಲೆ ಒತ್ತಡ ಹಾಕಲು ನವದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.



ಡಿಕೆಶಿ ಆಪ್ತರಾದ ಒಕ್ಕಲಿಗ ನಾಯಕರೆಲ್ಲರೂ ದೆಹಲಿಗೆ ಹೋಗಿದ್ದಾಗ ಇತ್ತ ಸಿಎಂ ಸಿದ್ದರಾಮಯ್ಯನವರ ಆಪ್ತರೆಲ್ಲರೂ ನ. 21ರ ಬೆಳಗ್ಗೆ ಮುಖ್ಯಮಂತ್ರಿಗಳ ನಿವಾಸಕ್ಕೆ ದೌಡಾಯಿಸಿ ಸಿದ್ದರಾಮಯ್ಯನವರಿಗೆ ತಮ್ಮ ನೈತಿಕ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಆ ಹಿನ್ನೆಲೆಯಲ್ಲಿ, ಸಿದ್ದರಾಮಯ್ಯ ಹಾಗೂ ಡಿಕೆಶಿ ಬಣದ ನಡುವಿನ ಫೈಟ್ ಒಂದು ನಿರ್ಣಾಯಕ ಘಟ್ಟಕ್ಕೆ ಬಂದು ನಿಂತಿದೆ ಎಂದು ಹೇಳಬಹುದು. ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯನವರ ಆಪ್ತರಾದ ಕೆಎನ್ ರಾಜಣ್ಣನವರ ಪುತ್ರ ರಾಜೇಂದ್ರ ಅವರು ದೆಹಲಿಯಲ್ಲಿ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿರುವುದು ಎಲ್ಲರಲ್ಲೂ ಕುತೂಹಲ ಕೆರಳಿಸಿದೆ. ಅಷ್ಟಕ್ಕೂ ರಾಜಣ್ಣ ಪುತ್ರ ಯಾಕೆ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡುತ್ತಾರೆ, ಅದಕ್ಕೂ ರಾಜ್ಯ ರಾಜಕೀಯಕ್ಕೂ ಏನು ಸಂಬಂಧ ಎಂಬುದು ನಿಜಕ್ಕೂ ಅರ್ಥವಾಗದ ಸಂಗತಿ. ಈ ಬಗ್ಗೆ ಖುದ್ದು ರಾಜೇಂದ್ರ ಅವರು ಅಥವಾ ಮಾಜಿ ಸಚಿವ ರಾಜಣ್ಣ ಅವರು ಸ್ಪಷ್ಟನೆ ನೀಡಬೇಕಷ್ಟೇ.

**ಅಸಲಿಗೆ ಭೇಟಿ ಉದ್ದೇಶ ಬೇರೆಯದ್ದೇ ಇತ್ತಾ**

ಅಸಲಿಗೆ ಭೇಟಿ ಉದ್ದೇಶವು ರಾಜಕೀಯದ್ದಲ್ಲ ಎಂದು ಹೇಳಲಾಗುತ್ತದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಹಕಾರ ಇಲಾಖೆಯ ಸಚಿವರೂ ಆಗಿದ್ದಾರೆ. ಇತ್ತ, ರಾಜಣ್ಣ ಅವರು ಸಹಕಾರ ಸಂಘದ ಧುರೀಣರೂ ಆಗಿದ್ದಾರೆ. ಅವರಿಗೆ ಸಹಕಾರ ಧುರೀಣ ಎಂಬ ಬಿರುದೂ ಇದೆ. ಖುದ್ದು ಮುಖ್ಯಮಂತ್ರಿಗಳೇ ಅವರು ಸಹಕಾರ ವಲಯದ ಧುರೀಣ ಎಂದು ಶ್ಲಾಘಿಸಿದ್ದಾರೆ. ಅವರ ಪುತ್ರ ರಾಜೇಂದ್ರ ಕೂಡ ಸಹಕಾರ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅದೇ ಕಾರಣಕ್ಕಾಗಿ ನವದೆಹಲಿಯಲ್ಲಿ ನ. 21ರಂದು ನಡೆದ ಸಹಕಾರ ಕ್ಷೇತ್ರ ಇಲಾಖೆಯಡಿ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆದಿದ್ದ ನಾನಾ ರಾಜ್ಯಗಳ ಸಹಕಾರ ಕ್ಷೇತ್ರಗಳ ಪ್ರತಿನಿಧಿಗಳ ಸಭೆಯಲ್ಲಿ ಪಾಲ್ಗೊಂಡಿದ್ದರು.

# 2028ಕ್ಕೆ ನಾನೇ ಕರ್ನಾಟಕದ ಮುಖ್ಯಮಂತ್ರಿ : ಶಾಸಕ ಯತ್ನಾಳ್


## ■ ಜಾತಿ ಬೇಧ ಮರೆತು ಹಿಂದೂ ನಾಯಕನಿಗೆ ಮಾತ್ರ ವೋಟ್ ಹಾಕಿ ■ ಇಸ್ಲಾಂ ರಾಷ್ಟ್ರ ಮಾಡುವ ಕುತಂತ್ರ

• ಉದಯವಾಹಿನಿ, ಬೆಂಗಳೂರು

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಹಿಂದೂಪರ ಸರಕಾರ ಅಧಿಕಾರಕ್ಕೆ ಬರಬೇಕೆಂದರೆ ಜಾತಿ, ಧರ್ಮ ನೋಡದೆ ಪ್ರತಿಯೊಬ್ಬರೂ ಹಿಂದೂಪರ ವ್ಯಕ್ತಿಗೆ ಮತ ಹಾಕಲು ಪ್ರತಿಜ್ಞೆ ಮಾಡಬೇಕೆಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಪಟ್ಟಣದ ಶ್ರೀ ಸೌಮ್ಯಕೇಶವಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಹಿಂದೂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, ''ರಾಜ್ಯದಲ್ಲಿ ಜಾತ್ಯತೀತ ಎಂಬ ನಕಲಿ ಡೋಂಗಿಗಳು ನಡೆಸುತ್ತಿರುವ ಸರಕಾರ ಹಿಂದೂ ಒಕ್ಕಲಿಗ, ಲಿಂಗಾಯತ, ದಲಿತ, ಹಿಂದುಳಿದ ವರ್ಗಗಳ ಸರಕಾರವಲ್ಲ. ಅದು ಕೇವಲ ಮುಸಲ್ಮಾನರ ಸರಕಾರವಾಗಿದೆ,'' ಎಂದು ದೂಷಿಸಿದರು.

''ರಾಜ್ಯದಲ್ಲಿ ಹಿಂದುತ್ವವನ್ನು ಉಳಿಸಬೇಕೆಂಬ ಚಿಂತನೆಯಿಂದ ಜಾತಿ, ಮತ ಬಿಟ್ಟು ಎಲ್ಲರೂ ಒಂದಾಗುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ಹಿಂದೂಗಳು ಒಂದಾಗದಿದ್ದರೆ ಮತ್ತು ಹಿಂದೂಗಳನ್ನು ಪ್ರತಿನಿಧಿಸುವ ವ್ಯಕ್ತಿ ರಾಜ್ಯದ ನೇತೃತ್ವ ವಹಿಸದಿದ್ದರೆ ದೇಶದಲ್ಲಿ ಹಿಂದೂಗಳಿಗೆ ಭವಿಷ್ಯವಿಲ್ಲ. ಜಾತಿ ವ್ಯವಸ್ಥೆಯಿಂದ ಹೊರಬರದಿದ್ದರೆ ನಮ್ಮ ದೇವಸ್ಥಾನಗಳು ಉಳಿಯುವುದಿಲ್ಲ, ಎಂದು ಅಭಿಪ್ರಾಯಪಟ್ಟರು.



**ಸಿಎಂ, ಡಿಸಿಎಂ ಮುಸ್ಲಿಂ ಪರ:** ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಾಯಿ ತೆಗೆದರೆ ಮುಸ್ಲಿಂ ಎನ್ನುತ್ತಾರೆ. ಕರ್ನಾಟಕದ ವಿಧಾನಸಭೆಯೋ ಅಥವಾ ಪಾಕಿಸ್ತಾನದ ವಿಧಾನಸಭೆಯೋ ಎನ್ನುವಂತಾಗಿದೆ. ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದರೂ ರಾಜ್ಯದ ಸಿಎಂ, ಡಿಸಿಎಂ ಮತ್ತು ಗೃಹ ಸಚಿವರು ಪಾಕಿಸ್ತಾನ ಪರ ಘೋಷಣೆ ಕೂಗಿಲ್ಲಎಂದು ಸಮರ್ಥಿಸಿಕೊಳ್ಳುತ್ತಾರೆ, ಎಂದು ಕಿಡಿಕಾರಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರನ್ನು ಜೆಡಿಎಸ್‌ನಿಂದ ಹೊರಹಾಕಿದ್ದಕ್ಕೆ ಮತ್ತು ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿಯಿಂದ ಹೊರಹಾಕಿದ್ದಕ್ಕೆ ಈ ಮೂವರು ಮುಖ್ಯಮಂತ್ರಿಯಾದರು. ನನ್ನನ್ನೂ ಈಗ ಬಿಜೆಪಿಯಿಂದ ಹೊರಹಾಕಲಾಗಿದೆ. 2028ಕ್ಕೆ ನಾನೇ ರಾಜ್ಯದ ಮುಖ್ಯಮಂತ್ರಿಯಾಗುತ್ತೇನೆ,'' ಎಂದು ಭವಿಷ್ಯ ನುಡಿದರು.

ಪಟ್ಟಣಕ್ಕೆ ಭೇಟಿ ನೀಡಿದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಟಿ.ಬಿ.ಬಡಾವಣೆಯ ಬಿಜಿಎಸ್ ವೃತ್ತದಲ್ಲಿರುವ ಗಣಪತಿ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿದರು. ನಂತರ ಜೆಸಿಬಿ ಯಂತ್ರಗಳ ಮೂಲಕ ಪುಷ್ಪಾರ್ಚನೆ ಮಾಡಿ ಸ್ವಾಗತ ಕೋರಿದ ಹಿಂದೂ ಕಾರ್ಯಕರ್ತರು, ಚಾಮರಾಜನಗರ ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ರ್‍ಯಾಲಿ ಮೂಲಕ ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಸೌಮ್ಯಕೇಶವಸ್ವಾಮಿ ದೇವಸ್ಥಾನಕ್ಕೆ ಕರೆತಂದರು.

ಬಳಿಕ ತಾಲ್ಲೂಕಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿ ಕ್ಷೇತ್ರ ದೇವತೆಗಳು ಮತ್ತು ಶ್ರೀಗಳ ದರ್ಶನಾಶೀರ್ವಾದ ಪಡೆದರು.

**ಹಿಂದೂಗೆ ವೋಟ್ ಮಾಡಿ**

ರಾಜ್ಯದಲ್ಲಿ ಕನ್ನಡ ಮಾಧ್ಯಮದ ಸರಕಾರಿ ಶಾಲೆಗಳ ಪುನಶ್ಚೇತನಕ್ಕೆ ಮತ್ತು ಶಿಕ್ಷಕರ ನೇಮಕಾತಿಗೆ ಹಣವಿಲ್ಲ ಎನ್ನುವ ಮುಖ್ಯಮಂತ್ರಿಗಳು ಮದರಸಾ ಮತ್ತು ಉರ್ದು ಶಾಲೆಗಳಿಗೆ ಎಷ್ಟು ಬೇಕಾದರೂ ಹಣ ನೀಡುತ್ತೇನೆ ಎನ್ನುತ್ತಾರೆ. ಕುರಿಗಾಹಿಗಳಿಗೆ 5 ಲಕ್ಷ ರೂ. ಸಬ್ಸಿಡಿ ಕೊಡುತ್ತೇವೆಂದಿದ್ದರೆ ಹಿಂದೂಗಳಿಗೆ ಸಿಗುತ್ತಿದೆ ಎಂದು ನಾವು ಖುಷಿ ಪಡಬಹುದಿತ್ತು. ಆದರೆ, ಮುಂದಿನ ಜನ್ಮ ಇದ್ದರೆ ಮುಸ್ಲಿಂ ಆಗಿ ಹುಟ್ಟುತ್ತೇನೆ ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ನನ್ನನ್ನು ಮುಸಲ್ಮಾನ ಎಂದೇ ತಿಳಿದುಕೊಳ್ಳಿ ಎನ್ನುವ ಕೀಳುಮಟ್ಟಕ್ಕಿಳಿದಿದ್ದಾರೆ. ತಾನು ಹುಟ್ಟಿದ ಸಮಾಜದ ಬಗ್ಗೆ ಗೌರವ ಇಲ್ಲದ ವ್ಯಕ್ತಿ ಇಂದು ರಾಜ್ಯದ ಮುಖ್ಯಮಂತ್ರಿಯಾಗಿರುವುದು ನಾಡಿನ ದುರ್ದೈವ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಗುಡುಗಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,398/Gram24ct ₹11,365/Gram22ct | ಬೆಳ್ಳಿ: ₹161.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಭಗವದ್ಗೀತೆಗೆ ವಿರೋಧ

ಶಿವಮೊಗ್ಗದ ಕುವೆಂಪು ವಿವಿಯಲ್ಲಿ ಇತ್ತೀಚೆಗೆ ನಡೆದ ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ ವಿಷಯಕ ವಿಚಾರ ಸಂಕಿರಣವನ್ನು ದಲಿತ ಸಂಘರ್ಷ ಸಮಿತಿ ವಿರೋಧಿಸಿ ಪ್ರತಿಭಟಿಸಿತು. ಭಗವದ್ಗೀತೆ ಚಾತುರ್ವರ್ಣ್ಯವನ್ನು ಪೋಷಿಸುವುದೆಂಬುದು ಇವರ ವಾದ. ಸಾಹಿತಿ ಬರಗೂರು ರಾಮಚಂದ್ರಪ್ಪ ಈ ಕುರಿತು ಮಾತನಾಡಿ ಮತೀಯ ವಾದಕ್ಕೆ ಅವಕಾಶ ಮಾಡಿಕೊಡಕೂಡದು ಎಂದಿದ್ದಾರೆ. ನಿಜ, ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ = ಸ್ವಭಾವ ಮತ್ತು ಕರ್ತವ್ಯಗಳ ಆಧಾರದಡಿ ಚಾತುರ್ವರ್ಣ್ಯ ವ್ಯವಸ್ಥೆ ಮಾಡಲಾಗಿದೆ ಎಂದಿದೆ ಗೀತೆ. ಇದು ಹುಟ್ಟಿನಿಂದ ಅಳೆಯುವ ಜಾತಿಪದ್ಧತಿಯಲ್ಲ. ಆದರೆ ಮುಂದೆ ಇದು ಜಾತಿ ಆಗಿ ವ್ಯವಸ್ಥೆ ತಪ್ಪಿತು. ಬಡಿಗತನ ಮಾಡದವನೂ ಬಡಿಗನ ಮಗ ಬಡಿಗ!

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ ಸ್ತ್ರಿಯಾ ವೈಶ್ಯಾಸ್ತಥಾ ಶೂದ್ರಾಃ ತೇಪಿ ಯಾಂತಿ ಪರಾಂ ಗತಿಂ. = ನನ್ನನ್ನು ಆಶ್ರಯಿಸಿ ಪಾಪಯೋನಿಗಳಾದ ಸ್ತ್ರೀಯರು ವೈಶ್ಯರು ಹಾಗೂ ಶೂದ್ರರೂ ಕೂಡಾ ಶ್ರೇಯಸ್ಸನ್ನು ಹೊಂದುತ್ತಾರೆ ಎಂಬುದೂ ಗೀತೆಯ ಮಾತು. ಇದಕ್ಕಾಗಿ ಗೀತೆಗೆ ವಿರೋಧ. ಆದರೆ ಗೀತೆಯಲ್ಲಿ ಈ ಎರಡೇ ಶ್ಲೋಕಗಳಿಲ್ಲ. ಒಟ್ಟು 700 ಶ್ಲೋಕಗಳಿವೆ. ಇನ್ನೆಲ್ಲೂ ಇಂಥ ಮಾತಿಲ್ಲ. ಎಲ್ಲವೂ ಉಪಯುಕ್ತ. ಆ ಎರಡು ಮಾತನ್ನು ವಿರೋಧಿಸೋಣ, ಉಪಯುಕ್ತವನ್ನು ಅನುಸರಿಸೋಣ!

## ರಸ್ತೆಗುಂಡಿ, ಕಸದ ಸಮಸ್ಯೆ ಬಗ್ಗೆ ಬಿಜೆಪಿ 2ನೇ ಹಂತದ ಅಭಿಯಾನ: ಡೇಂಜರ್ ಚಿತ್ರ ಬಿಡಿಸಿದ ಅಶೋಕ್

• ಉದಯವಾಹಿನಿ, ಬೆಂಗಳೂರು

ರಸ್ತೆಗುಂಡಿ, ಕಸದ ಬಗ್ಗೆ ಬಿಜೆಪಿ ಎರಡನೇ ಹಂತದ ಅಭಿಯಾನವನ್ನ ಕೈಗೊಂಡಿದೆ. ರಸ್ತೆ ಗುಂಡಿ ಮುಚ್ಚದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಂಗಳೂರಿನಲ್ಲಿ ಬಿಜೆಪಿ ಮತ್ತೆ ಅಭಿಯಾನ ನಡೆಸುತ್ತಿದೆ.

ಬೆಂಗಳೂರಿನ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ನಾಯಕರು ರಸ್ತೆ ಗುಂಡಿ ವಿರುದ್ಧ ವಿಭಿನ್ನವಾಗಿ ಅಭಿಯಾನ ಕೈಗೊಂಡರು. ರಸ್ತೆಗುಂಡಿ ಬಿದ್ದಿರುವ ಜಾಗದಲ್ಲಿ ಡೇಂಜರ್ ಎಂಬ ಚಿತ್ರವನ್ನ ಬಿಡಿಸಿ ಸರ್ಕಾರವನ್ನ ಎಚ್ಚರಿಸುವಂತಹ ಕೆಲಸ ಮಾಡಿದ್ದಾರೆ. ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ 400ಕ್ಕೂ ಹೆಚ್ಚು ಗುಂಡಿಗಳು ಇವೆ. ಅದನ್ನ ಮುಚ್ಚುವಂತಹ ಕೆಲಸ ಮಾಡಿಲ್ಲ.



ಉದಯವಾಹಿನಿ ಚಿತ್ರ

ಡೆಡ್ ಲೈನ್ ಮೇಲೆ ಡೆಡ್‌ಲೈನ್ ಕೊಟ್ರು ರಸ್ತೆ ಗುಂಡಿ ಮುಚ್ಚಿಲ್ಲ. ನಾವು ಅಭಿಯಾನವನ್ನ ಕೈಗೊಳ್ಳುತ್ತಾ ಇದ್ದೇವೆ, ಹೋರಾಟ ಮಾಡುತ್ತೇವೆ. ರಸ್ತೆ ಗುಂಡಿ ಮುಚ್ಚದೇ ಕೋಟಿ ಕೋಟಿ ದುಡ್ಡನ್ನ ಬಿಡುಗಡೆ ಮಾಡಿದ್ದೀವಿ ಅಂತಾರೆ.

ಬಿಡುಗಡೆ ಮಾಡಿರೋ ದುಡ್ಡು ಎಲ್ಲಿ ಹೋಯ್ತು? ಯಾಕೆ ಗುಂಡಿ ಮುಚ್ಚಿಲ್ಲ ಎಂದು ಅಶೋಕ್ ಸರ್ಕಾರವನ್ನ ಪ್ರಶ್ನಿಸಿದ್ದಾರೆ. ರಸ್ತೆಗುಂಡಿ ಮುಚ್ಚದೆಯೇ ಸಿಂಗಲ್ ಲೇಯರ್ ಡಾಂಬರೀಕರಣ ಮಾಡುತ್ತೇವೆ ಅಂತಾರೆ. ಮೊದಲು ಗುಂಡಿ ಮುಚ್ಚಿ ಸಿಂಗಲ್ ಲೇಯರ್ ಡಾಂಬರೀಕರಣದಲ್ಲೂ ದುಡ್ಡು ಹೊಡೆಯೋಕೆ ಪ್ಲ್ಯಾನ್ ಮಾಡಿದ್ದಾರೆ.

ಇನ್ನೂ ಟ್ಯಾಕ್ಸ್ ಕಟ್ಟುವವರ ಮನೆ ಮುಂದೆ ಕಸ ಸುರಿಯೋದು ಎಷ್ಟು ಸರಿ ಅಂತಾ ಆರ್.ಅಶೋಕ್ ಪ್ರಶ್ನೆ ಮಾಡಿದ್ದಾರೆ.

ರಸ್ತೆ ಗುಂಡಿ ಕಸದ ಅಭಿಯಾನದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಮತ್ತು ಸಂಸದ ಪಿಸಿ ಮೋಹನ್, ಶಾಸಕ ರಾಮಮೂರ್ತಿ ಭಾಗವಹಿಸಿ ಸರ್ಕಾರವನ್ನ ಎಚ್ಚರಿಸಿದ್ದಾರೆ.


## ದುಬಾರಿ ಶುಲ್ಕದಿಂದ ಎ-ಖಾತಾಗೆ ಹಿಂದೇಟು, ಕೇವಲ 2, ಸಾವಿರ ಅರ್ಜಿ ಸಲ್ಲಿಕೆ

### ಮಾಲೀಕರಿಂದ ಸಿಕ್ಕಿಲ್ಲ ನಿರೀಕ್ಷಿತ ಸ್ಪಂದನೆ, ಅಧಿಕಾರಿಗಳ ವಿಳಂಬದಿಂದಲೂ ನಡೆದಿಲ್ಲ ಹಂಚಿಕೆ

• ಉದಯವಾಹಿನಿ, ಬೆಂಗಳೂರು

ಮಹಾನಗರದಲ್ಲಿ ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸಲು ನ.1ರಿಂದ ಕೈಗೊಂಡಿರುವ 100 ದಿನಗಳ ಅಭಿಯಾನಕ್ಕೆ ಮಾಲೀಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಗರ ಪಾಲಿಕೆಗಳು ಈವರೆಗೆ ಒಂದೇ ಒಂದು ಬಿ-ಖಾತಾ ಆಸ್ತಿಗೆ ಎ-ಖಾತಾ ನೀಡಿಲ್ಲ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸುಮಾರು 7.50 ಲಕ್ಷ ಬಿ-ಖಾತಾ ಆಸ್ತಿಗಳಿವೆ. ಆದರೆ, ನ.1ರಿಂದ ಈವರೆಗೆ 2 ಸಾವಿರ ಮಂದಿ ಆಸ್ತಿ ಮಾಲೀಕರಷ್ಟೇ ಎ-ಖಾತಾ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಈವರೆಗೆ ಒಬ್ಬರಿಗೂ ಎ-ಖಾತಾ ಭಾಗ್ಯ ಸಿಕ್ಕಿಲ್ಲ.

ರಾಜಧಾನಿಯಲ್ಲಿ ಎ-ಖಾತಾ ಆಸ್ತಿಗಳಿಗೆ ಹೋಲಿಸಿದರೆ ಬಿ-ಖಾತಾ ಸ್ವತ್ತುಗಳ ಮಾರುಕಟ್ಟೆ ಮೌಲ್ಯ ತುಂಬಾ ಕಡಿಮೆ ಇದೆ. ಅಲ್ಲದೆ, ಸಾಲ ಸೌಲಭ್ಯವೂ ದೊರಕುವುದಿಲ್ಲ. ನಕ್ಷೆ ಮಂಜೂರಾತಿ ಕೂಡ ಸಿಗುವುದಿಲ್ಲ. ಹೀಗಾಗಿಯೇ, ಲಕ್ಷಾಂತರ ಬಿ-ಖಾತಾ ಸ್ವತ್ತುಗಳ ಮಾಲೀಕರು ಎ-ಖಾತಾಗೆ ಹಲವು ವರ್ಷಗಳಿಂದ ಚಾತಕ ಪಕ್ಷಿಗಳಂತೆ ಕಾಯುತ್ತಲೇ ಇದ್ದರು. ಈ ನಿಟ್ಟಿನಲ್ಲಿ ರಾಜ್ಯ ಸರಕಾರವೂ ಅಕ್ರಮ-ಸಕ್ರಮವನ್ನು ಬದಿಗೊತ್ತಿ ಬಿ-ಖಾತಾ ಆಸ್ತಿಗಳನ್ನು ಎ-ಖಾತಾಗಳಾಗಿ ಪರಿವರ್ತಿಸುವುದಾಗಿ ಘೋಷಿಸಿದೆ. ಆದರೆ, ಈ ಪ್ರಕ್ರಿಯೆಗೆ ಚುರುಕು ಸಿಕ್ಕಿಲ್ಲ. ಪಾಲಿಕೆ ಅಧಿಕಾರಿಗಳು ಕೂಡ ಎ-ಖಾತಾ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುತ್ತಿಲ್ಲ. ಅಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ, ಮತ್ತು ಸಂಬಂಧಪಟ್ಟ ಆಸ್ತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಆ ಸ್ವತ್ತಿನ ಮುಂಭಾಗದಲ್ಲಿ ಮಾಲೀಕನನ್ನು ನಿಲ್ಲಿಸಿ ಫೋಟೋ, ವಿಡಿಯೋ ಚಿತ್ರೀಕರಿಸಿ ಅಪ್‌ಲೋಡ್ ಮಾಡಬೇಕು. ಆದರೆ, 2 ಸಾವಿರ ಅರ್ಜಿಗಳ ಪೈಕಿ ಒಂದೇ ಒಂದು ಆಸ್ತಿಗೂ ಎ-ಖಾತಾ ವಿತರಿಸಿಲ್ಲ. ಸರಕಾರಿ ಜಾಗ, ಪಿಟಿಸಿಎಲ್ ಪ್ರಕರಣಗಳ ಆಸ್ತಿಗಳು, 94 ಸಿ ಸೇರಿದಂತೆ ಇತರೆ ಪ್ರಕರಣಗಳ ಆಸ್ತಿಗಳಿಗೆ ಎ-ಖಾತಾ ನೀಡುತ್ತಿಲ್ಲ.




ನಗರದಲ್ಲಿ 25 ಲಕ್ಷ ಆಸ್ತಿಗಳಿದ್ದು, 7.50 ಲಕ್ಷ ಆಸ್ತಿಗಳು ಬಿ-ಖಾತೆ ಹೊಂದಿವೆ. ಕಂದಾಯ ಜಮೀನಿನಲ್ಲಿ ನಿರ್ಮಾಣವಾಗಿರುವ ಎಲ್ಲಾ ಬಡಾವಣೆಗಳ ರಸ್ತೆಗಳನ್ನು ಸರಕಾರಿ ರಸ್ತೆಗಳೆಂದು ಘೋಷಿಸಬೇಕಿದೆ. ಆಗ ಮಾತ್ರ ಬಿ-ಖಾತಾ ಆಸ್ತಿಗಳಿಗೆ ಎ-ಖಾತಾ ದೊರೆಯುತ್ತದೆ. ಏಕ ನಿವೇಶನದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿ, ಜಿಬಿಎ ಕಾಯಿದೆ ಉಲ್ಲಂಘಿಸಿದ್ದರೆ, ಅಂತಹ ಆಸ್ತಿಗಳಿಗೆ ಎ-ಖಾತಾ ನೀಡಲು ಅವಕಾಶವಿದೆ. ಆದರೆ, ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಬಹುಮಹಡಿ ಕಟ್ಟಡ ನಿರ್ಮಿಸಿದರೆ, ಅಂತಹ ಆಸ್ತಿಗಳಿಗೆ ಎ-ಖಾತಾ ಸಿಗುವುದಿಲ್ಲ. ಭೂ ಪರಿವರ್ತನೆ ಆಗಿದ್ದರೆ ಅಥವಾ ಹೊಸದಾಗಿ ಅನುಮೋದನೆ ಪಡೆದ ಖಾಲಿ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿದರೆ, ಏಕ ವಿನ್ಯಾಸ ನಕ್ಷೆ ಅಥವಾ ಬಡಾವಣೆ ನಕ್ಷೆ ಪಡೆಯಬೇಕು. ನಂತರ ಖಾಲಿ ನಿವೇಶನಗಳಿಗೆ ಎ-ಖಾತಾ ನೀಡಲಾಗುತ್ತದೆ. ಬಹುಮಹಡಿ ಕಟ್ಟಡಗಳಿಗೆ ಅನುಮೋದನೆ ಪಡೆದಿದ್ದರೆ, ಸ್ವಾಧೀನಾನುಭವ ಪ್ರಮಾಣಪತ್ರ ನೀಡಿ ಪ್ರತಿ ಫ್ಲ್ಯಾಟ್‌ಗೆ ಎ-ಖಾತಾ ನೀಡಲಾಗುತ್ತದೆ. ಒಂದು ವೇಳೆ ಬಹು ಮಹಡಿ ಕಟ್ಟಡಗಳು ಅನುಮೋದನೆ ಪಡೆಯದಿದ್ದರೆ, ಅಂತಹ ಫ್ಲ್ಯಾಟ್‌ಗಳಿಗೆ ಗ್ರೇಟರ್ ಬೆಂಗಳೂರು ಕಾಯಿದೆಯಂತೆ ಬಿ-ಖಾತಾ ನೀಡಲಾಗುತ್ತದೆ. ಅಭಿವೃದ್ಧಿದಾರರು ಅಥವಾ ಕಟ್ಟಡ ಮಾಲೀಕರು 2024ರ ಸೆ.30ರ ಮೊದಲು ಫ್ಲ್ಯಾಟ್‌ಗಳನ್ನು ಅಧಿಕೃತವಾಗಿ ನೋಂದಣಿ ಮಾಡಿಕೊಂಡಿದ್ದರೆ, ಮಾಲೀಕರ ಹೆಸರಿನಲ್ಲಿ ಬಿ-ಖಾತಾ ನೀಡಲಾಗುತ್ತದೆ. ಒಂದು ಅಥವಾ ಬಹು ಘಟಕಗಳಿಗೆ ಅಧಿಕೃತ ನೋಂದಾಯಿತ ಪತ್ರ ಹೊಂದಿದ್ದರೆ, ಆ ವ್ಯಕ್ತಿ ಫ್ಲ್ಯಾಟ್‌ಗಳ ನಿರ್ಮಾಣ ಪೂರ್ಣಗೊಳಿಸಿ ಮತ್ತು ಕಟ್ಟಡ ಮಂಜೂರಾತಿಗೆ ಅನುಮೋದನೆ ಕೋರಿ ಅರ್ಜಿ ಸಲ್ಲಿಸಬಹುದು. ಕಟ್ಟಡಕ್ಕೆ ಅನುಮೋದನೆ ದೊರೆತು ಸ್ವಾಧೀನಾನುಭವ ಪ್ರಮಾಣಪತ್ರ ಸಲ್ಲಿಸಿ ಪ್ರತಿ ಫ್ಲ್ಯಾಟ್‌ಗೆ ಎ-ಖಾತಾ ಪಡೆದುಕೊಳ್ಳಬಹುದು.

**ಭೂ ಪರಿವರ್ತನೆ ಬಡಾವಣೆ ನಕ್ಷೆ ಮಂಜೂರಾತಿ**

**ಸಾರ್ವಜನಿಕರು ಎ-ಖಾತಾ ಪಡೆಯಲು ಮಾರ್ಗಸೂಚಿ ಮೌಲ್ಯದ ಶೇ.5ರಷ್ಟು ಶುಲ್ಕ ಪಾವತಿಸಬೇಕಿದೆ. ಅಲ್ಲದೆ, ಭೂ ಪರಿವರ್ತನೆ ಹಾಗೂ ಬಡಾವಣೆ ನಕ್ಷೆ ಮಂಜೂರಾತಿ ಶುಲ್ಕವನ್ನೂ ತೆರಬೇಕಿದೆ. ಪ್ರತಿ ಚ.ಅಡಿಗೆ 10 ಸಾವಿರ ರೂ. ಮಾರ್ಗಸೂಚಿ ಮೌಲ್ಯವಿದ್ದರೆ, 1200 ಚ.ಅಡಿ ವಿಸ್ತೀರ್ಣದ ನಿವೇಶನಕ್ಕೆ ಎ-ಖಾತಾ ಪಡೆಯಲು 6 ಲಕ್ಷ ರೂ. ಶುಲ್ಕ ಪಾವತಿಸಬೇಕಾಗುತ್ತದೆ. ಹೀಗಾಗಿಯೇ, ನಗರದಲ್ಲಿ 7.50 ಲಕ್ಷ ಬಿ-ಖಾತಾ ಸ್ವತ್ತುಗಳಿದ್ದರೂ ಬೆರಳೆಣಿಕೆಯಷ್ಟು ಮಂದಿ ಮಾತ್ರ ಎ-ಖಾತಾ ಅರ್ಜಿ ಸಲ್ಲಿಸಿದ್ದಾರೆ.**

## ಮತ್ತೆ ಶೇ.50ರಷ್ಟು ಟ್ರಾಫಿಕ್ ದಂಡ ರಿಯಾಯಿತಿ ಘೋಷಣೆ

• ಉದಯವಾಹಿನಿ, ಬೆಂಗಳೂರು

ಈ ಹಿಂದೆ ರಾಜ್ಯ ಸರ್ಕಾರ ಜಾರಿಗೆ ತಂದಿದ್ದ ಶೇ.50ರಷ್ಟು ಟ್ರಾಫಿಕ್ ದಂಡ ರಿಯಾಯಿತಿ ಇದೀಗ ಮತ್ತೆ ಜಾರಿಗೆ ತರುವ ಕುರಿತು ರಾಜ್ಯದ ಕಾಂಗ್ರೆಸ್ ಸರ್ಕಾರ ಮಹತ್ತರ ಘೋಷಣೆ ಮಾಡಿದೆ. ಹೌದು..ಸರ್ಕಾರವು ವಾಹನ ಸವಾರರಿಗೆ ಬಾಕಿ ಇರುವ ಸಂಚಾರ ದಂಡದ ಮೇಲೆ ಶೇ.50 ರಿಯಾಯಿತಿ ಘೋಷಿಸಿದೆ. ಈ ಸಂಬಂಧ ರಾಜ್ಯ ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ರಂಗಪ್ಪ ಕರಿಗಾರ ಅವರು ಅಧಿಕೃತ ಆದೇಶ ಹೊರಡಿಸಿದ್ದಾರೆ. ಸಂಚಾರ ದಂಡ ರಿಯಾಯಿತಿ ಕುರಿತಂತೆ ಸಾರಿಗೆ ಇಲಾಖೆ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿದ ಬಳಿಕ, ಸರ್ಕಾರವು ಅದನ್ನು ಅಂಗೀಕರಿಸಿ ತಕ್ಷಣ ಜಾರಿಗೆ ತರಲು ಆದೇಶ ಹೊರಡಿಸಿದೆ. ಕಳೆದ ಬಾರಿ ದಂಡ ರಿಯಾಯಿತಿ ನೀಡಿದಾಗ ಸರ್ಕಾರಕ್ಕೆ ಕೋಟ್ಯಾಂತರ ರೂ. ಆದಾಯ ಹರಿದುಬಂದಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಮತ್ತೊಮ್ಮೆ ಈ ಆಫರ್ ನೀಡಲಾಗಿದ್ದು, ಸರ್ಕಾರದ ಆದೇಶದಂತೆ ರಾಜ್ಯದಾದ್ಯಂತ 50% ದಂಡ ರಿಯಾಯಿತಿ ಯೋಜನೆ ಜಾರಿಗೆ ಬರಲಿದ್ದು, ಈ ವಿಶೇಷ ಅವಕಾಶ ಡಿ 12 ರವರೆಗೆ ಮಾತ್ರ ಲಭ್ಯವಿರಲಿದೆ. ಚಾಲಕರು ಈ ಅವಧಿಯೊಳಗೆ ತಮ್ಮ ಬಾಕಿ ಇರುವ ಸಂಚಾರ ದಂಡಗಳನ್ನು 50% ರಿಯಾಯಿತಿಯಲ್ಲಿ ಪಾವತಿಸಬಹುದು.

**ಯಾವಾಗಿಂದ ಜಾರಿ:** ಶೇ.50ರಷ್ಟು ದಂಡ ರಿಯಾಯಿತಿ ಸೌಲಭ್ಯವು ಅಂದರೆ ನವೆಂಬರ್ 21 ರಿಂದ ಡಿಸೆಂಬರ್ 12 ರವರೆಗೆ ಜಾರಿಯಲ್ಲಿರಲಿದ್ದು, ಈ ಅವಧಿಯಲ್ಲಿ ಚಾಲಕರು ತಮ್ಮ ಬಾಕಿ ದಂಡವನ್ನು ಅರ್ಧ ಮೊತ್ತಕ್ಕೆ ಪಾವತಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು. ಎಲ್ಲೆಲ್ಲಿ ದಂಡ ಕಟ್ಟಬಹುದು?: ದಂಡ ಪಾವತಿ ಉಳಿಸಿಕೊಂಡಿರುವ ವಾಹನ ಸವಾರರು ಬೆಂಗಳೂರಿನಲ್ಲಿ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ, ಕರ್ನಾಟಕ ಒನ್ ಬೆಂಗಳೂರು ಒನ್ ವೆಬ್‌ಸೈಟ್‌ಗಳಲ್ಲಿ ವಿವರ ಪಡೆದು ಪಾವತಿಸಬಹುದು

## ಗೋಮಾಳ ಜಮೀನು ಕಬಳಿಸಿ ಮನೆ ಕಟ್ಟಿದ ಆರೋಪ: ಆರೋಪಿಗೆ ಒಂದು ವರ್ಷ ಶಿಕ್ಷೆ

• ಉದಯವಾಹಿನಿ, ಬೆಂಗಳೂರು

ಗೋಮಾಳ ಜಮೀನು ಕಬಳಿಸಿ ಮನೆ ಕಟ್ಟಿದ ಆರೋಪ ಸಾಬೀತಾದ ಕಾರಣ ಮೈಲನಹಳ್ಳಿ ಗ್ರಾಮದ ನಿವಾಸಿ ಚೌಡಪ್ಪ ಅವರಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಒಂದು ವರ್ಷ ಸಾದಾ ಶಿಕ್ಷೆ ಹಾಗೂ ರೂ.5 ಸಾವಿರ ದಂಡ ವಿಧಿಸಿದೆ.ಬೆಂಗಳೂರು ಉತ್ತರ ತಾಲ್ಲೂಕಿನ ಜಾಲಹಳ್ಳಿ ಹೋಬಳಿಯ ಮೈಲನಹಳ್ಳಿ ಗ್ರಾಮದ ಸರ್ವೆ ನಂ. 20ರ ಗೋಮಾಳ ಜಮೀನಿನಲ್ಲಿ 107 X 56 ಅಡಿ ಜಾಗವನ್ನು ಚೌಡಪ್ಪ ಅವರು ಒತ್ತುವರಿ ಮಾಡಿ. ಮನೆ ನಿರ್ಮಿಸಿದ್ದರು. ಈ ಸಂಬಂಧ ತಹಶೀಲ್ದಾರ್ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಸಾಕ್ಷ್ಯಗಳ ವಿಚಾರಣೆ ನಡೆಸಿದ ನ್ಯಾಯಾಲಯ, ಭೂ ಕಬಳಿಕೆ ಮಾಡಿರುವುದು ಸಾಬೀತಾದ ಕಾರಣ ಜೈಲು ಶಿಕ್ಷೆ ಹಾಗೂ ಐದು ಸಾವಿರ ರೂಪಾಯಿ ದಂಡ ವಿಧಿಸಿದೆ. ದಂಡ ಪಾವತಿಸಲು ತಪ್ಪಿದ್ದಲ್ಲಿ 3 ತಿಂಗಳ ಸಾದಾ ಶಿಕ್ಷೆ ವಿಧಿಸಿ 2ನೇ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯರಾದ ಪಾಟೀಲ ನಾಗಲಿಂಗನಗೌಡ, ಕಂದಾಯ ಸದಸ್ಯ ಕೆ.ಎಚ್.ಅಶ್ವತ್ಥ ನಾರಾಯಣಗೌಡ ಅವರಿದ್ದ ಪೀಠ ತೀರ್ಪು ನೀಡಿದೆ.

## ಯಕ್ಷಪ್ರಶ್ನೆ ಧಾರ್ಮಿಕ ಪ್ರವಚನ

• ಉದಯವಾಹಿನಿ, ಬೆಂಗಳೂರು



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ನವೆಂಬರ್ 22 ರಿಂದ 30ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ಚಂದ್ರಶೇಖರ ಆಚಾರ್ಯರಿಂದ ಯಕ್ಷಪ್ರಶ್ನೆ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

**ಸ್ಥಳ :** ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

## ಉತ್ತರ ಕರ್ನಾಟಕ ಸಮಸ್ಯೆ ಚರ್ಚೆಗೆ ಬಿಜೆಪಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ಡಿಸೆಂಬರ್ 8 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನ ಆರಂಭವಾಗಲಿದ್ದು, ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ವಿವರವಾದ ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಆಗ್ರಹಿಸಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ವಿವರವಾದ ಚರ್ಚೆಗೆ ಅವಕಾಶ ನೀಡುವಂತೆ ವಿಧಾನ ಪರಿಷತ್ ಅಧ್ಯಕ್ಷ ಬಸವರಾಜ ಹೊರಟ್ಟಿ ಅವರಿಗೆ ಮನವಿ ಮಾಡಿದ್ದಾರೆ.

ಅಧಿವೇಶನದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಬಾಕಿ ಇರುವ ನೀರಾವರಿ ಯೋಜನೆಗಳು, ಉದ್ಯೋಗ ಸೃಷ್ಟಿ ಮತ್ತು ಉತ್ತರ ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಬೇಕು ಎಂದು ಹೇಳಿದ್ದಾರೆ.

ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯಕ್ಕಾಗಿ ಶಾಸಕ ರಾಜು ಕಾಗೆ ಅವರ ಬೇಡಿಕೆ ಕುರಿತು ಪ್ರತಿಕ್ರಿಯಿಸಿ,



ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರವು ಈ ಪ್ರದೇಶದ ಜನರ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿರುವುದೇ ಇಂತಹ ಬೇಡಿಕೆಗಳಿಗೆ ಕಾರಣ ಎಂದು ಕಿಡಿಕಾರಿದರು.

ಇದೇ ವೇಳೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಮಾದರಿಯಲ್ಲಿ ಕಿತ್ತೂರು ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಮಂಡಳಿಯನ್ನು ರಚಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಜನತಾದಳ (ಜಾತ್ಯತೀತ) ದೊಂದಿಗೆ ಬಿಜೆಪಿ ಈ ಸಮಸ್ಯೆಯ ಕುರಿತು ಅಧಿವೇಶನದಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಲಿದೆ ಎಂದು ತಿಳಿಸಿದರು.

## ಹಣ ದುರ್ಬಳಕೆ ಕ್ರಮಕ್ಕೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸೂಚನೆ

• ಉದಯವಾಹಿನಿ, ಬೆಂಗಳೂರು

ಜಲ ಮಂಡಳಿ ಹಾಗೂ ಪೌರಾಡಳಿತ ಇಲಾಖೆಗೆ ಅಮೃತ್ ಯೋಜನೆಯಡಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ ಕೋಟ್ಯಂತರ ಹಣದ ದುರ್ಬಳಕೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಪತ್ರ ಬರೆದಿರುವುದು ಗೊತ್ತಾಗಿದೆ.



ಕಳೆದ 2 ವರ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ ಹಾಗೂ ಪೌರಾಡಳಿತ ಇಲಾಖೆಗೆ ಕೇಂದ್ರ ಸರ್ಕಾರವೂ ಅಮೃತ್ ಯೋಜನೆಯ ಅಡಿಯಲ್ಲಿ 17,000 ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತವನ್ನು ಮಂಜೂರು ಮಾಡಿತ್ತು.

ಕೇಂದ್ರ ಸರ್ಕಾರ ಮಂಜೂರು ಮಾಡಿದ್ದ 17 ಸಾವಿರ ಕೊಟಿ ರೂ.ಗಳ ಪೈಕಿ ಶೇ. 50 ಕ್ಕೂ ಹೆಚ್ಚು ಮೊತ್ತವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ನಾಯಕ ಎನ್. ಆರ್.ರಮೇಶ್ ಅವರು ಗಂಭೀರ ಆರೋಪ ಮಾಡಿದ್ದರು.ಮಾತ್ರವಲ್ಲ, ಈ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮತ್ತು ಲೋಕಾಯುಕ್ತದಲ್ಲಿ ದೂರುಗಳನ್ನು ದಾಖಲಿಸಿದ್ದರು.

ಅಲ್ಲದೇ, ಸಂಪೂರ್ಣ ದಾಖಲೆಗಳೊಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರದ ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗೂ ಸಹ ದೂರು ನೀಡಿದ್ದರು.

ಹಾಗೆಯೇ, ಕೇಂದ್ರದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಸಚಿವಾಲಯದ ಕಾರ್ಯದರ್ಶಿಗಳೂ ಸಹ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಈ ಬಗ್ಗೆ ಪತ್ರವನ್ನು ಬರೆದು ಕೂಡಲೇ ಈ ಹಗರಣಕ್ಕೆ ಸಂಬಂಧಿಸಿದ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಿರುತ್ತಾರೆ ಎಂದು ತಿಳಿದುಬಂದಿದೆ.

**ನಾನು ತಲುಪಿಸಿದ್ದ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಿರುವ ಪ್ರಧಾನ ಮಂತ್ರಿಗಳ ಕಚೇರಿಯ ಸೂಚನೆಯಂತೆ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ಸಾರ್ವಜನಿಕ ಕುಂದುಕೊರತೆ ಇಲಾಖೆಯ ಅಧೀನ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು, ಸಂಬಂಧಪಟ್ಟ ಹಗರಣಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆದೇಶಿಸಿದ್ದಾರೆ ಎಂದು ರಮೇಶ್ ಮಾಧ್ಯಮದವರಿಗೆ ಮಾಹಿತಿ ನೀಡಿದ್ದಾರೆ.**

## 7 ಕೋಟಿ 11 ಲಕ್ಷ ರೂ. ಎಟಿಎಂ ಹಣ ದರೋಡೆ ಕೇಸ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ 7 ಕೋಟಿ 11 ಲಕ್ಷ ರೂಪಾಯಿಗಳ ಎಟಿಎಂ ಹಣ ದರೋಡೆ ಪ್ರಕರಣದ ತನಿಖೆ ಒಂದೆಡೆ ತೀವ್ರಗೊಂಡಿದ್ದು ಮತ್ತು ಇಡೀ ಕೇಸ್‌ಗೆ ಹೊಸ ತಿರುವು ಸಿಕ್ಕಿದೆ. ದರೋಡೆಯ ಮಾಸ್ಟರ್ ಮೈಂಡ್ ಪೊಲೀಸ್ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯ್ಕ್ ಎಂದು ತಿಳಿದು ಬಂದಿದೆ. ಜೊತೆಗೆ, ತನಿಖೆಯಲ್ಲಿ ಸಿಎಂಎಸ್ ಕಂಪನಿಯ ಮಾಜಿ ಉದ್ಯೋಗಿ ಝೇವಿಯರ್ ಕೂಡ ಈ ಕೃತ್ಯದಲ್ಲಿ ಭಾಗಿಯಾಗಿದ್ದ ಎಂಬುದು ಬಯಲಾಗಿದೆ ಇಬ್ಬರನ್ನೂ ಪೊಲೀಸರು ಬಂಧಿಸಿದ್ದಾರೆ.

**ಕಾನ್‌ಸ್ಟೇಬಲ್ ಲಾಕ್:** ದಕ್ಷಿಣ ವಿಭಾಗದ ಪೊಲೀಸರು ಗೋವಿಂದಪುರ ಠಾಣೆಯಲ್ಲಿ ಕಾನ್‌ಸ್ಟೇಬಲ್ ಆಗಿರುವ ಅಣ್ಣಪ್ಪ ನಾಯ್ಕ್‌ನನ್ನು ಬಂಧಿಸಿದ್ದಾರೆ. ಈತನೇ ದರೋಡೆಯ ಪ್ರಮುಖ ಮಾಸ್ಟರ್ ಮೈಂಡ್ ಎಂದು ಹೇಳಲಾಗುತ್ತಿದೆ. ಆದರೆ, ಪ್ರಕರಣದ ತನಿಖೆ ಮುಂದುವರೆದಂತೆ,




ಉದಯವಾಹಿನಿ ಚಿತ್ರ

ಸಿಎಂಎಸ್ ಕಂಪನಿಯಲ್ಲಿ ಹಿಂದೆ ಕೆಲಸ ಮಾಡಿದ್ದ ಝೇವಿಯರ್ ಎಂಬಾತನೂ ಈ ದರೋಡೆಗೆ ಸಹಕರಿಸಿದ್ದ ಎಂಬುದು ಬೆಳಕಿಗೆ ಬಂದಿದೆ.

ಝೇವಿಯರ್ ಸುಮಾರು ಒಂದು ವರ್ಷದ ಹಿಂದೆ ಸಿಎಂಎಸ್ ಕಂಪನಿಯಿಂದ ಕೆಲಸ ಬಿಟ್ಟಿದ್ದ. ಯಾರು ಈ ಅಣ್ಣಪ್ಪ ನಾಯ್ಕ್ ಎಂದು ನೋಡುವುದಾದರೆ, ಬಾಣಸವಾಡಿಯಲ್ಲಿ ಕ್ರೈಂ ಬೀಟ್ ಮಾಡುತ್ತಿದ್ದ ಕಾನ್‌ಸ್ಟೇಬಲ್ ಅಣ್ಣಪ್ಪನನ್ನು ಹೊಯ್ಸಳ ವಿಭಾಗಕ್ಕೆ ವರ್ಗಾಯಿಸಲಾಗಿತ್ತು. ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದ ಅಣ್ಣಪ್ಪ ಮತ್ತು ಝೇವಿಯರ್ ಪ್ರತಿದಿನ ಭೇಟಿಯಾಗುತ್ತಿದ್ದರು. ಈ ವೇಳೆ, ಝೇವಿಯರ್ ಸಿಎಂಎಸ್ ಕಂಪನಿಯ ಹಣ ಸಾಗಾಟದ ಬಗ್ಗೆ ಅಣ್ಣಪ್ಪನಿಗೆಲ್ಲಾ ಮಾಹಿತಿ ನೀಡುತ್ತಿದ್ದ.

### ರೂಟ್ ಮ್ಯಾಪ್ ಸಿದ್ಧ

**ಅವರ ಯೋಜನೆಯಂತೆ, ಹಣ ಸಾಗಿಸುತ್ತಿದ್ದ ವಾಹನವನ್ನು ಅಡ್ಡಗಟ್ಟಿ 7 ಕೋಟಿ 11 ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿ ಪರಾರಿಯಾಗಿದ್ದಾರೆ. ಆದರೆ, ದರೋಡೆ ನಡೆದಾಗ, ಪ್ರಮುಖ ಆರೋಪಿಗಳಾದ ಝೇವಿಯರ್ ಮತ್ತು ಅಣ್ಣಪ್ಪ ಇಬ್ಬರೂ ಸ್ಥಳದಲ್ಲಿ ಇರಲಿಲ್ಲ. ಬದಲಾಗಿ, ದರೋಡೆಯನ್ನು ಹೇಗೆ ಮಾಡಬೇಕು, ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಸಂಪೂರ್ಣ ರೂಟ್ ಮ್ಯಾಪ್ ಅನ್ನು ತಯಾರಿಸಿ, ದೂರದಿಂದಲೇ ಎಲ್ಲವನ್ನೂ ನಿಯಂತ್ರಿಸಿದ್ದರು ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.**

## ನಿಮ್ಮ ಹಣ, ನಿಮ್ಮ ಹಕ್ಕು ಅಭಿಯಾನ

• ಉದಯವಾಹಿನಿ, ಬೆಂಗಳೂರು

ನಗರದ ಬನಶಂಕರಿಯಲ್ಲಿರುವ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಲೀಡ್ ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬ್ಯಾಂಕ್‌ಗಳಲ್ಲಿನ ದೀರ್ಘಕಾಲದಿಂದ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿ ವಿಮೆ ಕಂತು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನು ಬದ್ಧ ವಾರಸುದಾರರಿಗೆ ಹಸ್ತಾಂತರಿಸಲು ನಿಮ್ಮ ಹಣ -ನಿಮ್ಮ ಹಕ್ಕು ಅಭಿಯಾನ ಕಾರ್ಯಕ್ರಮ ಕ್ಕೆ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಾದ ಯತೀಶ್. ಆರ್ ಅವರು ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಬ್ಯಾಂಕ್‌ಗಳಲ್ಲಿನ ದೀರ್ಘಕಾಲದಿಂದ ಹಕ್ಕು ಪಡೆಯದೆ ಉಳಿದಿರುವ ಬ್ಯಾಂಕ್ ಠೇವಣಿ ವಿಮೆ ಕಂತು ಮತ್ತು ಷೇರುಗಳನ್ನು ಅವುಗಳ ಮಾಲೀಕರಿಗೆ ಮತ್ತು ಕಾನೂನು ಬದ್ಧ ವಾರಸುದಾರರಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ




ಉದಯವಾಹಿನಿ ಚಿತ್ರ

ಕಾರ್ಯನಿರ್ವಾಹಕಾಧಿಕಾರಿಗಳಾದ ಯತೀಶ್.ಆರ್ ಅವರು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ರಿಸರ್ವ ಬ್ಯಾಂಕ್ ಪ್ರಾಂತೀಯ ನಿರ್ದೇಶಕಾರದ ಕಾಯಾ ತ್ರಿಪಾಠಿ ಹಾಗೂ ಕೆನರಾ ಬ್ಯಾಂಕಿನ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಭಾವೇಂದ್ರ ಕುಮಾರ ಬೆಂಗಳೂರು ನಗರ ಜಿಲ್ಲೆಯ ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಸತೀಶ್.ಕೆ ಸೇರಿದಂತೆ ಇತರೆ ಬ್ಯಾಂಕ್‌ಗಳು ಅಧಿಕಾರಿಗಳು ಇದರ ಬ್ಯಾಂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೆಕ್ಕೆಜೋಳ ಬೆಳೆಗಾರರಿಗೆ ಸರ್ಕಾರ ಎಲ್ಲಾ ರೀತಿಯ ನೆರವು

### ● ಮೆಕ್ಕೆಜೋಳದ ಖರೀದಿ ಪ್ರಮಾಣವೂ ಕಡಿಮೆಯಾಗಿದೆ ಎಂಬ ಅಭಿಪ್ರಾಯ ಸಿಎಂ ನೇತೃತ್ವದಲ್ಲಿ ನಡೆದ ಸಭೆ

• ಉದಯವಾಹಿನಿ, ಬೆಂಗಳೂರು

ಉತ್ತರ ಕರ್ನಾಟಕದ ಮೆಕ್ಕೆಜೋಳ ರೈತರು ನಡೆಸುತ್ತಿರುವ ಪ್ರತಿಭಟನೆ ಮತ್ತು ಮೆಕ್ಕೆ ಜೋಳ ಖರೀದಿ ಕೇಂದ್ರ ತೆರೆಯಲು ರೈತರು ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ನಿವಾಸದಲ್ಲಿ ಸಭೆ ನಡೆಸಿದರು.

ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲು ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿ ಮಾಡಿರುವ ಕೋಟಾ ಪ್ರಮಾಣ ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಖರೀದಿದಾರರಿಂದ ಮೆಕ್ಕೆಜೋಳದ ಖರೀದಿ ಪ್ರಮಾಣವೂ ಕಡಿಮೆಯಾಗಿದೆ ಎಂಬ ಅಭಿಪ್ರಾಯ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವ್ಯಕ್ತವಾಯಿತು.

**ಸಭೆಯಲ್ಲಿ ಪ್ರಸ್ತಾಪವಾದ ಪ್ರಮುಖ ವಿಷಯಗಳು:** ಒಂದು ಕಡೆ ರಾಜ್ಯದಲ್ಲಿ ಮತ್ತು ದೇಶದಲ್ಲಿ ಮೆಕ್ಕೆಜೋಳ ಉತ್ಪಾದನೆ ಹೆಚ್ಚಳವಾಗಿದೆ. ಈ ಬಗ್ಗೆ ಮಾಹಿತಿ ಇದ್ದೂ ಕೂಡ ಕೇಂದ್ರ ಸರ್ಕಾರ ವಿದೇಶಗಳಿಂದ 70 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಆಮದು ಮಾಡಿಕೊಂಡಿದೆ. ಇದರಿಂದಾಗಿ ರಾಜ್ಯದ ಮತ್ತು ದೇಶದ ಮೆಕ್ಕೆಜೋಳ ಬೆಳೆದ ರೈತರಿಗೆ ವಿಪರೀತ ಹೊರೆ ಆಗಿದೆ. ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದಿಸಲು ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿ ಮಾಡಿರುವ ಕೋಟಾ ಪ್ರಮಾಣವೂ ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಡಿಸ್ಟಿಲರಿಗಳು ಮೆಕ್ಕೆಜೋಳ ಖರೀದಿಸುವ ಪ್ರಮಾಣವೂ ಕಡಿಮೆ ಆಗಿದೆ.

**ನಿಯಮ ಪಾಲಿಸದ ಏಜೆನ್ಸಿಗಳಿಂದ ಸಮಸ್ಯೆ:** ಕೇಂದ್ರದ ನೋಡಲ್ ಏಜೆನ್ಸಿಗಳಾದ ನಾಫೆಡ್/ ಎನ್‌ಸಿಸಿಎಫ್ ಮೂಲಕ ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆ ಜೋಳ ಸಂಗ್ರಹಣೆ ಮತ್ತು ಎಥೆನಾಲ್ ಉತ್ಪಾದನೆಗೆ ಬಳಕೆಗಾಗಿ ಈಗಾಗಲೇ ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಆದರೆ ಸಂಬಂಧಪಟ್ಟ ನೋಡಲ್ ಏಜೆನ್ಸಿಗಳು ಮಾರ್ಗಸೂಚಿಯಂತೆ ಇನ್ನೂ ಖರೀದಿ ಪ್ರಕ್ರಿಯೆಯನ್ನೇ ಆರಂಭಿಸಿಲ್ಲ. ಇದು ಸಮಸ್ಯೆ ಬಿಗಡಾಯಿಸಲು ಮುಖ್ಯ ಕಾರಣ. ಡಿಸ್ಟಿಲರಿಗಳು ಮೆಕ್ಕೆಜೋಳ ಬೆಲೆ ಕಡಿಮೆ ಇದ್ದಾಗಲೇ ಹಿಂದೆಯೇ ಖರೀದಿಸಿ ಶೇಖರಣೆ ಮಾಡಿಕೊಂಡಿವೆ. ಇದರಿಂದಾಗಿ ಈಗ ಖರೀದಿಗೆ ಮುಂದೆ ಬರುತ್ತಿಲ್ಲ. ಇದು ಸ್ಪಷ್ಟ ನಿಯಮ ಉಲ್ಲಂಘನೆಯಾಗಿದ್ದು ಡಿಸ್ಟಿಲರಿಗಳು ನಿಯಮಾನುಸಾರ ಮೆಕ್ಕೆ ಖರೀದಿಗೆ ಮುಂದೆ ಬರಬೇಕಿದೆ.

**ನಿಯಮ ಪಾಲಿಸದ ಏಜೆನ್ಸಿಗಳಿಂದ ಸಮಸ್ಯೆ**



### ರಾಜ್ಯ ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಸಲಹೆಗಳು

- ಮೆಕ್ಕೆ ಜೋಳ ಆಮದು ಮೇಲೆ ಕೇಂದ್ರ ಸರ್ಕಾರ ತಕ್ಷಣ ನಿಯಂತ್ರಣ ಹೇರುವ ಮೂಲಕ ಬೆಲೆಯಲ್ಲಿ ಸ್ಥಿರತೆ ಸಾಧಿಸಲು ಸಾಧ್ಯವಿದೆ. ಈ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು.
- ಸದ್ಯಕ್ಕೆ 8ಲಕ್ಷ ಟನ್ ಮೆಕ್ಕೆಜೋಳವನ್ನು ತಕ್ಷಣ ಖರೀದಿಸಲು ಸದರಿ ಏಜೆನ್ಸಿಗಳು ಕ್ರಮ ಕೈಗೊಳ್ಳಲು ಒತ್ತಾಯಿಸುವುದು.
- ಖರೀದಿ ಕೇಂದ್ರಗಳನ್ನು ನಾಫೆಡ್ / ಎನ್‌ಸಿಸಿಎಫ್ ಇನ್ನೂ ಆರಂಭಿಸದಿರುವುದರಿಂದ ತೊಂದರೆಯಾಗಿದ್ದು, ಮಾರುಕಟ್ಟೆಯಲ್ಲಿ ಧಾರಣೆಯನ್ನು ಸ್ಥಿರಗೊಳಿಸಲು ತಕ್ಷಣ ಖರೀದಿ ಪ್ರಾರಂಭಿಸುವಂತೆ ಒತ್ತಾಯಿಸುವುದು.

### ಮುಖ್ಯಮಂತ್ರಿಗಳ ಸೂಚನೆ

- ಬೆಲೆ ಕುಸಿತದಿಂದ ಸಂಕಷ್ಟ ಎದುರಿಸುತ್ತಿರುವ ರಾಜ್ಯದ ಮೆಕ್ಕೆಜೋಳ ರೈತರ ನೆರವಿಗೆ ಸರ್ಕಾರ ಎಲ್ಲಾ ರೀತಿಯ ನೆರವು ಒದಗಿಸಲಿದೆ.
- 70ಲಕ್ಷ ಮೆ. ಟನ್ ಮೆಕ್ಕೆ ಜೋಳವನ್ನು ಆಮದು ಮಾಡಿಕೊಳ್ಳಲಾಗಿದೆ. ನಮ್ಮ ದೇಶದಲ್ಲಿಯೇ ಉತ್ಪಾದನೆ ಹೆಚ್ಚಾಗಿರುವುದರಿಂದ ಆಮದು ಮೇಲೆ ನಿರ್ಬಂಧ ವಿಧಿಸಲು ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ.
- ಎಥೆನಾಲ್ ಉತ್ಪಾದನೆಗಾಗಿ ಮೆಕ್ಕೆ ಜೋಳವನ್ನು ತಕ್ಷಣ ಖರೀದಿಸುವಂತೆ ರಾಜ್ಯದ ಪ್ರಮುಖ ಡಿಸ್ಟಿಲರಿಗಳೊಂದಿಗೆ ಸಭೆ ನಡೆಸಿ, ಸೂಚನೆ ನೀಡಲಾಗುವುದು.
- ಕುಕ್ಕುಟೋದ್ಯಮಕ್ಕೆ ಮೆಕ್ಕೆಜೋಳದ ಬೇಡಿಕೆಯಿದ್ದು, ಅವರೊಂದಿಗೆ ಸಹ ಮಾತುಕತೆ ನಡೆಸಲಾಗುವುದು.

## ಟೈಯರ್-2-ಟೈಯರ್-3 ನಗರಗಳ ಅಭಿವೃದ್ಧಿಯತ್ತ ಸರ್ಕಾರದ ಗಮನ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಟೈಯರ್-2, ಟೈಯರ್-3 ನಗರಗಳಲ್ಲಿ ತಾಂತ್ರಿಕ ಮೂಲಸೌಕರ್ಯ ಅಭಿವೃದ್ಧಿಯತ್ತ ಸರ್ಕಾರ ಗಮನಹರಿಸುತ್ತಿದೆ ಎಂದು ಐಟಿ/ಬಿಟಿ ಕಾರ್ಯದರ್ಶಿ ಡಾ. ಮಂಜುಳಾ ಎನ್ ಅವರು ಹೇಳಿದರು. ನಗರದ ಬಿಐಇಸಿಯಲ್ಲಿ ಮುಕ್ತಾಯಗೊಂಡ 3 ದಿನಗಳ ಬೆಂಗಳೂರು ಟೆಕ್ ಸಮ್ಮಿಟ್‌ನ ಸಮಾರೋಪದಲ್ಲಿ ಕೃಷಿಕಲ್ಪ ಫೌಂಡೇಶನ್ ಸಿಇಒ ಸಿಎಂ ಪಾಟೀಲ್ ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಕೆಡಿಇಎಂ ಸಿಇಒ ಸಂಜೀವ್ ಕುಮಾರ್ ಗುಪ್ತಾ ಅವರೊಂದಿಗೆ ವೇದಿಕೆಯನ್ನು ಹಂಚಿಕೊಂಡ ಐಟಿ/ಬಿಟಿ ಕಾರ್ಯದರ್ಶಿ ಡಾ. ಮಂಜುಳಾ ಅವರು, ನಾವೀನ್ಯತೆಯ ಶಕ್ತಿಕೇಂದ್ರವಾಗುವ ಭಾರತದ ಪ್ರಯಾಣದಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸುವಂತೆ ಮಾಡುವುದು ಸರ್ಕಾರದ ಗುರಿಯಾಗಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಇದೇ ವೇಳೆ ಜಗತ್ತಿನ ನೈಜ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ ಎಂದ ಅವರು, ರಾಜ್ಯ ಸರ್ಕಾರದ ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ (ಲೀಪ್) ಗಳನ್ನು ಕುರಿತು ವಿವರಿಸಿದರು. ಮೈಸೂರು, ಹುಬ್ಬಳ್ಳಿ ಮುಂತಾದ ನಗರಗಳಲ್ಲಿ ಬೆಂಗಳೂರಿನ ತಂತ್ರಜ್ಞಾನ ವ್ಯವಸ್ಥೆಯನ್ನು ಪುನರಾವರ್ತಿಸಲು ಸರ್ಕಾರ 1,000 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ರಾಜ್ಯ ಸರ್ಕಾರವು ಆರಂಭಿಕ ಹಂತದ ಹಣಕಾಸಿನ ಅಗತ್ಯವನ್ನು ಅರ್ಥಮಾಡಿಕೊಂಡಿದ್ದು, ನಮ್ಮ ಕಾರ್ಯಕ್ರಮವು ಅರ್ಹ ನವೋದ್ಯಮಗಳಿಗೆ 50 ಲಕ್ಷ ರೂ.ಗಳವರೆಗೆ ಅನುದಾನವನ್ನು ಒದಗಿಸುತ್ತದೆ ಎಂದು ಹೇಳಿದರು.

# ಸುರಕ್ಷತಾ ನಿಯಮ ಪಾಲಿಸುವಂತೆ ಶಾಲಾ ವಾಹನ ಚಾಲಕರಿಗೆ ತಾಕೀತು

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣ ಪೊಲೀಸ್ ಇಲಾಖೆಯಿಂದ ಶಾಲಾ ವಾಹನ ಚಾಲಕರು ಹಾಗೂ ಆಡಳಿತ ಮಂಡಳಿಗೆ ಸುರಕ್ಷತಾ ನಿಯಮ, ವಾಹನ ನಿರ್ವಹಣೆ, ಸಂಚಾರ ನಿಯಮ, ಸರಿಯಾದ ಸಮವಸ್ತ್ರ, ಮಕ್ಕಳ ಜೊತೆ ಸೌಜನ್ಯಯುತವಾಗಿ ವರ್ತಿಸುವುದು ಹಾಗು ಚಾಲನಾ ಪರವಾನಗಿ ಕುರಿತು ತಿಳುವಳಿಕೆ ನೀಡುವ ಜೊತೆಗೆ ಕಡ್ಡಾಯ ಪಾಲನೆಗೆ ತಾಕೀತು ಮಾಡಲಾಯಿತು.

ಪಟ್ಟಣ ಪೊಲೀಸ್ ಠಾಣೆ ಪಿಐ ಜಯಕುಮಾರ್ ಮಾತನಾಡಿ ಪ್ರತಿಯೊಬ್ಬ ಚಾಲಕರು ಸುಪ್ರೀಂ ಕೋರ್ಟ್ ಆದೇಶವನ್ನು ಚಾಚುತಪ್ಪದೆ ಪಾಲಿಸಬೇಕು, ಆಡಳಿತ ಮಂಡಳಿ ಮಕ್ಕಳನ್ನು ವಾಹನಗಳಿಗೆ ಹತ್ತಿಸುವ ಹಾಗೂ ಇಳಿಸಲು ಸಹಾಯಕರೊಬ್ಬರನ್ನು ನೇಮಿಸಿ ಜವಾಬ್ದಾರಿಯನ್ನು ನೀಡಬೇಕು ಎಂದರು.




ಶಾಲೆ ಇರುವ ಪ್ರದೇಶಗಳಲ್ಲಿ ಶಾಲಾ ವಲಯ, ವೇಗದ ಮಿತಿ ಇತ್ಯಾದಿ ಚಿಹ್ನೆ ಇರುವ ಫಲಕಗಳನ್ನು ಅಳವಡಿಸಬೇಕು. ಶಾಲಾ ವಾಹನಗಳು 40 ಕಿ.ಮೀ. ವೇಗ ಮೀರದಂತೆ ವೇಗ ನಿಯಂತ್ರಕ (ಸ್ಪೀಡ್ ಬ್ರೇಕರ್) ಅಳವಡಿಸಬೇಕು ಎಂದು ತಿಳಿಸಿದರು. ಮಕ್ಕಳಿಗೆ ಅನುಗುಣವಾಗಿ ವಾಹನ ಸಾಮರ್ಥ್ಯ ಇರಬೇಕು, ವಾಹನದೊಳಗೆ ಮಕ್ಕಳು ನಿಲ್ಲಬಾರದು, ಎಲ್ಲಾ ಮಕ್ಕಳಿಗೆ ಆಸನದ ವ್ಯವಸ್ಥೆ ಸಮರ್ಪಕವಾಗಿ ಮಾಡಬೇಕು. ಬಹುಮುಖ್ಯವಾಗಿ ಚಾಲಕರನ್ನು ನೇಮಕ ಮಾಡುವ ಮುನ್ನ ಪೊಲೀಸ್ ಇಲಾಖೆಯಿಂದ ಅವರ ಗುಣ ಮತ್ತು ನಡತೆಯ ಪ್ರಮಾಣ ಪತ್ರ ಹೊಂದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಚಾಲಕರಿಗೆ ವಾಹನ ಚಾಲನಾ ಪರವಾನಗಿ ಇರುವ ಬಗ್ಗೆಯು ಸಹ ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದರು. ವಾಹನದ ಗಾಜಿನ ಮೇಲೆ ಯಾವುದೇ ಟಿಂಡೆಂಟ್ ಅಥವಾ ಕಲರ್ ಅಳವಡಿಸಬಾರದು. ಗಾಜುಗಳು ಪಾರದರ್ಶಕವಾಗಿರಬೇಕು.

ವಾಹನಗಳಲ್ಲಿ ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನಿಡಲು ಸಾಕಷ್ಟು ಸ್ಥಳ ಮೀಸಲಿಡಬೇಕು. ವಾಹನಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮತ್ತು ಜಿಪಿಎಸ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಬೇಕು, ಇದರಿಂದ ಮಕ್ಕಳ ಸುರಕ್ಷತೆಯ ಬಗ್ಗೆ ಹಾಗೂ ಚಾಲಕರ ನಡತೆಯ ಬಗ್ಗೆ ಕಣ್ಣಿಡಬಹುದು ಎಂದು ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

## ಹೊಂಗನೂರು ಪಬ್ಲಿಕ್ ಶಾಲೆ ವಿಲೀನ ವಿರೋಧಿಸಿ ಪ್ರತಿಭಟನೆ




• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಹೊಂಗನೂರು ಕರ್ನಾಟಕ ಪಬ್ಲಿಕ್ ಶಾಲೆಗೆ ವಿಲೀನ ಮಾಡುವ ಹೆಸರಿನಲ್ಲಿ, ತಾಲ್ಲೂಕಿನ ಸಂತೆ ಮೊಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಚ್ಚುವುದನ್ನು ವಿರೋಧಿಸಿ ಗ್ರಾಮಸ್ಥರು ಹಾಗೂ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘದ (ಎಐಡಿಎಸ್‌ಒ) ವಿದ್ಯಾರ್ಥಿ ಸಂಘಟನೆ ಪದಾಧಿಕಾರಿಗಳು ಗ್ರಾಮದ ಸರ್ಕಾರಿ ಶಾಲೆ ಎದುರು ಪ್ರತಿಭಟನೆ ನಡೆಸಿದರು. ತಾಲ್ಲೂಕಿನ ಹೊಂಗನೂರಿನ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಹೊಂಗನೂರಿನ ಆರು ಕಿ.ಮೀ. ವ್ಯಾಪ್ತಿಯ 7 ಪ್ರಾಥಮಿಕ ಶಾಲೆಗಳನ್ನು ವಿದ್ಯಾರ್ಥಿ, ಶಿಕ್ಷಕರು ಮತ್ತು ಪರಿಕರ ಸಮೇತ ವಿಲೀನಗೊಳಿಸಲು ಸರ್ಕಾರ ಆದೇಶ ಹೊರಡಿಸಿದೆ. ಇದು ನಿಜಕ್ಕೂ ಖಂಡನೀಯ. ವಿಲೀನದ ಹೆಸರಿನಲ್ಲಿ ಶಾಲೆಗಳನ್ನು ಮುಚ್ಚಲು ನಾವು ಬಿಡುವುದಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಒ ಸಂಘಟನೆ ರಾಜ್ಯ ಖಜಾಂಚಿ ಶುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಸರ್ಕಾರದ ಆದೇಶದ ಪ್ರಕಾರ ರಾಜ್ಯದಲ್ಲಿ 800 ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳು ಎಂದು ಗುರುತಿಸಲಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆ ಸುತ್ತಮುತ್ತಲಿನ 1ರಿಂದ 5 ಕಿ.ಮೀ.ವ್ಯಾಪ್ತಿಯ 50ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳನ್ನು ಕೆಪಿಎಸ್ ಶಾಲೆಗಳಲ್ಲಿ ವಿಲೀನಗೊಳಿಸಲಾಗುತ್ತದೆ. ವಿಲೀನದ ಹೆಸರಿನಲ್ಲಿ ಆ ಶಾಲೆಗಳನ್ನು ಮುಚ್ಚಲಾಗುತ್ತದೆ. ಇದರಿಂದ ಸಾವಿರಾರು ಸರ್ಕಾರಿ ಶಾಲೆಗಳು ಮುಚ್ಚಿ ಹೋಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

# ಭೂಪರಿಹಾರ: ತ್ವರಿತ ಕ್ರಮಕ್ಕೆ ಸೂಚನೆ

### ಜಿಲ್ಲಾ ಪರಿಶಿಷ್ಟ / ಪಂಗಡದ ಜಾಗೃತ, ಉಸ್ತುವಾರಿ ಸಮಿತಿಯ 6 ಸದಸ್ಯರನ್ನು ಕಡ್ಡಾಯವಾಗಿ ಆಹ್ವಾನಿಸಿ

• ಉದಯವಾಹಿನಿ, ಮೈಸೂರು

ಎಲೆ ತೋಟದಲ್ಲಿ ಜಮೀನು ಕಳೆದುಕೊಂಡವರಿಗೆ ಭೂ ಪರಿಹಾರ ಸಂಬಂಧ ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ಚಿಕ್ಕಕಾಟೂರು ಗ್ರಾಮದ ಸ.ನಂ 60ರಲ್ಲಿ ಜಮೀನನ್ನು ಡಿಸೆಂಬರ್ ಅಂತ್ಯದೊಳಗೆ ಅಳತೆ ಕಾರ್ಯನಿರ್ವಹಿಸಿ ನಕ್ಷೆಯೊಂದಿಗೆ ವಿವರವಾದ ವರದಿ ನೀಡಿ' ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆಯ ಬಾಬು ಜಗಜೀವನ್ ರಾಂ ಭವನದಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಹಿಂದೆ ನಡೆದ ಬಹಳಷ್ಟು ಸಭೆಗಳಲ್ಲಿ ಎಲೆ ತೋಟದ ಜಮೀನು ಕಳೆದುಕೊಂಡವರ ಬಗ್ಗೆ ಚರ್ಚೆಯಾಗುತ್ತಿದ್ದು, ಅಧಿಕಾರಿಗಳು ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ಎಂದರು.

ಪೊಲೀಸ್ ಇಲಾಖೆಯಲ್ಲಿ ನಡೆಯುವ ಪರಿಶಿಷ್ಟ ಜಾತಿ ಪಂಗಡದ ಕುಂದು ಕೊರತೆ ಸಭೆಗಳಿಗೆ ಜಿಲ್ಲಾ ಪರಿಶಿಷ್ಟ/ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ 6 ಸದಸ್ಯರನ್ನು ಕಡ್ಡಾಯವಾಗಿ ಆಹ್ವಾನಿಸಬೇಕು ಎಂದರು.

**ಎಸ್‌ಸಿ/ ಎಸ್‌ಟಿ ಜಾಗೃತ ಉಸ್ತುವಾರಿ ಸಮಿತಿ ಸಭೆ**

ಆಶ್ರಮ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಎಂಬ ದೂರುಗಳು ಕೇಳಿ ಬರುತ್ತಿದೆ. ಈ ಬಗ್ಗೆ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಆಶ್ರಮ ಶಾಲೆಗಳಿಗೆ ದಿಢೀರ್ ಭೇಟಿ ಪರಿಶೀಲನೆ ನಡೆಸಬೇಕು. ಇ ಹಾಜರಾತಿ ಅಳವಡಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಿ' ಎಂದು ತಿಳಿಸಿದರು.

ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅನುದಾನದಲ್ಲಿ ನಿರ್ಮಿಸಿರುವ ಸಮುದಾಯ ಭವನಗಳಿಗೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ಸಮುದಾಯ ಭವನಗಳ ನಿರ್ವಹಣಾ ಸಮಿತಿಯನ್ನು ರಚಿಸಿ ಆಯಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ತಿಳಿಸಿದರು.




ಬಹಳಷ್ಟು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹುಣಸೂರು ತಾಲ್ಲೂಕಿನ ಹನಗೋಡು ಗ್ರಾಮದಲ್ಲಿನ ಅಂಬೇಡ್ಕರ್ ಭವನ ನಿರ್ಮಾಣ ಯೋಜನೆಗೆ ಸರ್ಕಾರ ರೂ.1 ಕೋಟಿ ಅನುದಾನ ನಿಗದಿಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, 2021-22ನೇ ಸಾಲಿನಲ್ಲಿ ಟಿಎಸ್‌ಪಿ ಫಲಾನುಭವಿಯೊಬ್ಬರ ಜಮೀನಿನ ಕೊಳವೆಬಾವಿ ಕೊರೆಯಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂಬುದು ವಿಪರ್ಯಾಸ. ಈ ವಿಷಯವನ್ನು ರಾಜ್ಯಮಟ್ಟದ ಸಮಿತಿಯ ಗಮನಕ್ಕೆ ತಂದು ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಬೇಕು' ಎಂದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಜಾಗೃತ ಮತ್ತು ಉಸ್ತುವರಿ ಸಮಿತಿ ಸದಸ್ಯರಾದ ಚಿಕ್ಕಜವರಯ್ಯ, ಎಸ್.ಟಿ.ರವಿಕುಮಾರ್, ವೇಣುಗೋಪಲ್, ಪಾರ್ವತಮ್ಮ, ಮಹದೇವ್, ಬಸವರಾಜು ಉಪಸ್ಥಿತರಿದ್ದರು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಜಿಲ್ಲೆಯಾದ್ಯಂತ ನಗರ ವ್ಯಾಪ್ತಿಯಲ್ಲಿ 20 ವಸತಿ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ 1016 ವಸತಿಗಳನ್ನು ನಿರ್ಮಾಣ ಮಾಡಿಕೊಡಲು ಗುರಿ ನಿಗದಿಯಾಗಿದ್ದು ಈ ಕುರಿತಂತೆ ತಾಲ್ಲೂಕುವಾರು ಪ್ರಗತಿಯನ್ನು ಜಿಲ್ಲಾಧಿಕಾರಿ ಪರಿಶೀಲಿಸಿದರು.

**ಸ್ಥಳೀಯ ಸಂಸ್ಥೆಗಳಲ್ಲೇ ಅರ್ಜಿ ಸಲ್ಲಿಸಲು ಸೂಚನೆ**

'ಪೌರಕಾರ್ಮಿಕರು ವಸತಿ ಯೋಜನೆಗಳಿಗೆ ಮೊದಲು ತಮ್ಮ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಲ್ಲಿ ಅರ್ಜಿ ಸಲ್ಲಿಸಿ ಅಲ್ಲಿ ತೊಂದರೆ ಇದ್ದಲ್ಲಿ ಮಾತ್ರ ಸಮಿತಿಗೆ ಅರ್ಜಿ ಸಲ್ಲಿಸಿ' ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು. ಬಾಬು ಜಗಜೀವನ್ ರಾಂ ಭವನದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಜಿಲ್ಲಾಮಟ್ಟದ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪೌರ ಕಾರ್ಮಿಕರಿಗೆ ಹೊರಗುತ್ತಿಗೆ ಆಧಾರದ ಮೇಲೆ ವೇತನ ಪಾವತಿಸಿದ ನಂತರ ಅವರಿಗೆ ಇಎಸ್‌ಐ ಪಿಎಫ್ ಪಾವತಿಯ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು ಎಂದರು.

## ಹೈಕಮಾಂಡ್ ಮಾತನಾಡಿಸಲು ಶಾಸಕರು ದೆಹಲಿಗೆ ಹೋಗಿರಬಹುದು: ಬೈರತಿ ಸುರೇಶ್

• ಉದಯವಾಹಿನಿ, ಕೋಲಾರ

ಹೈಕಮಾಂಡ್ ಮಾತನಾಡಿಸಲು ಕೆಲ ಶಾಸಕರು ದೆಹಲಿಗೆ ಹೋಗಿರಬಹುದು. ನಮ್ಮ ಪಕ್ಷದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವುದು ಹೈಕಮಾಂಡ್ ಮಾತ್ರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಹೇಳಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಯಾಗಿ ಯಾರಿರಬೇಕು. ಯಾರನ್ನು ಇಳಿಸಬೇಕು ಎಂಬುದನ್ನು ನಿರ್ಧಾರ ಮಾಡುವವರು ದೊಡ್ಡವರು. ನಾನು, ಕೊತ್ತೂರು ಮಂಜುನಾಥ್, ರೂಪಕಲಾ ಶಶಿಧರ್ ಹೇಳಲು ಆಗುತ್ತದೆಯೇ?' ಎಂದರು.

ದೆಹಲಿಗೆ ಹೋಗಿರುವವರನ್ನು ನೀವು (ಮಾಧ್ಯಮದವರು) ಪ್ರಶ್ನಿಸಬೇಕು. ನಾವು ಕೂಡ ಅವರ ರೀತಿ ಶಾಸಕರು ಅಷ್ಟೆ. ಕೆಲಸವಿದ್ದಾಗಲೆಲ್ಲಾ ನಾನೂ ದೆಹಲಿಗೆ ಹೋಗುತ್ತಿರುತ್ತೇನೆ. ಅಲ್ಲದೇ, ಅಭಿವೃದ್ಧಿ ಕೆಲಸ ಮಾಡಿಸಿಕೊಳ್ಳಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬಳಿಯೂ ಹೋಗುತ್ತಿರುತ್ತೇನೆ. ಅದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಿ.ಕೆ.ಶಿವಕುಮಾರ್ ಭೇಟಿ ಮಾಡುತ್ತಿರುವ ಕುರಿತ ಪ್ರಶ್ನೆಗೆ, ಖರ್ಗೆ ಅವರ ಭೇಟಿ ವಿಚಾರ ನನಗೆ ಆ ವಿಚಾರ ಗೊತ್ತಿಲ್ಲ. ಸಮಯ ಸಿಕ್ಕಿದರೆ ನಾನು ಕೂಡ ಭೇಟಿ ಮಾಡುತ್ತೇನೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಡೆಯವರು ಹೋಟೆಲೊಂದರಲ್ಲಿ 100 ಕೊಠಡಿ ಕಾಯ್ದಿರಿಸಿರುವ ಮಾಹಿತಿ ಇದೆಯಲ್ಲಾ ಎಂಬ ಪ್ರಶ್ನೆಗೆ, ಅದಕ್ಕೆ ಸಾಕ್ಷಿ ಏನಿದೆ ನೂರು ಕೊಠಡಿಗಳು ಆ ಹೋಟೆಲ್‌ನಲ್ಲಿ ಇವೆಯೇ ಇಡೀ ಹೋಟೆಲ್ ಅನ್ನೇ ಕಾಯ್ದಿರಿಸಬೇಕಾಗುತ್ತದೆ ಎಂದು ಹೇಳಿದರು. ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ನಡೆದಿರುವ ಸಭೆ ಕುರಿತು ಪ್ರತಿಕ್ರಿಯಿಸಿ, 'ಯಾವಾಗ ಸಭೆ ನಡೆಸಿದರು? ನನಗೆ ಆ ವಿಚಾರ ಗೊತ್ತಿಲ್ಲ. ಪರಮೇಶ್ವರ, ಜಾರಕಿಹೊಳಿ ಹಿರಿಯ ಸಚಿವರು. ದೊಡ್ಡವರು ಆಗಾಗ್ಗೆ ಊಟಕ್ಕೆ ಸೇರುತ್ತಿರುತ್ತಾರೆ' ಎಂದರು.



## ಭಕ್ತರ ಆಶೋತ್ತರಗಳಿಗೆ ಸ್ಪಂದಿಸಿದ್ದ ಶ್ರೀಗಳು

• ಉದಯವಾಹಿನಿ, ನಂಜನಗೂಡು

ಕಾಯಕ ಹಾಗೂ ದಾಸೋಹದ ತತ್ವಗಳನ್ನು ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದ ಮಲ್ಲನಮೂಲೆ ಚೆನ್ನಬಸವಸ್ವಾಮೀಜಿ ಹಾಗೂ ಭಕ್ತರ ಆಶೋತ್ತರಗಳಿಗೆ ಸ್ಪಂದಿಸುವ ಜೊತೆಗೆ ಮಠದ ಅಭಿವೃದ್ಧಿಯಲ್ಲೂ ಮಹತ್ವದ ಪಾತ್ರ ವಹಿಸಿದ್ದರು ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ತಾಲ್ಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆಯೋಜಿಸಿದ್ದ ಚೆನ್ನಬಸವಸ್ವಾಮೀಜಿ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು. ಜಾತಿ, ಮತ ಹಾಗೂ ಧರ್ಮಾತೀತವಾಗಿ ಭಕ್ತರನ್ನು ಹೊಂದಿದ್ದ ಚೆನ್ನಬಸವಸ್ವಾಮೀಜಿ ತಪ್ಪುಗಳು ಕಂಡಾಗ ನಿಷ್ಠುರತೆಯಿಂದ ಎಚ್ಚರಿಸುತ್ತಿದ್ದರು.

ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಸ್ವಾಮೀಜಿ, ಕಾರ್ತೀಕ ಮಾಸದ ಮೂರನೇ ಸೋಮವಾರವೇ ದೇಹಾಂತ್ಯ ಮಾಡುವ ಇಂಗಿತ ಹೊಂದಿದ್ದರು. ಅವರು ನಿಶ್ಚಿತ ಸಮಯದಲ್ಲೇ ಲಿಂಗೈಕ್ಯರಾಗುವ ಮೂಲಕ ತಮ್ಮ ಆಶಯದಂತೆ ನಡೆದುಕೊಂಡಿದ್ದಾರೆ. ಶ್ರೀ ಗುರಕಂಬಳೇಶ್ವರ ಮಠದ ನೂತನ ಪೀಠಾಧಿಪತಿಯಾಗಲಿರುವ ಕಿರಿಯ ಶ್ರೀಗಳಿಗೆ ಸಮಾಜದ ಎಲ್ಲರ ಸಹಕಾರ ಹಾಗೂ ಬೆಂಬಲ ಅಗತ್ಯ ಎಂದು ಹೇಳಿದರು. ಸಭೆಯಲ್ಲಿ ದೇವನೂರು ಶ್ರೀ ಗುರುಮಲ್ಲೇಶ್ವರ ಮಠಾಧ್ಯಕ್ಷ ಮಹಾಂತ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತಮಠದ ಚೆನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಶಿರಮಳ್ಳಿ ಇಮ್ಮಡಿ ಮುರುಗಿ ಸ್ವಾಮೀಜಿ, ನಾಗರಾಜೇಂದ್ರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಶಿವಪ್ಪ ದೇವರು, ಬದನವಾಳು ಮಹೇಶ್, ಶಿವನಾಗಪ್ಪ, ಮಹದೇವಪ್ರಸಾದ್, ಮಕ್ಕಳಮನೆ ಸೋಮಶೇಖರ್, ಕೋಮಲ, ಮಂಜುಳ ಮಧು, ನಂದಿನಿ ಉಪಸ್ಥಿತರಿದ್ದರು.




> ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ್ದ ಚೆನ್ನಬಸವಸ್ವಾಮೀಜಿ ಭೌತಿಕವಾಗಿ ಮರೆಯಾಗಿದ್ದರೂ, ಅವರ ಸರಳ ಜೀವನ ಶೈಲಿ ಹಾಗೂ ಮಠದಲ್ಲಿನ ಅಕ್ಷರ ಹಾಗೂ ಅನ್ನದಾಸೋಹ, ಸ್ವಾಭಿಮಾನದ ಸಂದೇಶಗಳ ಮೂಲಕ ಭಕ್ತರ ಮನದಲ್ಲಿ ಸದಾ ಕಾಲದಲ್ಲೂ ಉಳಿಯಲಿದ್ದಾರೆ ಎಂದು ಹೇಳಿದರು.
>
> ಮಾಜಿ ಶಾಸಕ ಬಿ.ಹರ್ಷವರ್ಧನ್

# ಮೀನುಗಾರಿಕೆ ಇಲಾಖೆಯಲ್ಲಿ ಅವ್ಯವಹಾರ ಆರೋಪ: ಕ್ರಮಕ್ಕೆ ಒತ್ತಾಯ

• ಉದಯವಾಹಿನಿ, ರಾಮನಗರ

ಏತ ನೀರಾವರಿ ಕೆರೆಗಳನ್ನು ಮೀನು ಸಾಕಾಣಿಕೆಗಾಗಿ ಇ- ಟೆಂಡರ್ ಮೂಲಕ ಬಹಿರಂಗ ಹರಾಜು ಮಾಡಿ ಗುತ್ತಿಗೆ ನೀಡಬೇಕು ಎಂಬ ಆದೇಶಕ್ಕೆ ವಿರುದ್ಧವಾಗಿ, ಜಿಲ್ಲಾ ಮೀನುಗಾರಿಕೆ ಇಲಾಖೆಯು ನೇರ ಗುತ್ತಿಗೆ ನೀಡಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟು ಮಾಡಿದೆ' ಎಂದು ಮೀನು ಕೃಷಿಕ ಚರಣ್ ಬಾನಂದೂರು ಆರೋಪಿಸಿದರು.

ಜಿಲ್ಲೆಯಲ್ಲಿ ನಿಯಮಬಾಹಿರವಾಗಿ 1 ಜಲಾಶಯ ಹಾಗೂ 4 ಕೆರೆಗಳನ್ನು ನೇರ ಗುತ್ತಿಗೆ ನೀಡಲಾಗಿದೆ. ಇದರಲ್ಲಿ ಭಾಗಿಯಾಗಿರುವ ಇಲಾಖೆಯು ಉಪ ನಿರ್ದೇಶಕ ಶಾಂತಿಪ್ರಿಯ ಹಾಗೂ ರಾಮನಗರ ಮತ್ತು ಮಾಗಡಿಯ ಸಹಾಯಕ ನಿರ್ದೇಶಕರು ಭಾಗಿಯಾಗಿದ್ದಾರೆ ಎಂದು ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದೂರಿದರು.




40 ಎಕರೆಗಿಂತ ಹೆಚ್ಚು ವಿಸ್ತೀರ್ಣವಿರುವ 200 ಕೆರೆಗಳು ಜಿಲ್ಲೆಯಲ್ಲಿವೆ. ಈ ಪೈಕಿ 59 ಕೆರೆಗಳನ್ನು ಏತ ನೀರಾವರಿ ಮೂಲಕ ತುಂಬಿಸಲಾಗುತ್ತಿದೆ. ಈ ಪೈಕಿ ಮಂಚನಬೆಲೆ ಜಲಾಶಯ ಮತ್ತು ಹಾರೋಹಳ್ಳಿಯ ಮಾವತ್ತೂರು, ಚಿಲುಕನ ಕೆರೆ, ದೊಡ್ಡಾಲಹಳ್ಳಿ ಕೆರೆ, ಮಾಗಡಿ ತಾಲ್ಲೂಕಿನ ವೈ.ಜಿ. ಗುಡ್ಡ ಕೆರೆಯನ್ನು ನೇರ ಗುತ್ತಿಗೆ ನೀಡಲಾಗಿದೆ' ಎಂದರು. ಚನ್ನಪಟ್ಟಣ ತಾಲ್ಲೂಕಿನ 30 ಕೆರೆಗಳನ್ನು ಮೂರು ವರ್ಷಗಳಿಂದ ಹರಾಜು ಮಾಡದೆ ಹಾಗೆಯೇ ಉಳಿಸುವ ಮೂಲ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಲಾಗಿದೆ. ಇದಕ್ಕೆ ಇಲಾಖೆಯ ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರೇ ನೇರ ಹೊಣೆ. ಇಲಾಖೆಯಲ್ಲಿ ಅವ್ಯವಹಾರ ತಾಂಡವಾಡುತ್ತಿದೆ. ವಾಹನವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಬಯೋಮೆಟ್ರಿಕ್ ಹಾಜರಾತಿ ನಿರ್ವಹಣೆ ಸರಿಯಾಗಿಲ್ಲ ಎಂದು ದೂರಿದರು. ಜಿಲ್ಲೆಯಲ್ಲಿ ಅಧಿಕಾರಿಗಳು ಸರಿಯಾಗಿ ಕರ್ತವ್ಯಕ್ಕೆ ಹಾಜರಾಗುತ್ತಿಲ್ಲ. ಎಲ್ಲಾ ಅವ್ಯವಹಾರಗಳ ಕುರಿತು ಜಿಲ್ಲಾ ಪಂಚಾಯಿತಿ ಸಿಇಒ ಸೇರಿದಂತೆ ಸಂಬಂಧಪಟ್ಟವರಿಗೆ ದೂರು ನೀಡಲಾಗುವುದು. ಮೇಲಧಿಕಾರಿಗಳು ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಆರೋಪಕ್ಕೆ ಪೂರಕವಾಗಿ ಚರಣ್ ಅವರು ಕೆಲ ದಾಖಲೆಗಳನ್ನು ಪ್ರದರ್ಶಿಸಿದರು. ಸುದ್ದಿಗೋಷ್ಠಿಯಲ್ಲಿ ಮೀನು ಕೃಷಿಕರಾದ ರಾಜಶೇಖರ್, ಸುನಿಲ್, ಹರೀಶ್ ಹಾಗೂ ಮಹೇಶ್ ಇದ್ದರು. ಇಲಾಖೆಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ.

# ಪ್ರತಿ ಹಳ್ಳಿಗಳು ಉದ್ಧಾರವಾದರೆ ಮಾತ್ರ ದೇಶದ ಅಭಿವೃದ್ಧಿ

### ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ

• ಉದಯವಾಹಿನಿ, ಚಾಮರಾಜನಗರ

ಪ್ರತಿ ಹಳ್ಳಿಯಲ್ಲಿ ಕನಿಷ್ಠ ಒಂದು ಶಾಲೆ, ಗ್ರಾಮ ಪಂಚಾಯಿತಿ ಹಾಗೂ ಸಹಕಾರ ಸಂಘಗಳು ಇದ್ದರೆ ಮಾತ್ರ ಗ್ರಾಮೀಣ ಭಾರತದ ಅಭಿವೃದ್ಧಿ ಸಾಧ್ಯ ಮತ್ತು ಹಳ್ಳಿಗಳು ಉದ್ಧಾರವಾಗದ ಹೊರತು ದೇಶ ಅಭಿವೃದ್ಧಿಯಾಗುವುದಿಲ್ಲ ಎಂಬ ನೆಹರೂ ಅವರ ಮಾತುಗಳನ್ನು ರಾಜ್ಯ ಸರ್ಕಾರ ಈಡೇರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ಸಮಾಜದಲ್ಲಿ ಅಸಮಾನತೆ ಹೋಗುವವರೆಗೂ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯವಿಲ್ಲ. ಎಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಶಕ್ತಿ ಬಂದಾಗ ಮಾತ್ರ ಜಾತಿ ವ್ಯವಸ್ಥೆ ನಾಶವಾಗುತ್ತದೆ. ಈ ನಿಟ್ಟಿನಲ್ಲಿ 2013ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಹಲವು ಭಾಗ್ಯಗಳನ್ನು ಜಾರಿಗೆ ತರಲಾಯಿತು. 2023ರಲ್ಲಿ ಮತ್ತೆ ಅಧಿಕಾರ ದೊರೆತಾಗ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಸಮಾಜದಲ್ಲಿರುವ ಅಸಮಾನತೆ ನಿವಾರಣೆ ಮಾಡಲು ಶ್ರಮಿಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಹೇಳಿದರು. ರಾಜ್ಯದಲ್ಲಿ 16 ಹಾಲು ಒಕ್ಕೂಟಗಳಿದ್ದು ಪ್ರತಿದಿನ ಒಂದು ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಗುಜರಾತ್ ಹೊರುತಪಡಿಸಿ ದೇಶದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುತ್ತಿರುವ ರಾಜ್ಯ ಎಂಬ ಹೆಗ್ಗಳಿಕೆಯನ್ನು ಕರ್ನಾಟಕ ಹೊಂದಿದೆ. ಹಾಲು ಉತ್ಪಾದನೆ ಹೆಚ್ಚಿಸಲು ಹಾಗೂ ಸಹಕಾರ ಕ್ಷೇತ್ರವನ್ನು ಬಲಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಾಲು ಒಕ್ಕೂಟಗಳನ್ನು ತೆರೆಯಲಾಗುವುದು ಎಂದು ಭರವಸೆ ನೀಡಿದರು. ರಾಜ್ಯದಲ್ಲಿ ಕೃಷಿ, ಪಶು ಸಂಗೋಪನೆ, ರೇಷ್ಮೆ, ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯ ಹಿಂದೆ ಸಹಕಾರ ಕ್ಷೇತ್ರದ ಕೊಡುಗೆ ಹೆಚ್ಚಾಗಿದ್ದು, ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಹೆಚ್ಚೆಚ್ಚು ಸಹಕಾರ ಸಂಘಗಳು ರಚನೆಯಾಗಬೇಕು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ಉಚಿತವಾಗಿ ಸಹಕಾರಿಗಳಾಗಲು ಸರ್ಕಾರ ಅವಕಾಶ ಕಲ್ಪಿಸಿದೆ' ಎಂದರು.




ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಗ್ರಾಮ ಪಂಚಾಯಿತಿ ಮಾದರಿಯಲ್ಲಿ ಸಹಕಾರ ಸಂಘಗಳಲ್ಲಿ ಅಧ್ಯಕ್ಷ ಉಪಾಧ್ಯಕ್ಷರಿಗೆ ಮೀಸಲಾತಿ ನೀಡುವ ಕ್ರಾಂತಿಕಾರಕ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕ್ರಿ.ಶ. 5-6ನೇ ಶತಮಾನದಲ್ಲಿ ಬೌದ್ಧ ಬಿಕ್ಕುಗಳಿಂದ ಆರಂಭವಾದ ಸಹಕಾರ ಚಳವಳಿ 12ನೇ ಶತಮಾನದಲ್ಲಿ ಬಸವಣ್ಣನವರ ಅನುಭವಮಂಟಪದಲ್ಲಿ ಶಿವಶರಣದ ಧಾರ್ಮಿಕ ಚಳವಳಿಯ ರೂಪ ಪಡೆಯಿತು. ನಂತರ ಗಾಂಧೀಜಿಯವರ ಸ್ವದೇಶಿ, ಅಸಹಕಾರ ಚಳವಳಿ ಮಹತ್ವ ಪಡೆಯಿತು. 1904ರಲ್ಲಿ ಸಿದ್ದನಗೌಡರು ಆರಂಭಿಸಿದ ಸಹಕಾರ ಚಳವಳಿ ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ನಾಂದಿಯಾಯಿತು. ಕರ್ನಾಟಕದಲ್ಲಿ 47 ಸಾವಿರ ಸಹಕಾರ ಸಂಘಗಳಿದ್ದು ಸ್ವಾವಲಂಬಿ ಬದುಕಿಗೆ ಪೂರಕವಾಗಿವೆ' ಎಂದರು. ಸಂಸದ ಸುನೀಲ್ ಬೋಸ್ ಮಾತನಾಡಿ, ಸಹಕಾರ ಸಂಘಗಳ ಸದಸ್ಯರಾಗಿ ಸಾಲ ಪಡೆದು ರೈತರು ಹಾಗೂ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು' ಎಂದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ ಜಿ.ಟಿ.ದೇವೇಗೌಡ, ಹಿರಿಯ ಸಹಕಾರಿ ಧುರೀಣ ಕೆ.ಎನ್. ರಾಜಣ್ಣ ಸಹಕಾರ ಕ್ಷೇತ್ರದ ಅಭಿವೃದ್ಧಿ ಕುರಿತು ಮಾತನಾಡಿದರು. ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸಂವಿಧಾನ ಪೀಠಿಕೆಯ ಪ್ರತಿಜ್ಞಾವಿಧಿ ಬೋಧಿಸಿದರು.

**ಕಾಂಗ್ರೆಸ್ ಸೇರಿದ್ದು ಹೀಗೆ..**

ಜೆಡಿಎಸ್‌ನಿಂದ ಉಚ್ಚಾಟನೆಯಾದ ಬಳಿ ರಾಜ್ಯದಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರನ್ನು ಒಗ್ಗೂಡಿಸಲು ಅಹಿಂದ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವಾಗ ಪಕ್ಷ ಸೇರುವಂತೆ ಕಾಂಗ್ರೆಸ್ ಪಕ್ಷದಿಂದ ಆಹ್ವಾನ ಬಂತು. ಕಾಂಗ್ರೆಸ್‌ಗೆ ಬಂದ ಮೇಲೆ ಜನರ ಆಶೀರ್ವಾದಿಂದ ಎರಡು ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ದೊರೆಯಿತು. ಈ ಅವಧಿಯಲ್ಲಿ ಸಮಾಜದ ಎಲ್ಲಾ ವರ್ಗದವರ ಶ್ರೇಯೋಭಿವೃದ್ಧಿಗೆ ಶ್ರಮಿಸುವ ಅವಕಾಶ ದೊರೆತಿದೆ' ಎಂದು ಸಿದ್ದರಾಮಯ್ಯ ಸ್ಮರಿಸಿದರು.

**ಹೊಸ ಜಿಲ್ಲೆ ಉದ್ಘಾಟನೆಯಲ್ಲಿ ಭಾಗವಹಿಸಿದ್ದೆ**

ಅವಿಭಜಿತ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ಚಾಮರಾಜನಗರ ಸ್ವತಂತ್ರ ಜಿಲ್ಲೆಯಾದಾಗ ಅಂದು ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲರು ಮಹದೇಶ್ವರ ಬೆಟ್ಟದಲ್ಲಿ ನೂತನ ಚಾಮರಾಜನಗರ ಜಿಲ್ಲೆಯನ್ನು ಉದ್ಘಾಟಿಸಿದ್ದರು. ಆದರೆ, ನಾನು ಹಾಗೂ ದಿ.ಬಿ.ರಾಚಯ್ಯ ಅವರು ಚಾಮರಾಜನಗರಕ್ಕೆ ಬಂದು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆವು' ಎಂದು ಸಿದ್ದರಾಮಯ್ಯ ಸ್ಮರಿಸಿದರು.

## ಮಿನಿ ನ್ಯೂಸ್

### ಹುಲಿ ಜಾಡು ಪತ್ತೆಹಚ್ಚಲು ಕ್ಯಾಮರಾ ಟ್ರ್ಯಾಪಿಂಗ್ಗೆ ಮುಂದಾದ ಅರಣ್ಯ ಇಲಾಖೆ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ದೇವರಹಳ್ಳಿ ಗ್ರಾಮದ ರೈತರ ಜಮೀನಿನಲ್ಲಿ ಸಂಚರಿಸುತ್ತಿರುವ ವ್ಯಾಘ್ರನನ್ನ ಪತ್ತೆಹಚ್ಚುವ ಸಲುವಾಗಿ ಅರಣ್ಯ ಇಲಾಖೆ ಕ್ಯಾಮೆರಾ ಟ್ರ್ಯಾಪಿಂಗ್ಗೆ ಮುಂದಾಗಿದ್ದು ಹುಲಿಯನ್ನ ಕಾಡಿಗೆ ಹಿಮ್ಮೆಟ್ಟಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ.




ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯಕ್ಕೆ ಸೇರಿದ ದೇವರಹಳ್ಳಿ ಗ್ರಾಮದ ಮಲ್ಲಪ್ಪ ಎಂಬವರ ಜಮೀನಿನಲ್ಲಿ ವ್ಯಾಘ್ರನ ಹೆಜ್ಜೆ ಗುರುತು ಪತ್ತೆಯಾಗಿತ್ತು, ಗ್ರಾಮದ ಸನಿಹದಲ್ಲೇ ಶನೇಶ್ವರ ದೇವಸ್ಥಾನದ ಬಳಿಯೂ ಓಡಾಡಿದೆ ಎಂಬುದಾಗಿ ತಿಳಿದುಬಂದಿದೆ. ರೈತರ ಜಮೀನಿಗೆ ತೆರಳಿ ಪರಿಶೀಲನೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ವಿಶಿಷ್ಟ ಕ್ಯಾಮರಗಳನ್ನ ಅಳವಡಿಸಿದ್ದಾರೆ, ವ್ಯಾಘ್ರನ ಚಲನವಲನದ ಮೇಲೆ ಹದ್ದಿನ ಕಣ್ಣೇರಿಸಲಾಗಿದೆ ರೈತರು ಆತಂಕಪಡುವ ಅಗತ್ಯವಿಲ್ಲ ಶೀಘ್ರದಲ್ಲೇ ಕಾಡಿಗೆ ಹಿಮ್ಮೆಟ್ಟಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ವಿಕಲಚೇತನ ಫಲಾನುಭವಿಗಳಿಗೆ ಸಲಕರಣೆಗಳ ವಿತರಣೆ




• ಉದಯವಾಹಿನಿ, ಗುಂಡ್ಲುಪೇಟೆ

ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಚಾಮರಾಜನಗರ ವತಿಯಿಂದ 2024 - 25 ನೇ ಸಾಲಿನ ವಿವಿಧ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಸಾಧನ ಸಲಕರಣೆಗಳನ್ನ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ವಿತರಿಸಿದರು.

ಪಟ್ಟಣದ ಹಳೆ ಪ್ರವಾಸಿಮಂದಿರದ ಶಾಸಕರ ಕಚೇರಿ ಆವರಣದಲ್ಲಿ 2024 - 25 ನೇ ಸಾಲಿನ ವಿವಿಧ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಮತ್ತು ಬ್ಯಾಟರಿ ಚಾಲಿತ ವೀಲ್ ಚೇರ್, ಹೊಲಿಗೆ ಯಂತ್ರ ಹಾಗೂ ಶ್ರವಣ ಸಾಧನವನ್ನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಪುರಸಭಾ ಮಾಜಿ ಅಧ್ಯಕ್ಷರಾದ ಶಶಿಧರ್ ದೀಪು, ಮಧುಸೂದನ್, ವಿಶ್ವನಾಥ್ , ಸಾಹುಲ್ ಮಡಹಳ್ಳಿ ಮಣಿ, ಫಲಾನುಭವಿಗಳು ಇದ್ದರು.

### ಸಿಎಂ.ಸಿದ್ದರಾಮಯ್ಯ ಭೇಟಿ: ತಾಲ್ಲೂಕು ಆಡಳಿತ ಸಕಲ ಸಿದ್ಧತೆ




• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನಲ್ಲಿ ಸುಮಾರು ರೂ.680 ಕೋಟಿ ಸೇರಿದಂತೆ ಜಿಲ್ಲೆಯಲ್ಲಿ ಸುಮಾರು ರೂ.1,800 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 24ರಂದು ಭೇಟಿ ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಜನಸಾಮಾನ್ಯರು ಭಾಗವಹಿಸಬೇಕು ಎಂದು ತಹಶೀಲ್ದಾರ್ ಗಗನಸಿಂಧೂ ಮನವಿ ಮಾಡಿದರು. ನಗರದ ತಾಲ್ಲೂಕು ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ನಗರದ ಹೊರವಲಯದ ವರದನಾಯಕಹಳ್ಳಿ ಬಳಿ ಜಿಲ್ಲಾ ವ್ಯಾಪ್ತಿಯ ವಿವಿಧ ಕಾಮಗಾರಿಗಳು ಹಾಗೂ ಶಿಡ್ಲಘಟ್ಟ ತಾಲ್ಲೂಕಿನ ಹೈಟೆಕ್ ರೇಷ್ಮೆಗೂಡಿನ ಮಾರುಕಟ್ಟೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಸುಮಾರು 40 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಕಾರ್ಯಕ್ರಮಕ್ಕೆ ಬರುವವರಿಗೆ ಊಟ, ಕುಡಿಯುವ ನೀರು, ಆರೋಗ್ಯ ಸೇವೆ, ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಅಂತರಾಳದಿಂದ... EDITORIAL

# ತುಮಕೂರಿಗೆ ಉಪನಗರ ರೈಲು ಮಾರ್ಗ ನಿರ್ಮಿಸುವ ಪ್ರಸ್ತಾವನೆ



**ಮೆಟ್ರೊ ಜಾಲವನ್ನು ಬೆಂಗಳೂರಿನಿಂದ ತುಮಕೂರಿಗೆ ವಿಸ್ತರಣೆ ಮಾಡುವ ಪ್ರಸ್ತಾವವನ್ನು ಪರಿಗಣಿಸುವ ಅಗತ್ಯವೂ ಇಲ್ಲವಾಗಿತ್ತು. ತುಮಕೂರು ಜಿಲ್ಲೆಯವರೇ ಆಗಿರುವ ರಾಜ್ಯದ ಗೃಹ ಸಚಿವ ಜಿ. ಪರಮೇಶ್ವರ ಅವರು, ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆಯನ್ನು ಕೈಗೆತ್ತಿಕೊಂಡಲ್ಲಿ ಅಗತ್ಯವಿರುವ ಅಷ್ಟೂ ಹಣವನ್ನು ಹೂಡಿಕೆ ಮಾಡಲು ಕತಾರ್‌ನ ಕಂಪನಿಯೊಂದು ಸಿದ್ಧವಾಗಿದೆ ಎಂದು ಹೇಳಿದ್ದಾರೆ.**

ನಮ್ಮ ಮೆಟ್ರೊ ಜಾಲವನ್ನು ಬೆಂಗಳೂರಿನಿಂದ ತುಮಕೂರಿನವರೆಗೆ ವಿಸ್ತರಿಸುವ ಬಗ್ಗೆ ವಿಸ್ತೃತ ಯೋಜನಾ ವರದಿ ಡಿಪಿಆರ್ ಸಿದ್ಧಪಡಿಸಲು ರಾಜ್ಯ ಸರ್ಕಾರ ಮುಂದಡಿ ಇರಿಸಿರುವುದು ಹಲವು ಕಾರಣಗಳಿಂದಾಗಿ ತಪ್ಪು. ಈ ಯೋಜನೆಯು ತರ್ಕಹೀನ.

ಇದು ತಜ್ಞರ ಸಲಹೆಗಳಿಗೆ ವಿರುದ್ಧ ಸಾರಿಗೆ ವ್ಯವಸ್ಥೆಗಳ ಮೂಲತತ್ತ್ವಗಳಿಗೂ ವಿರುದ್ಧ. ಹೀಗಿರುವಾಗ, ಡಿಪಿಆರ್ ಸಿದ್ಧಪಡಿಸಲು ಮುಂದಾಗಿರುವುದು ಸಾರ್ವಜನಿಕರ ಹಣವನ್ನು ಪೋಲು ಮಾಡುವ ಕ್ರಮವಾಗುತ್ತದೆ. ಹಣಸಿಗುವುದು ಖಚಿತ ಎಂಬುದು ಆ ಹಣವನ್ನು ಅರ್ಥಹೀನವಾದ ಯೋಜನೆಯೊಂದರ ಮೇಲೆ ಸುರಿಯಲು ಪರವಾನಗಿ ಆಗುವುದಿಲ್ಲ. ವಿದೇಶದಿಂದ ಹಣ ತಂದು, ಅದನ್ನು ಬಿಳಿಯಾನೆಯೊಂದರ ಮೇಲೆ ಸುರಿದರೆ ಬಿಳಿಯಾನೆಯ ಸ್ವರೂಪವೇನೂ ಬದಲಾಗುವುದಿಲ್ಲ.ಅಗತ್ಯವೇ ಇಲ್ಲದ ಹಾಗೂ ಸೂಕ್ತವಲ್ಲದ ಮಾರ್ಗವೊಂದರಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಾಣ ಮಾಡುವುದಕ್ಕಿಂತ ಹೆಚ್ಚು ಮಹತ್ವದ ಸಾರಿಗೆ ಅಗತ್ಯಗಳನ್ನು ಪೂರೈಸಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮೇಲಿದೆ. ಮೆಟ್ರೊ ರೈಲು ವಿನ್ಯಾಸವಾಗಿರುವುದು ನಗರವೊಂದರ ಒಳಗಿನ ಸಂಚಾರಕ್ಕಾಗಿ. ಅದು ಹತ್ತಿರದ ಹಾಗೂ ಹೆಚ್ಚು ಓಡಾಟ ನಡೆಸುವ ಮಾರ್ಗಗಳಿಗಾಗಿ ಇದೆ. ಮೆಟ್ರೊ ರೈಲು ಮಾರ್ಗದಲ್ಲಿ ನಿಲ್ದಾಣಗಳ ನಡುವಿನ ಅಂತರವು ಕಡಿಮೆ ಇರುತ್ತದೆ. ಇಂಥದ್ದೊಂದು ಸಾರಿಗೆ ವ್ಯವಸ್ಥೆಯನ್ನು 70ಕಿ.ಮೀ. ದೂರವಿರುವ ಇನ್ನೊಂದು ನಗರಕ್ಕೆ ಸಂಪರ್ಕ ಕಲ್ಪಿಸಲು ವಿಸ್ತರಿಸುವುದು ಇದರ ಮೂಲ ಉದ್ದೇಶಕ್ಕೆ ವಿರುದ್ಧ. ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಹೇಳಿರುವ ಪ್ರಕಾರ ಮಾದಾವರ–ನೆಲಮಂಗಲದ ನಡುವೆ ಪ್ರತಿ 1ರಿಂದ 2 ಕಿ.ಮೀ.ಗೆ ಒಂದು ನಿಲ್ದಾಣ ಇರಲಿದೆ. ನೆಲಮಂಗಲದಿಂದ ತುಮಕೂರಿನ ನಡುವಿನ ಮಾರ್ಗದಲ್ಲಿ 4ರಿಂದ 5 ಕಿ.ಮೀ. ನಡುವೆ ಒಂದು ನಿಲ್ದಾಣ ಇದ್ದರೆ ಸಾಕು ಎಂದು ಅದು ಅಂದಾಜಿಸಿದೆ. ಹೀಗೆ ಮಾಡುವುದರಿಂದ ಬೆಂಗಳೂರು ನಗರದ ಅಗತ್ಯಗಳಿಗೂ ಸ್ಪಂದಿಸಿದಂತೆ ಆಗುವುದಿಲ್ಲ, ಎರಡು ನಗರಗಳ ನಡುವೆ ನಿತ್ಯ ಓಡಾಡುವವರಿಗೂ ಅನುಕೂಲ ಆಗುವುದಿಲ್ಲ. ತುಮಕೂರಿನಿಂದ ಬೆಂಗಳೂರಿಗೆ ಮೆಟ್ರೊ ಮೂಲಕ ಸಂಚರಿಸಲು ಎರಡು ತಾಸು ಬೇಕಾಗಬಹುದು. ಈ ರೀತಿ ಆದರೆ, ರಸ್ತೆ ಮಾರ್ಗವಾಗಿ ಪ್ರಯಾಣ ಬೆಳೆಸುವುದೇ ಹೆಚ್ಚು ಅನುಕೂಲಕರ ಆಗುತ್ತದೆ. ವೇಗವಾಗಿ ಪ್ರಯಾಣಿಸಲು ಆಗದಿದ್ದರೆ, ಇಷ್ಟು ದೂರದ ಪ್ರಯಾಣಕ್ಕೆ ಮೆಟ್ರೊ ರೈಲಿನಲ್ಲಿ ಆರಾಮದಾಯಕ ಆಸನಗಳ ವ್ಯವಸ್ಥೆ ಇಲ್ಲದಿದ್ದರೆ, ಎರಡು ನಗರಗಳ ನಡುವಿನ ಮೆಟ್ರೊ ರೈಲು ಸಂಪರ್ಕವು ತನ್ನದೇ ದ್ವಂದ್ವಗಳ ಪರಿಣಾಮವಾಗಿ ನಿರರ್ಥಕವಾಗುತ್ತದೆ.

**ವಿಶ್ವದ ಇತರೆಡೆಗಳಲ್ಲಿ ಮೆಟ್ರೊ ರೈಲುಗಳು 2 ನಗರಗಳ ನಡುವೆ ಸಂಪರ್ಕ ಬೆಳೆಸಲು ಬಳಕೆಯಾಗುತ್ತಿಲ್ಲ:** ಆ ಉದ್ದೇಶಕ್ಕೆ ಉಪನಗರ ರೈಲುಗಳನ್ನು ಬಳಸಲಾಗುತ್ತದೆ. ನೈಋತ್ಯ ರೈಲ್ವೆಯು ಬೆಂಗಳೂರು ಮತ್ತು ತುಮಕೂರಿನ ನಡುವೆ ನಾಲ್ಕು ಪಥಗಳ ರೈಲು ಹಳಿ ನಿರ್ಮಾಣಕ್ಕೆ ರೂ.3.500 ಕೋಟಿ ಹೂಡಿಕೆ ಮಾಡುತ್ತಿದೆ. ಇದು ಮೆಟ್ರೊ ಮಾರ್ಗವನ್ನು ತುಮಕೂರಿಗೆ ವಿಸ್ತರಿಸಲು ಅಗತ್ಯವಿರುವ ಅಂದಾಜು ವೆಚ್ಚಕ್ಕೆ ಹೋಲಿಸಿದರೆ ಬಹಳ ಕಡಿಮೆ. ತುಮಕೂರಿಗೆ ಉಪನಗರ ರೈಲು ಮಾರ್ಗ ನಿರ್ಮಿಸುವ ಪ್ರಸ್ತಾವನೆಯನ್ನು ಕೆ ರೈಡ್ ಹೊಂದಿದೆ. ಮೇಲ್ದರ್ಜೆಗೆ ಬರಲಿರುವ ರೈಲ್ವೆ ಕಾರಿಡಾರ್‌ಗೆ ಪರ್ಯಾಯವಾಗಿ ಮೆಟ್ರೊ ರೈಲು ಮಾರ್ಗವನ್ನು ನಿರ್ಮಾಣ ಮಾಡುವುದು 'ವ್ಯರ್ಥ ವೆಚ್ಚ'ಕ್ಕೆ ಹೊಸತೊಂದು ವ್ಯಾಖ್ಯಾನದಂತೆ ಕಾಣಿಸುತ್ತಿದೆ. ಬೆಂಗಳೂರಿನ ವಾಯವ್ಯ ಹೆಬ್ಬಾಗಿಲನ್ನು ಸಂಪರ್ಕಿಸುವ ಬಹುಮಾದರಿಗಳ ಸಂಪರ್ಕ ವ್ಯವಸ್ಥೆ ಈಗ ತುಮಕೂರಿಗೆ ಬೇಕಾಗಿದೆ. ತುಮಕೂರಿನ ಕಡೆಯಿಂದ ಉಪನಗರ ರೈಲು ಅಥವಾ ಮುಖ್ಯ ರೈಲಿನಲ್ಲಿ ಬಂದಿಳಿಯುವವರು ಯಾವ ತೊಂದರೆಯೂ ಇಲ್ಲದೆ ಬೆಂಗಳೂರಿನ ಬಿಎಂಟಿಸಿ ಅಥವಾ ಮೆಟ್ರೊ ರೈಲು ಮಾರ್ಗವನ್ನು ಬಳಸಲು ಸಾಧ್ಯವಾಗುವಂತೆ ಆಗಬೇಕು. ತುಮಕೂರಿನ ಕಡೆಯಿಂದ ಬರುವ ರೈಲುಗಳು ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣ, ಕೆಎಸ್‌ಆರ್ ರೈಲು ನಿಲ್ದಾಣದವರೆಗೆ ಯಾವ ಅಡ್ಡಿಗಳೂ ಇಲ್ಲದೆ ಬರುತ್ತಿವೆ. ಅಂದರೆ ರೂ.20,000 ಕೋಟಿ ಅಂದಾಜು ವೆಚ್ಚದ ಮೆಟ್ರೊ ರೈಲು ಸಂಪರ್ಕ ಇಲ್ಲದಿದ್ದರೂ, ತುಮಕೂರಿನ ಕಡೆಯಿಂದ ಬರುವವರು ಬೆಂಗಳೂರಿನ ಹೃದಯಭಾಗವನ್ನು ಆರಾಮವಾಗಿ ತಲುಪಬಲ್ಲರು. ತುಮಕೂರಿಗೆ ಮೆಟ್ರೊ ಸಂಪರ್ಕ ಕಲ್ಪಿಸುವುದು ಸಾರಿಗೆ ವ್ಯವಸ್ಥೆ ಸುಗಮವಾಗಲಿ ಎಂಬ ಉದ್ದೇಶದ ಯೋಜನೆ ಅಲ್ಲ. ಅದು ರಾಜಕೀಯಕ್ಕೆ ಅನುಕೂಲಕರವಾದ, ಹಣಕಾಸಿನ ದೃಷ್ಟಿಯಿಂದ ಬೇಜವಾಬ್ದಾರಿಯ, ತಾಂತ್ರಿಕವಾಗಿ ಕಾರ್ಯಸಾಧು ಅಲ್ಲದ, ಆಡಂಬರದ ಯೋಜನೆಯಂತೆ ಇದೆ. ಡಿಪಿಆರ್ ಉದ್ದೇಶವನ್ನು ಸರ್ಕಾರ ಕೈಬಿಡಬೇಕು. ಸಾರ್ವಜನಿಕರ ಹಿತಾಸಕ್ತಿಯನ್ನು ನಿಜವಾಗಿಯೂ ಕಾಯುವ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಗಮನ ನೀಡಬೇಕು.

## ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ರಾಜ್ಯ ಸರ್ಕಾರ


• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದರೆ, ಮತ್ತೊಂದೆಡೆ ಮಠಗಳು ಬಡವರಿಗೆ, ದುರ್ಬಲರಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಮ್ಮಿಕೊಂಡಿದ್ದ 17ನೇ ಬಿಜಿಎಸ್ ಸಂಸ್ಥಾಪನಾ ದಿನ ಹಾಗೂ ಬಿಜಿಎಸ್ ಉತ್ಸವದ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರು, ಬಡವರು, ಆರ್ಥಿಕ ದುರ್ಬಲರ ಮಕ್ಕಳು ವ್ಯಾಸಂಗ ಮಾಡುವ ಶಾಲೆಗಳಿಗೆ ಸರ್ಕಾರ ಬೀಗ ಹಾಕುತ್ತಿದೆ. ಇಂತಹ ಸಂದರ್ಭದಲ್ಲಿ ಮಠಗಳು ನಾಡಿನ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಕೆಲಸ ಮಾಡುತ್ತಿವೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟುವುದು ಸುಲಭ. ಅವುಗಳ ನಿರ್ವಹಣೆ ಸುಲಭವಲ್ಲ. ಆದರೆ, ದಕ್ಷತೆ, ಕ್ಷಮತೆಯಿಂದ ಮಠಗಳು ನಡೆಸಿಕೊಂಡು ಹೋಗುತ್ತಿವೆ ಎಂದರು. ಮಠಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಸಮಾಜ ಸೇವೆಯ ನಡುವೆಯೇ ಅಧ್ಯಾತ್ಮ ಕ್ಷೇತ್ರದಲ್ಲಿಯೂ ನಿಸ್ವಾರ್ಥವಾಗಿ ತೊಡಗಿಸಿಕೊಂಡಿವೆ ಎಂದು ಸಚಿವರು ಪ್ರತಿಪಾದಿಸಿದರು. ಆದಿಚುಂಚನಗಿರಿ ಮಠದ ನಿರ್ಮಲಾನಂದ ನಾಥ ಸ್ವಾಮೀಜಿ, ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಭಾಗವಹಿಸಿದ್ದರು. ಆದಿಚುನಚಗಿರಿ ಶಿಕ್ಷಣ ಟ್ರಸ್ಟ್ ಮುಖ್ಯಸ್ಥ ಪ್ರಕಾಶನಾಥ ಸ್ವಾಮೀಜಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ. ಮಾಲಾ ಶ್ರೀ, ಆರಾಧನಾ ಹಾಜರಿದ್ದರು.



# ಕ್ಯಾನ್ಸರ್ ಗಡ್ಡೆಗಳ ಬಗ್ಗೆ ಎಚ್ಚರ



### ಕ್ಯಾನ್ಸರ್ ಗಡ್ಡೆಯನ್ನು ಹೇಗೆ ಗುರುತಿಸುವುದು?

**ಕ್ಯಾನ್ಸರ್ ಗಡ್ಡೆಯನ್ನು ಗುರುತಿಸಲು ದೇಹದಲ್ಲಿನ ಬದಲಾವಣೆಗಳಿಗೆ ಗಮನ ಕೊಡುವುದು ಬಹಳ ಮುಖ್ಯ. ಒಂದು ಪ್ರದೇಶದಲ್ಲಿ ದೃಢವಾದ ಗಡ್ಡೆ ನಿಧಾನವಾಗಿ ಬೆಳೆಯುತ್ತಿದ್ದರೆ, ಒತ್ತಿದಾಗ ನೋವು ಉಂಟಾಗದಿದ್ದರೆ, ಚರ್ಮದ ಬಣ್ಣ ಬದಲಾದರೆ ಅಥವಾ ಸುತ್ತಮುತ್ತಲಿನ ಚರ್ಮವು ಹಿಗ್ಗಿದರೆ, ಇದು ಎಚ್ಚರಿಕೆಯ ಸಂಕೇತವಾಗಿರಬಹುದು.**

**ಹೆಚ್ಚುವರಿಯಾಗಿ, ಅನಗತ್ಯ ತೂಕ ನಷ್ಟ, ನಿರಂತರ ಆಯಾಸ, ಹಸಿವಿನ ನಷ್ಟ, ದೀರ್ಘಕಾಲದ ಕೆಮ್ಮು, ಕರುಳಿನ ಚಲನೆಯಲ್ಲಿನ ಬದಲಾವಣೆಗಳು ಅಥವಾ ಅನಿಯಮಿತ ರಕ್ತಸ್ರಾವದಂತಹ ಲಕ್ಷಣಗಳು ದೇಹದಲ್ಲಿ ಗಡ್ಡೆಯನ್ನು ಸೂಚಿಸಬಹುದು. ಸ್ತನಗಳು ಅಥವಾ ವೃಷಣಗಳ ಸ್ವಯಂ ಪರೀಕ್ಷೆಯು ಸಹ ಮುಖ್ಯವಾಗಿದೆ, ಏಕೆಂದರೆ ಇದು ಆರಂಭಿಕ ಲಕ್ಷಣವನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ.**

ಸಾಮಾನ್ಯವಾಗಿ ಕ್ಯಾನ್ಸರ್ ಉಂಟಾದಾಗ ಅದರ ಆರಂಭಿಕ ಲಕ್ಷಣಗಳು ಗಡ್ಡೆಯ ರೂಪದಲ್ಲಿ ಕಾಣಿಸಿಕೊಳ್ಳಲಾರಂಭಿಸುತ್ತದೆ. ಆದರೆ ಇದನ್ನು ಪತ್ತೆಹಚ್ಚೋದು ಹೇಗೆ ಎನ್ನುವುದನ್ನು ತಿಳಿಯೋಣ. ದೇಹದ ಯಾವ ಭಾಗದಲ್ಲಾದರೂ ಒಂದು ಗಂಟು ಅಥವಾ ಗಡ್ಡೆ ರೀತಿಯಲ್ಲಿ ಕಾಣಿಸಿಕೊಂಡರೆ ಜನರ ಮನಸ್ಸಿನಲ್ಲಿ ಬರುವ ಮೊದಲ ಪ್ರಶ್ನೆ, ಅದು ಕ್ಯಾನ್ಸರ್ ಆಗಿದೆಯೇ? ಎನ್ನುವುದು. ಕ್ಯಾನ್ಸರ್ ಗಡ್ಡೆಗಳು ದೇಹದ ಹಲವು ಭಾಗಗಳಲ್ಲಿ ರೂಪುಗೊಳ್ಳಬಹುದು, ಆದರೆ ಪ್ರತಿಯೊಂದು ಗಡ್ಡೆಯೂ ಕ್ಯಾನ್ಸರ್ ಅಲ್ಲ. ಕ್ಯಾನ್ಸರ್ ಗಡ್ಡೆಗಳು ಹೇಗೆ ಕಾಣುತ್ತವೆ, ಅವು ಹೇಗೆ ಭಾಸವಾಗುತ್ತವೆ, ಅವು ಎಷ್ಟು ದೊಡ್ಡದಾಗಿರಬಹುದು ಮತ್ತು ಅವುಗಳನ್ನು ಗುರುತಿಸಲು ಯಾವ ಚಿಹ್ನೆಗಳನ್ನು ಬಳಸಬೇಕು ಎನ್ನುವುದನ್ನು ಆರ್ಟ್ ಆಫ್ ಹೀಲಿಂಗ್ ಕ್ಯಾನ್ಸರ್‌ನ ಆಂಕೊಲಾಜಿಸ್ಟ್ ಡಾ. ಮಂದೀಪ್ ಸಿಂಗ್ ಅವರಿಂದ ತಿಳಿಯೋಣ.

**ದೇಹದ ಯಾವುದೇ ಭಾಗದಲ್ಲಿ ಕ್ಯಾನ್ಸರ್ ಗಡ್ಡೆಗಳು ಬೆಳೆಯಬಹುದು:** ಕ್ಯಾನ್ಸರ್ ಕೋಶಗಳ ಅನಿಯಂತ್ರಿತ ಬೆಳವಣಿಗೆಯು ಯಾವುದೇ ಅಂಗಾಂಶ ಅಥವಾ ಅಂಗದ ಮೇಲೆ ಪರಿಣಾಮ ಬೀರುವುದರಿಂದ, ದೇಹದ ಯಾವುದೇ ಭಾಗದಲ್ಲಿ ಕ್ಯಾನ್ಸರ್ ಗಡ್ಡೆಗಳು ಬೆಳೆಯಬಹುದು. ಈ ಗಡ್ಡೆಗಳು ಸ್ತನ, ಶ್ವಾಸಕೋಶಗಳು, ಯಕೃತ್ತು, ಥೈರಾಯ್ಡ್, ದುಗ್ಧರಸ ಗ್ರಂಥಿಗಳು, ಚರ್ಮ, ವೃಷಣಗಳು, ಅಂಡಾಶಯಗಳು, ಕರುಳುಗಳು, ಮೂಳೆಗಳು ಮತ್ತು ಮೆದುಳಿನಂತಹ ಅಂಗಗಳಲ್ಲಿ ರೂಪುಗೊಳ್ಳಬಹುದು.

**ಲಕ್ಷಣಗಳು ಸ್ಥಳವನ್ನು ಅವಲಂಬಿಸಿ ಬದಲಾಗುತ್ತೆ:** ಗಡ್ಡೆಗಳ ಲಕ್ಷಣಗಳು ಮತ್ತು ಸ್ವರೂಪವು ಸ್ಥಳವನ್ನು ಅವಲಂಬಿಸಿ ಬದಲಾಗುತ್ತದೆ. ಉದಾಹರಣೆಗೆ, ಸ್ತನ ಕ್ಯಾನ್ಸರ್ ಗಡ್ಡೆಗಳು ಸಾಮಾನ್ಯವಾಗಿ ದೃಢವಾಗಿರುತ್ತವೆ ಮತ್ತು ನೋವುರಹಿತವಾಗಿರುತ್ತವೆ, ಆದರೆ ಊದಿಕೊಂಡ ದುಗ್ಧರಸ ಗ್ರಂಥಿಗಳು ಸೋಂಕಿನಿಂದ ಉಂಟಾಗಬಹುದು, ಆದರೆ ಅವು ದೀರ್ಘಕಾಲದವರೆಗೆ ಮುಂದುವರಿದರೆ, ಅವು ಕ್ಯಾನ್ಸರ್‌ನ ಸಂಕೇತವಾಗಬಹುದು.

**ಗಾತ್ರ ಯಾವಾಗಲೂ ಒಂದೇ ಆಗಿರುವುದಿಲ್ಲ:** ಕ್ಯಾನ್ಸರ್ ಗಡ್ಡೆಯ ಗಾತ್ರ ಯಾವಾಗಲೂ ಒಂದೇ ಆಗಿರುವುದಿಲ್ಲ. ಇದು ಆರಂಭದಲ್ಲಿ ಬಟಾಣಿಯಷ್ಟು ಚಿಕ್ಕದಾಗಿರಬಹುದು, ಆದರೆ ಕಾಲಾನಂತರದಲ್ಲಿ, ಅದು ನಿಂಬೆಹಣ್ಣಿನ ಗಾತ್ರಕ್ಕೆ ಅಥವಾ ಇನ್ನೂ ದೊಡ್ಡದಾಗಿ ಬೆಳೆಯಬಹುದು.

ಮೇದೋಜ್ಜೀರಕ ಗ್ರಂಥಿ ಅಥವಾ ಶ್ವಾಸಕೋಶದ ಕ್ಯಾನ್ಸರ್‌ನಂತಹ ಕೆಲವು ಕ್ಯಾನ್ಸರ್‌ಗಳಲ್ಲಿ, ಮತ್ತು ಸಣ್ಣ ಗಡ್ಡೆಗಳು ಸಹ ಆರಂಭಿಕ ಹಂತಗಳಲ್ಲಿ ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು.

ಏಕೆಂದರೆ ಅವು ಆಂತರಿಕ ಅಂಗಗಳಲ್ಲಿ ಲಕ್ಷಣಗಳಿಲ್ಲದೆ ಬೆಳೆಯುತ್ತಲೇ ಇರುತ್ತವೆ. ಮತ್ತೊಂದೆಡೆ, ಚರ್ಮ ಅಥವಾ ಥೈರಾಯ್ಡ್‌ನಲ್ಲಿರುವ ಗಡ್ಡೆಗಳು ಹೆಚ್ಚಾಗಿ ಮೊದಲೇ ಕಾಣಿಸಿಕೊಳ್ಳುತ್ತವೆ, ಇದು ಆರಂಭಿಕ ಪತ್ತೆಹಚ್ಚುವಿಕೆಗೆ ಸಹಕಾರಿಯಾಗಿದೆ.

# ಹೊಕ್ಕುಳಿನ ಸುತ್ತ ನೋವು ಕಾಣಿಸಿಕೊಳ್ಳುವುದು ಯಾಕೆ?

ಕೆಲವೊಮ್ಮೆ ಹೊಟ್ಟೆಯ ಹೊಕ್ಕಳಿನ ಜಾಗದಲ್ಲಿ ಇದ್ದಕ್ಕಿದ್ದಂತೆ ಸಣ್ಣದಾಗಿ ನೋವು ಕಾಣಿಸಿಕೊಳ್ಳಲು ಶುರುವಾಗುತ್ತದೆ. ಆದರೆ ಹೆಚ್ಚಿನವರು ಇದೊಂದು ಸಾಮಾನ್ಯ ಆರೋಗ್ಯ ಸಮಸ್ಯೆಗಳು ಎಂದು ಹಾಗೆಯೇ ನಿರ್ಲಕ್ಷ್ಯ ಮಾಡುತ್ತಾ ಬರುತ್ತಾರೆ, ಆದರೆ ಈ ಸಮಸ್ಯೆ ತಿಂಗಳಾದರೂ ಕಡಿಮೆ ಆಗದಿದ್ದರೆ, ಕೂಡಲೇ ವೈದ್ಯರ ಬಳಿಗೆ ಹೋಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಹೊಟ್ಟೆಯ ಹೊಕ್ಕುಳ ಪ್ರದೇಶವು ತುಂಬಾ ಸೂಕ್ಷ್ಮವಾಗಿರುತ್ತದೆ. ಕೆಲವೊಮ್ಮೆ ನಿಧಾನಕ್ಕೆ ಈ ಭಾಗದಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಆದರೆ ಇದೆಲ್ಲಾ ಹೊಟ್ಟೆನೋವು ಎಂದು ಭಾವಿಸಿ ನಾವು ಹೊಕ್ಕುಳ ಸುತ್ತಲಿನ ನೋವನ್ನು ನಿರ್ಲಕ್ಷಿಸುತ್ತೇವೆ. ವಿಶೇಷವಾಗಿ ಹೊಕ್ಕುಳಿನ ಸುತ್ತ ನೋವು ಮಹಿಳೆಯರಲ್ಲಿ ಸಾಮಾನ್ಯ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ಕೆಲವೊಮ್ಮೆ ಜೀರ್ಣಕ್ರಿಯೆಯ ಹೊರತಾಗಿ ಇದರ ಹಿಂದೆ ಇನ್ನೂ ಅನೇಕ ಕಾರಣಗಳಿರಬಹುದು. ಹೊಕ್ಕುಳ ಸುತ್ತಲಿನ ನೋವಿನ ಹಿಂದಿನ ಕಾರಣಗಳಲ್ಲಿ ಒಂದಾದ ಅಪೆಂಡಿಸೈಟಿಸ್‌ನಿಂದಲೂ ಈ ನೋವು ಉಂಟಾಗುತ್ತದೆ. ಅಪೆಂಡಿಕ್ಸ್‌ನಲ್ಲಿ ಊತ ಅಥವಾ ಕೀವು ತುಂಬುವಿಕೆಯಿಂದ ಈ ನೋವು ಉಂಟಾಗಬಹುದು. ಒಂದು ವೇಳೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡದೆ ಬಿಟ್ಟರೆ, ಅಪೆಂಡಿಕ್ಸ್‌ನಲ್ಲಿ ಸೋಂಕು ಇರಬಹುದು. ಈ ಲೇಖನದಲ್ಲಿ, ಹೊಕ್ಕುಳ ಸುತ್ತಲಿನ ನೋವಿನ ಹಿಂದಿರುವ ಕಾರಣಗಳ ಬಗ್ಗೆ ನೋಡೋಣ..

**ಗ್ಯಾಸ್ಟ್ರಿಕ್ ಮತ್ತು ಅಜೀರ್ಣದಿಂದ ಕೂಡ ಹೀಗಾಗುತ್ತದೆ!** ಕೆಲವೊಮ್ಮೆ ಗ್ಯಾಸ್ಟ್ರಿಕ್,ಅಜೀರ್ಣದಿಂದ ಕೂಡ ಈ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆ ಆದರೆ ನಿಮಗೆ ಗೊತ್ತಿರಲಿ ಗ್ಯಾಸ್ಟ್ರಿಕ್ ನೋವು ಸಾಮಾನ್ಯವಾಗಿ ಊಟ ಮಾಡಿದ ನಂತರ ಕಾಣಿಸಿಕೊಳ್ಳುತ್ತದೆ ಮತ್ತು ಸ್ವಲ್ಪ ಸಮಯದ ನಂತರ ಹೋಗುತ್ತದೆ. ಒಂದು ವೇಳೆ ಈ ನೋವು ಇದಕ್ಕಿಂತ ಹೆಚ್ಚು ದಿನಗಳ ಕಾಲ ಇದ್ದರೆ ಅಥವಾ ಪ್ರತಿದಿನ ಕಾಣಿಸಿ ಕೊಳ್ಳುತ್ತಾ ಇದ್ದರೆ, ಬೇರೆ ಯಾವುದೇ ಆರೋಗ್ಯ ಸಮಸ್ಯೆ ಇರಲೂ ಬಹುದು ಕೂಡಲೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಂಡರೆ ಒಳ್ಳೆಯದು.



**ಎಂಡೊಮೆಟ್ರಿಯೊಸಿಸ್:** ಮಹಿಳೆಯರಲ್ಲಿ ಹೊಕ್ಕುಳಿನ ಬಳಿ ನೋವಿಗೆ ಎಂಡೊಮೆಟ್ರಿಯೊಸಿಸ್ ಕೂಡ ಒಂದು ಪ್ರಮುಖ ಕಾರಣವಾಗಬಹುದು. ಇದು ಗರ್ಭಾಶಯದ ಒಳ ಪದರದಂತಹ ಜೀವಕೋಶಗಳು ದೇಹದ ಇತರ ಭಾಗಗಳಲ್ಲಿ ಬೆಳೆಯಲು ಪ್ರಾರಂಭಿಸುವ ಸ್ಥಿತಿಯಾಗಿದೆ. ಕೆಲವೊಮ್ಮೆ ಈ ಜೀವ ಕೋಶಗಳು ಕರುಳು ಅಥವಾ ಕಿಬ್ಬೊಟ್ಟೆಯ ಗೋಡೆಯನ್ನು ತಲುಪಿ, ಹೊಕ್ಕುಳಿನ ಬಳಿ ನೋವನ್ನು ಉಂಟುಮಾಡುತ್ತವೆ. ಮುಟ್ಟಿನ ಸಮಯದಲ್ಲಿ ಈ ನೋವು ಮತ್ತಷ್ಟು ಹೆಚ್ಚಾಗಬಹುದು.

**ಗರ್ಭಾಶಯ, ಫಾಲೋಪಿಯನ್ ಟ್ಯೂಬ್‌ಗಳು:** ಗರ್ಭಾಶಯ, ಫಾಲೋಪಿಯನ್ ಟ್ಯೂಬ್‌ಗಳು ಅಥವಾ ಅಂಡಾಶಯಗಳಿಗೆ ಹರಡುವ ಸೋಂಕುಗಳಲ್ಲಿ ಹೊಕ್ಕುಳಿನ ಸುತ್ತ ನೋವು ಕಂಡುಬರುತ್ತದೆ. ನೋವಿನ ಜೊತೆಗೆ, ಜ್ವರ, ಸ್ರಾವ ಅಥವಾ ದೌರ್ಬಲ್ಯವೂ ಇರಬಹುದು.

**ಹರ್ನಿಯಾದಿಂದ ಕೂಡ ಹೀಗಾಗುತ್ತದೆಯಂತೆ:** ಹೊಕ್ಕುಳಿನ ಬಳಿ ಊತವಿದ್ದರೆ, ಅದು ಹರ್ನಿಯಾದ ಲಕ್ಷಣವಾಗಿರ ಬಹುದು. ಕರುಳಿನಲ್ಲಿ ಸಮಸ್ಯೆ ಇದ್ದಾಗ ಅವು ಕಿಬ್ಬೊಟ್ಟೆಯ ಗೋಡೆಗೆ ಅಂಟಿಕೊಳ್ಳಲು ಪ್ರಾರಂಭಿಸಿದಾಗ ಇದು ಸಂಭವಿಸುತ್ತದೆ, ಊತದ ಸಮಸ್ಯೆ ಹೆಚ್ಚಾಗುತ್ತದೆ!

### ಅಜೀರ್ಣ ಮಲಬದ್ಧತೆ ಸಮಸ್ಯೆ ಕಾಣಿಸಿಕೊಂಡರೆ

**ಅಜೀರ್ಣ ಸಮಸ್ಯೆ ಕಾಣಿಸಿಕೊಂಡರೂ ಕೂಡ ಕೆಲವೊಮ್ಮೆ ನೋವು ಕಾಣಿಸಿಕೊಳ್ಳಬಹುದು ಅಥವಾ ಹೆಚ್ಚು ಖಾರವಿರುವ ಆಹಾರವನ್ನು ಸೇವಿಸುವವರಿಗೆ ಈ ಸಮಸ್ಯೆ ಇರಬಹುದು. ಮಲಬದ್ಧತೆ ಹೊಕ್ಕುಳಿನ ಸುತ್ತ ನೋವು ಉಂಟುಮಾಡಬಹುದು. ಮಲಬದ್ಧತೆಯ ಹಿಂದೆ ಹಲವು ಕಾರಣಗಳಿರಬಹುದು, ಉದಾಹರಣೆಗೆ ನಾರಿನಂಶ ಸೇವಿಸದಿರುವುದು, ದೈಹಿಕವಾಗಿ ಸಕ್ರಿಯವಾಗಿಲ್ಲದಿರುವುದು ಮತ್ತು ಸಾಕಷ್ಟು ನೀರು ಕುಡಿಯದಿರುವುದು ಇತ್ಯಾದಿ.**

## ಪ್ರೇಮ್‌ರಿಂದ ಕಿದ್ವಾಯಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

### ಹಂಸ ಸಾಂಸ್ಕೃತಿಕ –ಸಾಮಾಜಿಕ ಸಿಂಚನ; ಹಂಸ ಜ್ಯೋತಿ ಟ್ರಸ್ಟ್ ನಿಂದ 70ನೇ ಕನ್ನಡ ನಾಡ ಹಬ್ಬ



ಉದಯವಾಹಿನಿ ಚಿತ್ರ


• ಉದಯವಾಹಿನಿ, ಬೆಂಗಳೂರು

ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವ ಹಂಸ ಜ್ಯೋತಿ ಟ್ರಸ್ಟ್ 70ನೇ ಕನ್ನಡ ನಾಡ ಹಬ್ಬದ ಪ್ರಯುಕ್ತ ಹಂಸ ಸಾಂಸ್ಕೃತಿಕ ಸಾಮಾಜಿಕ ಸಿಂಚನ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ನಗರದ ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಯ 1000 ರೋಗಿಗಳಿಗೆ ಉಚಿತವಾಗಿ ಹಣ್ಣು ಹಂಪಲು, ಬನ್ನು ಮತ್ತು ಸಿಹಿ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಯ ನಿರ್ದೇಶಕ ಡಾ. ಟಿ ನವೀನ್ ಸಮಾರಂಭ ಉದ್ಘಾಟಿಸಿದರು ಹಿರಿಯರಂಗ ಸಂಘಟಕ ಶ್ರೀನಿವಾಸ ಜಿ ಕಪ್ಪಣ್ಣ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಖ್ಯಾತ ಚಲನಚಿತ್ರ ನಟ ಲವ್ಲಿ ಸ್ಟಾರ್ ಪ್ರೇಮ್ ಮಾತನಾಡುತ್ತ ಕಳೆದ 27 ವರ್ಷಗಳಿಂದ ದಾನಿಗಳ ನೆರವಿನಿಂದ ಈ ಉಪಯುಕ್ತ ಸೇವಾ ಕಾರ್ಯ ಮಾಡುತ್ತ ಸಾಗಿರುವ ಹಂಸ ಜ್ಯೋತಿ ಟ್ರಸ್ಟ್‌ನ ಕಾರ್ಯ ಶ್ಲಾಘನೀಯ ಎಂದು ಆಭಿನಂದಿಸಿದರು.ಮಾಜಿ ಶಾಸಕ ಎಸ್ ಬಾಲರಾಜ್, ಕರ್ನಾಟಕ ಪದ್ಮಶಾಲಿ ಸಂಘದ ಅಧ್ಯಕ್ಷ ಎನ್ ಜಗದೀಶ್, ಚಲನಚಿತ್ರ ನಿರ್ಮಾಪಕಿ ಡಾ.ಸುಕನ್ಯಾ ಹಿರೇಮಠ, ಹಂಸ ಜ್ಯೋತಿ ಟ್ರಸ್ಟ್‌ನ ಸಂಸ್ಥಾಪಕ ವ್ಯವಸ್ಥಾಪಕ ಟ್ರಸ್ಟಿ ಎಂ ಮುರುಳಿಧರ ಮತ್ತು ಕಾರ್ಯನಿರ್ವಾಹಕ ಟ್ರಸ್ಟಿ, ವಿಜಯ ಮುರುಳಿಧರ ಮೊದಲಾದವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಹಲವು ಗಾಯಕರು ಕನ್ನಡ ಗೀತೆಗಳ ಗಾಯನದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

## ನಾಗರಬಾವಿಯಲ್ಲಿ ಅನಧಿಕೃತ ಶೆಡ್‌ಗಳ ತೆರವು; ರೂ.40 ಕೋಟಿ ಬಿಡಿಎ ಆಸ್ತಿ ವಶ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿದ್ದು, ನಾಗರಬಾವಿ ಬಡಾವಣೆಯಲ್ಲಿ ರೂ.40 ಕೋಟಿ ಆಸ್ತಿ ವಶಪಡಿಸಿಕೊಂಡಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ನಾಗರಬಾವಿ ಗ್ರಾಮದ ಸರ್ವೆ ನಂ. 35ರಲ್ಲಿ 1 ಎಕರೆ ಮತ್ತು ಸರ್ವೆ ನಂ. 19 ಹಾಗೂ 138ರ 20 ಗುಂಟೆ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡಿತು. ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.



# ರಾಮಾಯಣ

### ಶ್ರೀ ರಾಮನು ಲಕ್ಷ್ಮಣನನ್ನು ನಿಂದಿಸಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಆ ಬಳಿಕ ಶ್ರೀರಾಮನು ದುಃಖದಿಂದ ಕುಗಿದ್ದ ಲಕ್ಷ್ಮಣನನ್ನು ಕುರಿತು ಹೀಗೆ ಹೇಳತೊಡಗಿದನು: ಎಲೈ ಲಕ್ಷ್ಮಣ, ಸೀತಾದೇವಿಯನ್ನು ಬಿಟ್ಟು ನೀನು ಬರಬಹುದೆ ನಾವು ದಂಡಕಾರಣ್ಯದಲ್ಲಿ ಮೂವರಾಗಿದ್ದೆವು. ಈಗ ಇಬ್ಬರಾದೆವು. ಸೀತೆಯು ಎಲ್ಲಿದ್ದಾಳೆ

ರಾಜ್ಯಭ್ರಷ್ಟನಾಗಿ ದೈನ್ಯ ವೃತ್ತಿಯಿಂದ ದಂಡಕಾರಣ್ಯದಲ್ಲಿ ಸಂಚರಿಸಿಕೊಂಡಿರುವ ನನ್ನ ದುಃಖವನ್ನು ಪರಿಹರಿಸುವ ಶೋಭನಾಂಗಿಯಾದ ಸೀತಾದೇವಿಯು ಎಲ್ಲಿಗೆ ಹೋದಳೊ! ನಾನು ಸೀತಾದೇವಿಯನ್ನುಳಿದು ಸಮಸ್ತ ರಾಜ್ಯಾಧಿಪತ್ಯವನ್ನಾದರೂ ದೇವಲೋಕಾಧಿಪತ್ಯವನ್ನಾದರೂ ಕೊಟ್ಟರೂ ಬಯಸುವವನಲ್ಲ. ನನ್ನ ಪ್ರಿಯಳಾದ ಸೀತಾದೇವಿಯು ಇದ್ದಾಳೋ ಇಲ್ಲವೋ! ಲಕ್ಷ್ಮಣ, ಸೀತಾದೇವಿಯ ನಿಮಿತ್ತವಾಗಿ ನಾನು ಶರೀರತ್ಯಾಗವನ್ನು ಮಾಡಿದ ಮೇಲೆ, ನೀನು ದುಃಖದಿಂದ ದೇಶತ್ಯಾಗವನ್ನು ಮಾಡಿದರೆ ಕೈಕೇಯಾದೇವಿಯು ಆಕಂಟಕವಾಗಿ ರಾಜ್ಯವನ್ನು ಪಡೆದು ಸುಖದಿಂದ ಇದ್ದಾಳು.

ಕೌಸಲ್ಯಾ ದೇವಿಯು ಮೃತಪುತ್ರಳಾಗಿ ಶೋಕದಿಂದ ದೀನಳಾಗಿ ಕೈಕೇಯಾದೇವಿಯು ಹೇಳಿದಂತೆ ಇರಬೇಕಾದೀತಲ್ಲವೆ ಲಕ್ಷ್ಮಣ, ಸೀತಾದೇವಿಯು ಜೀವದಿಂದ ಆಶ್ರಮದಲ್ಲಿದ್ದರೆ ನಾನು ಆ ಆಶ್ರಮವನ್ನು ಪ್ರವೇಶಿಸುವೆನು, ಆ ದೇವಿಯು ಲಯವಾದ ಪಕ್ಷದಲ್ಲಿ ನಾನು ಪ್ರಾಣಗಳನ್ನು ಬಿಡುವೆನು. ಲಕ್ಷ್ಮಣ, ನಾನು ಆಶ್ರಮಕ್ಕೆ ಹೋದರೆ ಸೀತಾದೇವಿಯು ಮುಗುಳುನಗೆಯೊಡಗೂಡಿ ನನ್ನೊಡನೆ ಸಂಭಾಷಣೆ ಮಾಡದ ಪಕ್ಷದಲ್ಲಿ ನಾನು ಬದುಕಲಾರೆ. ಲಕ್ಷ್ಮಣ, ಸೀತಾದೇವಿಯು ಜೀವದಿಂದಿದ್ದಾಳೋ ಇಲ್ಲವೊ ಹೇಳು. ನೀನು ಮೈಮರೆತಿದ್ದಾಗ ರಾಕ್ಷಸರು ಆಕೆಯನ್ನು ಭಕ್ಷಣ ಮಾಡಿದರೋ ಏನೋ ತಿಳಿಯಲಿಲ್ಲ. ಸುಕುಮಾರಾಂಗಿಯಾದ ಸೀತಾದೇವಿಯು ನನ್ನ ವಿಯೋಗ ದುಃಖದಿಂದ ಕಂಗೆಟ್ಟು ಶೋಕಿಸುತ್ತಿದ್ದಾಳೆಯೆ ಮಾಯಾಮೃಗವಾಗಿ ಬಂದ ದುರಾತ್ಮನಾದ ಮಾರೀಚನು ನನ್ನ ತರಹತಿಯಿಂದ ಗಾಯಪಡೆದು ಬೀಳುವಾಗ ಹಾ ಲಕ್ಷ್ಮಣಾ ಎಂದು ಉಚ್ಚಸ್ವರದಲ್ಲಿ ಕೂಗಿ ಸತ್ತನು. ಆತನ ಧ್ವನಿಯಿಂದ ನಿನಗೂ ಭಯ ಹುಟ್ಟಿರಬೇಕು. ಸೀತಾದೇವಿಯೂ ಭಯಪಟ್ಟು ನಿನ್ನನ್ನು ಕಳುಹಿಸಲು ನೀನು ಶೀಘ್ರವಾಗಿ ಬಂದಿದ್ದೀಯೆ. ಲಕ್ಷ್ಮಣ, ನೀನು ವನ ಮಧ್ಯದಲ್ಲಿ ಸೀತಾದೇವಿಯನ್ನು ಒಂಟಿಯಾಗಿ ಬಿಟ್ಟು ಬಂದದ್ದು ಸರ್ವಥಾ ಯುಕ್ತವಲ್ಲ, ನಾನು ಖರನನ್ನು ಕೊಂದದ್ದರಿಂದ ರಾಕ್ಷಸರೆಲ್ಲರೂ ಕೂಡಿ ನನಗೆ ಉಪದ್ರವ ಕೊಡಲು ಸಮಯವನ್ನು ನಿರೀಕ್ಷಿಸುತ್ತಿದ್ದಾರೆ. ಅಂಥ ರಾಕ್ಷಸರಿಗೆ ನೀನು ಅವಕಾಶವನ್ನು ಕೊಟ್ಟು ಸೀತಾದೇವಿಯನ್ನು ಬಿಟ್ಟು ಬಂದೆ. ರಾಕ್ಷಸರು ಸೀತೆಯನ್ನು ಕೊಂದಿರಬೇಕು, ಸಂಶಯವಿಲ್ಲ, ಅಕಟಕಟಾ! ಇಂಥ ದುಃಖವು ಪ್ರಾಪ್ತವಾದ ಪಕ್ಷದಲ್ಲಿ ಮುಂದೆ ನಾವು ಮಾಡಬೇಕಾದ ಕೃತ್ಯವಾದರೂ ಏನು

ಮುಂದುವರಿಯುವುದು...

# ಕಿವಿಹಣ್ಣು, ಪಪ್ಪಾಯಿ ಪ್ಲೇಟ್‌ಲೆಟ್ ಸಂಖ್ಯೆ ಹೆಚ್ಚಿಸಲು ಯಾವುದು ಸಹಕಾರಿ

ಕಿವಿ, ಪಪ್ಪಾಯಿ ಇವೆರಡರಲ್ಲಿ ಪ್ಲೇಟ್‌ಲೆಟ್‌ಗಳನ್ನು ಹೆಚ್ಚಿಸುವಲ್ಲಿ ಯಾವುದು ಸಹಾಯಕವಾಗಿವೆ. ಇವೆರಡರಲ್ಲಿ ಯಾವುದು ಹೆಚ್ಚು ಪರಿಣಾಮಕಾರಿ ಎನ್ನುವುದನ್ನು ತಿಳಿಯೋಣ. ಡೆಂಗ್ಯೂ, ಮಲೇರಿಯಾ, ವೈರಲ್ ಜ್ವರದ ಸಮಯದಲ್ಲಿ, ಪ್ಲೇಟ್‌ಲೆಟ್‌ಗಳು ವೇಗವಾಗಿ ಕಡಿಮೆಯಾಗುತ್ತವೆ, ಇದು ದೇಹದ ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ದೇಹದಲ್ಲಿ ಪ್ಲೇಟ್ ಲೆಟ್‌ಗಳ ಮಟ್ಟ ಕಡಿಮೆಯಾದಾಗ ದೇಹದಲ್ಲಿ ಆಯಾಸ, ರಕ್ತಸ್ರಾವ ಮತ್ತು ಸೋಂಕಿನ ಅಪಾಯ ಹೆಚ್ಚಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಪ್ಲೇಟ್‌ಲೆಟ್ ಹೆಚ್ಚಿಸಲು ಕೆಲವರು ಕಿವಿ ಹಣ್ಣು ತಿನ್ನಬೇಕು ಎನ್ನುತ್ತಾರೆ ಇನ್ನೂ ಕೆಲವರು ಪಪ್ಪಾಯಿ ತಿನ್ನಬೇಕು ಎನ್ನುತ್ತಾರೆ.



**ವಿಟಮಿನ್ ಸಿ, ಉತ್ಕರ್ಷಣ ನಿರೋಧಕಗಳ ಮೂಲ:** ಕಿವಿ ವಿಟಮಿನ್ ಸಿ ಯಲ್ಲಿ ಸಮೃದ್ಧವಾಗಿದೆ. ಇದು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಪ್ಲೇಟ್‌ಲೆಟ್‌ಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಉತ್ಕರ್ಷಣ ನಿರೋಧಕಗಳು ದೇಹವನ್ನು ಸೋಂಕಿನಿಂದ ರಕ್ಷಿಸುತ್ತದೆ ಮತ್ತು ರಕ್ತ ಕಣಗಳನ್ನು ಸರಿಪಡಿಸಲು ಸಹಾಯ ಮಾಡುತ್ತದೆ. ಕಿವಿಯಲ್ಲಿ ವಿಟಮಿನ್ ಕೆ ಇರುತ್ತದೆ, ಇದು ರಕ್ತ ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುತ್ತದೆ ಮತ್ತು ಪ್ಲೇಟ್‌ಲೆಟ್‌ಗಳ ಸಂಖ್ಯೆಯನ್ನು ಸ್ಥಿರವಾಗಿರಿಸುತ್ತದೆ.

**ನಾರು ಮತ್ತು ಫೋಲೇಟ್‌ನಲ್ಲಿ ಸಮೃದ್ಧವಾಗಿದೆ:** ಕಿವಿಯಲ್ಲಿರುವ ಫೋಲೇಟ್ ಮತ್ತು ಫೈಬರ್ ಪ್ಲೇಟ್‌ಲೆಟ್‌ಗಳ ರಚನೆಗೆ ಸಹಾಯ ಮಾಡುತ್ತದೆ, ರಕ್ತ ಪರಿಚಲನೆ ಸುಧಾರಿಸುತ್ತದೆ. ಕಿವಿ ಉರಿಯೂತದ ಗುಣಲಕ್ಷಣಗಳನ್ನು ಹೊಂದಿದೆ, ಇದು ಉರಿಯೂತವನ್ನು ಕಡಿಮೆ ಮಾಡುವ ಮೂಲಕ ದೇಹವು ವೇಗವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ.

**ವಿಟಮಿನ್ ಎ, ಸಿ ಮತ್ತು ಫೋಲೇಟ್‌ನಲ್ಲಿ ಸಮೃದ್ಧವಾಗಿದೆ:** ಪಪ್ಪಾಯಿ ಪೌಷ್ಟಿಕ–ಸಮೃದ್ಧ ಹಣ್ಣಾಗಿದ್ದು, ಕಡಿಮೆ ಕ್ಯಾಲೋರಿಗಳನ್ನು ಹೊಂದಿದೆ ಮತ್ತು ವಿಟಮಿನ್ ಎ ಮತ್ತು ಸಿ, ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಅಧಿಕವಾಗಿದೆ. ಇದು ಫೋಲೇಟ್, ಪೊಟ್ಯಾಸಿಯಮ್, ಮೆಗ್ನೀಸಿಯಮ್ ಮತ್ತು ಇತರ ಪ್ರಯೋಜನಕಾರಿ ಸಂಯುಕ್ತಗಳನ್ನು ಸಹ ಒದಗಿಸುತ್ತದೆ. ಇದು ಪ್ಲೇಟ್‌ಲೆಟ್‌ಗಳನ್ನು ಹೆಚ್ಚಿಸುವುದರ ಜೊತೆಗೆ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ.

**ಪಪ್ಪಾಯಿ ಎಲೆ ರಸ:** ಪ್ಲೇಟ್‌ಲೆಟ್‌ಗಳನ್ನು ವೇಗವಾಗಿ ಹೆಚ್ಚಿಸಲು ಪಪ್ಪಾಯಿ ಎಲೆ ರಸವನ್ನು ಅತ್ಯಂತ ಪರಿಣಾಮಕಾರಿ ಮತ್ತು ನೈಸರ್ಗಿಕ ಪರಿಹಾರವೆಂದು ಪರಿಗಣಿಸಲಾಗಿದೆ. ಇದು ಪಪ್ಪಾಯಿನ್ ಕಿಣ್ವಗಳನ್ನು ಹೊಂದಿರುತ್ತದೆ, ಇದು ಪ್ಲೇಟ್‌ಲೆಟ್‌ಗಳ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಪಪ್ಪಾಯಿಯು ಆಂಟಿ–ವೈರಲ್ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದೆ, ಇದು ದೇಹವನ್ನು ಸೋಂಕುಗಳಿಂದ ರಕ್ಷಿಸುತ್ತದೆ ಮತ್ತು ಪ್ಲೇಟ್‌ಲೆಟ್‌ಗಳ ಕ್ಷೀಣತೆಯನ್ನು ತಡೆಯುತ್ತದೆ.

**ಡೆಂಗ್ಯೂ ಮತ್ತು ಮಲೇರಿಯಾದಲ್ಲಿ ಪರಿಣಾಮಕಾರಿ:** ಸಂಶೋಧನೆಯ ಪ್ರಕಾರ, ಡೆಂಗ್ಯೂ ಮತ್ತು ಮಲೇರಿಯಾ ಸಮಯದಲ್ಲಿ ಪಪ್ಪಾಯಿ ರಸವು ಪ್ಲೇಟ್‌ಲೆಟ್‌ಗಳ ಸಂಖ್ಯೆಯಲ್ಲಿನ ಇಳಿಕೆಯನ್ನು ತ್ವರಿತವಾಗಿ ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ರೋಗಿಯ ಚೇತರಿಕೆಯನ್ನು ವೇಗಗೊಳಿಸುತ್ತದೆ.

**ಕಿವಿ ಅಥವಾ ಪಪ್ಪಾಯಿ ಯಾವುದು ಉತ್ತಮ:** ನಾವು ಪ್ಲೇಟ್ ಲೆಟ್‌ಗಳನ್ನು ವೇಗವಾಗಿ ಹೆಚ್ಚಿಸುವ ಬಗ್ಗೆ ಮಾತನಾಡಿದರೆ, ಪಪ್ಪಾಯಿ ಎಲೆ ರಸವನ್ನು ಕಿವಿಗಿಂತ ಹೆಚ್ಚು ಪರಿಣಾಮಕಾರಿ ಎಂದು ಪರಿಗಣಿಸಲಾಗುತ್ತದೆ. ಇದು ಪ್ಲೇಟ್‌ಲೆಟ್‌ಗಳ ರಚನೆಯನ್ನು ವೇಗಗೊಳಿಸುತ್ತದೆ ಮತ್ತು ಡೆಂಗ್ಯೂ, ಮಲೇರಿಯಾದಂತಹ ರೋಗಗಳಲ್ಲಿ ತಕ್ಷಣದ ಪರಿಣಾಮವನ್ನು ತೋರಿಸುತ್ತದೆ. ಆದರೆ ಕಿವಿಹಣ್ಣು ಕೂಡಾ ಪ್ಲೇಟ್‌ಲೆಟ್‌ಗಳನ್ನು ಕ್ರಮೇಣ ಹೆಚ್ಚಿಸುವಲ್ಲಿ ಮತ್ತು ರೋಗನಿರೋಧಕ ಶಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

### ಕಿವಿಯಲ್ಲಿರುವ ಪೋಷಕಾಂಶಗಳು

**ಕಿವಿ ಹಣ್ಣುಗಳು ವಿಟಮಿನ್ ಸಿ, ಆಂಟಿಆಕ್ಸಿಡೆಂಟ್‌ಗಳು ಮತ್ತು ಫೈಬರ್‌ನ ಉತ್ತಮ ಮೂಲವಾಗಿದೆ. ವಿಟಮಿನ್ ಸಿ, ಕೋಲೀನ್, ಲುಟೀನ್ ಮತ್ತು ಜಿಯಾಕ್ಸಾಂಥಿನ್ ಸೇರಿದಂತೆ ಆಂಟಿಆಕ್ಸಿಡೆಂಟ್‌ಗಳು ದೇಹದಿಂದ ಫ್ರೀ ರಾಡಿಕಲ್‌ಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತವೆ. ಫ್ರೀ ರಾಡಿಕಲ್‌ಗಳು ದೇಹವು ಚಯಾಪಚಯ ಇತರ ಪ್ರಕ್ರಿಯೆಗಳ ಸಮಯದಲ್ಲಿ ಉತ್ಪಾದಿಸುವ ಅಸ್ಥಿರ ಅಣುಗಳಾಗಿವೆ.**

# ಎಲ್ಲೆಂದರಲ್ಲಿ ರಾರಾಜಿಸುವ ಬ್ಯಾನರ್, ಪ್ಲೆಕ್ಸ್‌ಗಳು: ನಾಗರಿಕರ ಜೀವಕ್ಕೂ ಅಪಾಯ

• ಉದಯವಾಹಿನಿ, ಹುಬ್ಬಳ್ಳಿ

ನಗರದ ಪ್ರಮುಖ ವೃತ್ತಗಳು, ರಸ್ತೆ ಬದಿಯ ಮರ, ವಿದ್ಯುತ್ ಕಂಬಗಳು, ಪಾದಚಾರಿ ಮಾರ್ಗಗಳಲ್ಲಿ ರಾರಾಜಿಸುವ ಬ್ಯಾನರ್‌ಗಳು, ಪ್ಲೆಕ್ಸ್‌ಗಳು, ಬಾವುಟಗಳು, ನೇತಾಡುವ ಕೇಬಲ್‌ಗಳು ನಗರದ ಅಂದವನ್ನು ಕೆಡಿಸುವ ಜೊತೆಗೆ ಸಾರ್ವಜನಿಕರಿಗೂ ಸಮಸ್ಯೆ ತಂದೊಡ್ಡಿವೆ.

ವಾಣಿಜ್ಯ, ಧಾರ್ಮಿಕ ಹಾಗೂ ರಾಜಕೀಯ ಚಟುವಟಿಕೆಗಳು ನಗರದಲ್ಲಿ ಹೆಚ್ಚಾಗಿ ನಡೆಯುತ್ತಿವೆ. ಹೊಸ ಹೊಸ ಮಳಿಗೆಗಳು ತಲೆ ಎತ್ತುತ್ತಿವೆ. ಪಿಜಿಗಳು, ಕೋಚಿಂಗ್ ಸೆಂಟರ್‌ಗಳೂ ಹೆಚ್ಚಾಗಿವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಜನರನ್ನು ಸೆಳೆಯುವ ಪ್ರಚಾರ ತಂತ್ರವಾಗಿ ಎಲ್ಲೆಂದರಲ್ಲಿ ಜಾಹೀರಾತುಗಳನ್ನು ಅಂಟಿಸಲಾಗುತ್ತಿದೆ. ಜನಪ್ರಿಯ ರಾಜಕಾರಣಿಗಳಿಂದ ಹಿಡಿದು ಸ್ಥಳೀಯ ಪ್ರಮುಖರ ಜನ್ಮದಿನಕ್ಕೆ ಶುಭಕೋರುವ, ಸಭೆ ಸಮಾರಂಭಕ್ಕೆ ಬೆಂಬಲಿಗರನ್ನು ಆಹ್ವಾನಿಸುವ, ರಾಜ್ಯ-ರಾಷ್ಟ್ರೀಯ ನಾಯಕರು ಬರುತ್ತಾರೆಂದರೆ ಅವರನ್ನು ಸ್ವಾಗತಿಸಲು ನಗರದಾದ್ಯಂತ ಬ್ಯಾನರ್‌ಗಳ ಕಣ್ಣಿಗೆ ರಾಚುತ್ತವೆ.

ಕೆಲವೊಮ್ಮೆ ಬ್ಯಾನರ್‌ಗಳನ್ನು ಅಳವಡಿಸಲು ಮಹಾನಗರ ಪಾಲಿಕೆಯಿಂದ ಅನುಮತಿ ಪಡೆಯಲಾಗುತ್ತದೆಯಾದರೂ, ನಿಗದಿತ ಅವಧಿ ಬಳಿಕ ಅವುಗಳನ್ನು ತೆರವುಗೊಳಿಸುವ ಷರತ್ತನ್ನೂ ಒಳಗೊಂಡಿರುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಕಾರ್ಯಕ್ರಮದ ಆಯೋಜಕರು ಅನುಮತಿ ಕೇಳುವ ಗೋಜಿಗೆ ಹೋಗುವುದೇ ಇಲ್ಲ. ಪ್ರಮುಖ ರಾಜಕಾರಣಿಗಳ ಬೆಂಬಲಿಗರು ಹಾಕುವ ಬ್ಯಾನರ್ ತೆರವುಗೊಳಿಸುವುದು ಕಷ್ಟ. ಅದರಲ್ಲಿ ನಾಯಕರ ಚಿತ್ರಗಳಿರುತ್ತವೆ.



ಉದಯವಾಹಿನಿ ಚಿತ್ರ

ಅವುಗಳನ್ನು ತೆಗೆಯಲು ಮುಂದಾದರೆ ಬೆಂಬಲಿಗರು ಬೆದರಿಕೆ ಹಾಕಲೂ ಹಿಂಜರಿಯುವುದಿಲ್ಲ. ಕರ್ನಾಟಕ ಮುಕ್ತ ಸ್ಥಳಗಳ (ವಿರೂಪಗೊಳಿಸುವಿಕೆ ತಡೆ) ಕಾಯ್ದೆ 1981ರ ಕಲಂ (3)ರ ಅಡಿ ಪ್ಲೆಕ್ಸ್‌ಗಳು, ಬಂಟಿಂಗ್‌ಗಳು, ಕಟೌಟ್‌ಗಳನ್ನು ಅಳವಡಿಸುವುದು ಶಿಕ್ಷಾರ್ಹ ಅಪರಾಧ. ಇವುಗಳನ್ನು ಹಾಕಲು ಯಾವ ಸ್ಥಳೀಯ ಸಂಸ್ಥೆಗಳೂ ಅನುಮತಿ ನೀಡುವುದಿಲ್ಲ. ಸ್ಥಳೀಯ ಸಂಸ್ಥೆಗಳು ನಿಗದಿತ ಕಾಲಮಿತಿಯ ನಿಬಂಧನೆಗಳೊಂದಿಗೆ ಬಟ್ಟೆ ಬ್ಯಾನರ್‌ಗಳಿಗೆ ಮಾತ್ರ ಅನುಮತಿ ನೀಡಬಹುದಾಗಿದೆ. ಅಂದರೆ, ನಗರದಲ್ಲಿ ರಾರಾಜಿಸುವ ಯಾವ ಪ್ಲಾಸ್ಟಿಕ್ ಬ್ಯಾನರ್‌ಗಳೂ ಕಾನೂನು ಮಿತಿಯೊಳಗೆ ಬರುವುದಿಲ್ಲ. ಇವು ಪಾಲಿಕೆಗೆ ಸವಾಲಾಗಿ ಪರಿಣಮಿಸಿವೆ.

### ಬಳ್ಳಾರಿ ಜೀನ್ಸ್ ಉದ್ಯಮಕ್ಕೆ ಮರುಜೀವ, ವಾಷಿಂಗ್ ಯುನಿಟ್ ಬಂದ್ ಆದೇಶ ತೆರವಿಗೆ ಸಿಎಂ ಸೂಚನೆ

# ಜೀನ್ಸ್ ಉದ್ಯಮಿಗಳ ಬಹು ವರ್ಷಗಳ ಕನಸು ಈಡೇರಿಕೆ ನಿರೀಕ್ಷೆ

• ಉದಯವಾಹಿನಿ, ಬಳ್ಳಾರಿ

ಪರಿಸರಕ್ಕೆ ಹಾನಿ ನೆಪವೊಡ್ಡಿ 36 ವಾಷಿಂಗ್ ಯುನಿಟ್‌ಗಳ ಬಂದ್‌ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇತ್ತೀಚೆಗೆ ನೀಡಿದ್ದ ನೋಟಿಸ್‌ನಿಂದ ಸಂಪೂರ್ಣ ಸ್ಥಗಿತದ ಭೀತಿ ಎದುರಿಸುತ್ತಿದ್ದ ಇಲ್ಲಿನ ಜೀನ್ಸ್ ಉದ್ಯಮಕ್ಕೆ ರಾಜ್ಯ ಸರಕಾರ ಮರುಜೀವ ನೀಡಿದೆ.

ಕಾಮನ್ ಅಫ್ಲುಯೆಂಟ್ ಟ್ರೀಟ್ ಮೆಂಟ್ ಪ್ಲಾಂಟ್ (ಸಿಇಟಿಪಿ) ನಿರ್ಮಾಣಕ್ಕೆ ರಾಜ್ಯ ಸರಕಾರ ಹಸಿರು ನಿಶಾನೆ ತೋರಿರುವುದು ಉದ್ಯಮದ ಭವಿಷ್ಯವನ್ನು ಗಟ್ಟಿಗೊಳಿಸುವ ವಿಶ್ವಾಸ ಮೂಡಿಸಿದೆ. ಈ ಮೂಲಕ ವಾಷಿಂಗ್ ಯುನಿಟ್‌ಗಳಿಂದ ಹೊರ ಸೂಸುವ ತ್ಯಾಜ್ಯ ನೀರು ಸಂಸ್ಕರಣೆಗೆ ಪ್ರತ್ಯೇಕ ಪ್ಲಾಂಟ್ ಸ್ಥಾಪಿಸಬೇಕೆಂಬ ದಶಕಗಳ ಬೇಡಿಕೆ ಈಡೇರಿದಂತಾಗಿದೆ. ನಗರದಲ್ಲಿ 500ಕ್ಕೂ ಹೆಚ್ಚು ಜೀನ್ಸ್ ಸಿದ್ಧ ಉಡುಪು ತಯಾರಿಕೆ ಘಟಕಗಳಿವೆ. ಪ್ರತ್ಯಕ್ಷ, ಪರೋಕ್ಷವಾಗಿ 10 ಸಾವಿರಕ್ಕೂ ಅಧಿಕ ಕುಟುಂಬಗಳು ಜೀವನ ನಿರ್ವಹಿಸುತ್ತಿವೆ.

2022ರಲ್ಲಿ ಜೀನ್ಸ್ ಉದ್ಯಮಿಗಳ ಅಸೋಸಿಯೇಷನ್‌ನಿಂದಲೂ ಪ್ಲಾಂಟ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 24 ಕೋಟಿ ರೂ. ವೆಚ್ಚದ ಡಿಪಿಆರ್ ಸಹ ಸಿದ್ಧಪಡಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸಲಾಗಿತ್ತು. ಆದರೂ, ಅನುದಾನ ಕೊರತೆ ಸೇರಿ ನಾನಾ ಕಾರಣಗಳಿಂದ ಯೋಜನೆ ಮೂಲೆಗುಂಪಾಗಿತ್ತು. ಇದೀಗ ರಾಜ್ಯ ಸರಕಾರ ಉದ್ಯಮಿಗಳ ಬೇಡಿಕೆಗೆ ಸ್ಪಂದಿಸಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಿಂದ 11 ಕೋಟಿ ರೂ. ಮತ್ತು ಕಲ್ಯಾಣ


ಉದಯವಾಹಿನಿ ಚಿತ್ರ

- 22 ಕೋಟಿ ರೂ. ವೆಚ್ಚದಲ್ಲಿ ಸಿಇಟಿಪಿ ನಿರ್ಮಾಣಕ್ಕೆ ಗ್ರೀನ್ ಸಿಗ್ನಲ್
- ಜೀನ್ಸ್ ಉದ್ಯಮಿಗಳ ಬಹು ವರ್ಷಗಳ ಕನಸು ಈಡೇರಿಕೆ ನಿರೀಕ್ಷೆ
- ಸಿಇಟಿಪಿ ನಿರ್ಮಾಣಕ್ಕಾಗಿ ಪ್ರತ್ಯೇಕವಾಗಿ 4 ಎಕರೆ ಸ್ಥಳ ಮೀಸಲು

ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯಿಂದ 11 ಕೋಟಿ ರೂ. ಸೇರಿ ಒಟ್ಟು 22 ಕೋಟಿ ರೂ. ವೆಚ್ಚದಲ್ಲಿ ಸಿಇಟಿಪಿ ನಿರ್ಮಾಣಕ್ಕೆ ಮುಂದಾಗಿದೆ.

**ಏನಿದು ಸಿಇಟಿಪಿ ಮತ್ತು ಇಟಿಪಿ ಪ್ಲಾಂಟ್?**

ಜೀನ್ಸ್ ಉದ್ಯಮದ ವಾಷಿಂಗ್ ಯುನಿಟ್‌ಗಳಿಂದ ಹೊರಬರುವ ತ್ಯಾಜ್ಯ ನೀರಿನಿಂದ ಪರಿಸರಕ್ಕೆ ಹಾನಿಯಾಗಬಾರದು ಎನ್ನುವ ಉದ್ದೇಶದೊಂದಿಗೆ ಪ್ರತಿ ಯುನಿಟ್‌ನಲ್ಲಿ ಅಫ್ಲುಯೆಂಟ್ ಟ್ರೀಟ್ ಮೆಂಟ್ ಪ್ಲಾಂಟ್ (ಇಟಿಪಿ) ಸ್ಥಾಪಿಸಲಾಗುತ್ತದೆ. ಇದಕ್ಕಾಗಿ 15-20 ಲಕ್ಷ ರೂ. ವ್ಯಯಿಸಬೇಕಿದೆ. 25ಕ್ಕೂ ಹೆಚ್ಚು ಯುನಿಟ್‌ಗಳು ಈಗಾಗಲೇ ಸ್ವಂತ ಖರ್ಚಿನಲ್ಲಿ ಇಟಿಪಿ ಅಳವಡಿಸಿಕೊಂಡಿವೆ. ಆದರೆ, ಇದರ ನಿರ್ವಹಣೆ ವೆಚ್ಚ ಹೆಚ್ಚಾಗುವುದರಿಂದ ಎಲ್ಲಾ ಯುನಿಟ್‌ಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಿಇಟಿಪಿ ನಿರ್ಮಿಸಲು ಯೋಜಿಸಲಾಗಿದೆ. ಯುನಿಟ್‌ಗಳಿಂದ ಹೊರಬರುವ ತ್ಯಾಜ್ಯ ನೀರನ್ನು ಒಂದೆಡೆ ಸಂಗ್ರಹಿಸಿ ಸಂಸ್ಕರಿಸಲಾಗುತ್ತದೆ. ನಂತರ ಈ ನೀರಿನ ಮರುಬಳಕೆ, ವಿಲೇವಾರಿ ಮಾಡಲಾಗುತ್ತದೆ. ಇದರು ಜೀನ್ಸ್ ಉದ್ಯಮಕ್ಕೆ ಕಾಡುವ ನೀರಿನ ಸಮಸ್ಯೆಗೂ ದೊರಕಿಸುವ ಭರವಸೆ ನೀಡಿದೆ.

**ವರ್ಷದೊಳಗೆ ಸಿಇಟಿಪಿ ನಿರ್ಮಾಣ**

ಸಿಇಟಿಪಿ ಪ್ಲಾಂಟ್ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ 6 ತಿಂಗಳಿಂದ 1 ವರ್ಷ ಅವಧಿ ಬೇಕಾಗಬಹುದು ಎನ್ನಲಾಗುತ್ತಿದೆ. ಸರಕಾರದಿಂದ ದಾಖಲೆಗಳ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅನುದಾನ ಬಿಡುಗಡೆಯಾಗಲಿದೆ. ನಂತರ ತಾಂತ್ರಿಕ ಒಪ್ಪಿಗೆ, ಸ್ಥಳ ಪರಿಶೀಲನೆ, ಡಿಪಿಆರ್ ತಯಾರಿಕೆ, ಟೆಂಡರ್ ಸೇರಿ ನಾನಾ ಪ್ರಕ್ರಿಯೆಗಳು ನಡೆಯಲಿವೆ. ಇದಾದ ಬಳಿಕ ಹಾಲಿ ವಾಷಿಂಗ್ ಯುನಿಟ್‌ಗಳ ಸಂಖ್ಯೆ ಆಧಾರದಲ್ಲಿ ಎಷ್ಟು ಎಂಎಲ್‌ಡಿ ಸಾಮರ್ಥ್ಯದ ಪ್ಲಾಂಟ್ ನಿರ್ಮಿಸಬೇಕೆಂಬ ನಿರ್ಧಾರ ಕೈಗೊಳ್ಳಬೇಕಿದೆ.

**ಯೋಜನೆ ಮೂಲೆಗುಂಪು**

ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಜೀನ್ಸ್ ಉಡುಪುಗಳ ವಾಷಿಂಗ್‌ಗಾಗಿ 53 ವಾಷಿಂಗ್ ಯುನಿಟ್‌ಗಳನ್ನು ಅಳವಡಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಸಮೂಹದಿಂದ ಉತ್ಪತ್ತಿಯಾಗುವ ಕೈಗಾರಿಕಾ ತ್ಯಾಜ್ಯ ನೀರನ್ನು ಸಂಗ್ರಹಿಸಲು, ಸಂಸ್ಕರಿಸಲು ಮತ್ತು ವಿಲೇವಾರಿ ಮಾಡಲು ಕೇಂದ್ರೀಕೃತವಾದ ಸಿಇಟಿಪಿ ಪ್ಲಾಂಟ್ ಸ್ಥಾಪನೆಗಾಗಿ 2010ರಲ್ಲಿಯೇ ಕೆಐಎಡಿಬಿಯಿಂದ ಕೈಗಾರಿಕಾ ಪ್ರದೇಶದ 4ನೇ ಹಂತದಲ್ಲಿ 4 ಎಕರೆ ಜಾಗ ನಿಗದಿಗೊಳಿಸಲಾಗಿತ್ತು. ಪ್ಲಾಂಟ್ ಸ್ಥಾಪಿಸಬೇಕೆಂದು ಹಲವು ಬಾರಿ ಆಡಳಿತಾರೂಢ ಸರಕಾರಗಳಿಗೆ ಉದ್ಯಮಿಗಳು ಮನವಿ ಸಲ್ಲಿಸಿದ್ದರು.

## ಮಕ್ಕಳಲ್ಲಿ ಅನೇಕ ತರಹದ ಪ್ರತಿಭೆ ಇರುತ್ತೆ ಪ್ರತಿಭೆ ಹೊರತರಲು ಪ್ರತಿಭಾ ಕಾರಂಜಿ ವೇದಿಕೆ ಉತ್ತಮ: ಪಾಲಾಮೂರ್

• ಉದಯವಾಹಿನಿ, ಚಿಂಚೋಳಿ

ಶಿಕ್ಷಣವೆಂದರೆ ಕೇವಲ ಓದು ಬರಹ ಅಲ್ಲ, ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಕ್ರೀಡೆ,ಕಲೆ,ಸಂಸ್ಕೃತಿ ಚಟುವಟಿಕೆಗಳು ಅವಶ್ಯ ಈ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿ ವೇದಿಕೆ ಮಕ್ಕಳಿಗೆ ಉತ್ತಮವಾಗಿದೆ ಎಂದು ಜೂನಿಯರ್ ಕಾಲೇಜು ಪ್ರಾಚಾರ್ಯ ಮಲ್ಲಿಕಾರ್ಜುನ ಪಾಲಾಮೂರ್ ಹೇಳಿದರು.

ಪಟ್ಟಣದ ಚಂದಾಪೂರದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಸಮೂಹ ಸಂಪನ್ಮೂಲ ಕೇಂದ್ರ 2025-26ನೇ ಸಾಲಿನ ಚಿಂಚೋಳಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯ ಸಮಾರಂಭದಲ್ಲಿ ಮಾತನಾಡಿದ ಅವರು,ಮಕ್ಕಳಲ್ಲಿ ಒಂದೊಂದು ಪ್ರತಿಭೆಯನ್ನು ಅಡಗಿರುತ್ತದೆ ಅದನ್ನು ಹೊರತೆಗೆಯಲು ಮಕ್ಕಳಿಗೆ ಪ್ರೋತ್ಸಾಹಿಸಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆಯಾಗಿದೆ. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸುತ್ತದೆ ಅಲ್ಲದೆ


ಉದಯವಾಹಿನಿ ಚಿತ್ರ

ವ್ಯಕ್ತಿತ್ವ ವಿಕಾಸನಕ್ಕೆ ಸಹಾಯ ಮಾಡುತ್ತದೆ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಲಕ್ಷ್ಮಯ್ಯ,ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೇವೀಂದ್ರ ಹೋಳ್ಕರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ ಕೊರವಿ,ಬಿಸಿಯೂಟ ಸಹಾಯಕ ನಿರ್ದೇಶಕ ಜಯಪ್ಪ ಚಾಪಲ್ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಮಂಜೂರ ಅಹೇಮದ್, ಮಕ್ಸೂದ್ ಅಲಿ,ಶಾಮರಾವ ಮೋಘಾ, ಪುರಸಭೆ ಸದಸ್ಯ ನಾಗೇಂದ್ರಪ್ಪ ಗುರಂಪಳ್ಳಿ, ಸೇರಿದಂತೆ ಅನೇಕರಿದ್ದರು.

## ವಸತಿನಿಲಯಕ್ಕೆ ಸೌಕರ್ಯ ಕಲ್ಪಿಸಿ: ವಿದ್ಯಾರ್ಥಿಗಳ ಪ್ರತಿಭಟನೆ

• ಉದಯವಾಹಿನಿ ಗಜೇಂದ್ರಗಡ:

ಸಮೀಪದ ಕಾಲಕಾಲೇಶ್ವರ ಗ್ರಾಮದಲ್ಲಿನ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯಲ್ಲಿ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಈಚೆಗೆ ಶಾಲೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಎಸ್.ಎಫ್.ಐ ಮುಖಂಡ ಚಂದ್ರು ರಾಠೋಡ ಮಾತನಾಡಿ, 'ಪರಿಕ್ಷೆ ದಿನಾಂಕ ನಿಗದಿಯಾದರೂ 9ನೇ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯಪುಸ್ತಕ ವಿತರಿಸಿಲ್ಲ. ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ವಹಣೆ ಮಾಡುತ್ತಿಲ್ಲ. ಸಾಬೂನು ಕಿಟ್, ಸಮವಸ್ತ್ರ, ಮಂಚ ಹಾಗೂ ಹಾಸಿಗೆ ಒದಗಿಸಿಲ್ಲ. ವಿದ್ಯುತ್ ಸ್ವಿಚ್ ಹಾಗೂ ಫ್ಯಾನ್ ದುರಸ್ತಿ ಮಾಡಿಸಿಲ್ಲ' ಎಂದು ಆರೋಪಿಸಿದರು.

'ವಸತಿನಿಲಯದ ವಿದ್ಯಾರ್ಥಿಗಳಿಗೆ ಕನಿಷ್ಠ


ಉದಯವಾಹಿನಿ ಚಿತ್ರ

ಸೌಕರ್ಯ ಒದಗಿಸುವುದು ಸರ್ಕಾರ ಹಾಗೂ ಅಧಿಕಾರಿಗಳ ಜವಾಬ್ದಾರಿಯಾಗಿದೆ.

ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯು ಕ್ರೈಸ್ ಸಂಸ್ಥೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸೌಲಭ್ಯ ಕಲ್ಪಿಸದೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

**15 ದಿನಗಳ ಗಡುವು**

ಸ್ಥಳಕ್ಕೆ ಆಗಮಿಸಿದ ಶಾಲೆಯ ಮುಖ್ಯಶಿಕ್ಷಕ ಬಸವರಾಜ ತುಮ್ಮರಗುದ್ದಿ ಮಾತನಾಡಿ 'ಇಲ್ಲಿನ ಸಮಸ್ಯೆ ಸರ್ಕಾರ ಮಟ್ಟದಲ್ಲಿದೆ' ಎಂದರು. ಪ್ರತಿಭಟನಕಾರರು ಪಟ್ಟುಬಿಡದೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಸ್ಥಳಕ್ಕೆ ಬರಬೇಕೆಂದು ಆಗ್ರಹಿಸಿದರು. ಮುಖ್ಯಶಿಕ್ಷಕ ಹಾಗೂ ನಿಲಯ ಪಾಲಕ ಕೆಲ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಇನ್ನಿತರ ಸಮಸ್ಯೆಗಳ ಪರಿಹಾರಕ್ಕೆ 15 ದಿನಗಳ ಗಡುವು ಪಡೆದಿದ್ದರಿಂದ ಪ್ರತಿಭಟನೆ ಹಿಂಪಡೆಯಲಾಯಿತು.

## ಮಕ್ಕಳ ಜನನ ನಿಯಂತ್ರಣಕ್ಕೆ ಸರಳ ವಿಧಾನ ಎನ್‌ಎಸ್‌ವಿ ಶಸ್ತ್ರಚಿಕಿತ್ಸೆ

• ಉದಯವಾಹಿನಿ, ಚಿತ್ರದುರ್ಗ

ಎನ್‌ಎಸ್‌ವಿ ಶಸ್ತ್ರಚಿಕಿತ್ಸೆಯಿಂದ ಪುರುಷತ್ವಕ್ಕೆ ಹಾನಿಯಾಗುವುದಿಲ್ಲ ಎಂದು ಚಿತ್ರದುರ್ಗ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಚಿಕ್ಕಗೊಂಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ಎನ್‌ಎಸ್‌ವಿ ಪಾಕ್ಷಿಕ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನೋವೈದ್ಯರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಮಂಜುನಾಥ್ ಮಾಹಿತಿ ನೀಡುತ್ತಾ, ಪುರುಷ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ಕೇವಲ ಐದರಿಂದ ಹತ್ತು ನಿಮಿಷಗಳಲ್ಲಿ ನುರಿತ ತಜ್ಞ ವೈದ್ಯರು ಮಾಡುತ್ತಾರೆ. ಇದು ಅತಿ ಸುರಕ್ಷಿತ ಸರಳ ಮತ್ತು ಪರಿಣಾಮಕಾರಿ ಶಾಶ್ವತ ಗರ್ಭ ನಿರೋಧಕವೆಂದು ಸಾಬೀತಾಗಿರುತ್ತದೆ.

ಇದರಿಂದ ಪುರುಷರಿಗೆ ಯಾವುದೇ ದೈಹಿಕ ನಿಶ್ಯಕ್ತಿ ಉಂಟಾಗುವುದಿಲ್ಲ. ಲೈಂಗಿಕ ಸಾಮರ್ಥ್ಯ ಕಡಿಮೆಯಾಗುವುದಿಲ್ಲ. ಅಪಾಯದ ಅಂಚಿನಲ್ಲಿರುವ, ತೀವ್ರ ರಕ್ತಹೀನತೆಯಿಂದ ಬಳಲುತ್ತಿರುವ, ಗರ್ಭಕೋಶದ ತೊಂದರೆ, ಹೃದಯದ ತೊಂದರೆ ಇರುವ ತಾಯಂದಿರು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಮಾಡಿಸುವುದಕ್ಕಿಂತ ಅವರ ಪತಿಯವರಿಗೆ ಮನವೊಲಿಸಿ, ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಸುಖಮಯ ದಾಂಪತ್ಯ ಜೀವನ ನಡೆಸಬಹುದು.

ಪ್ರಯುಕ್ತ ನಿಮ್ಮೊಂದಿಗೆ ನಾವಿದ್ದೇವೆ ಅರ್ಹರಿಗೆ ಮನವೊಲಿಸಿ ಪಟ್ಟಿ ಮಾಡಿ ಮಾಹಿತಿ ನೀಡಿರಿ. ಎಲ್ಲರೂ ಒಗ್ಗೂಡಿ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದು ಸಿಬ್ಬಂದಿಯವರೆಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಸುಧಾ, ಆರೋಗ್ಯ ನಿರೀಕ್ಷಣಾಧಿಕಾರಿ ಶಂಕರ್ ನಾಯ್ಕ, ಫಾರ್ಮಸಿ ಅಧಿಕಾರಿ ನಂದಿನಿ, ಪಿಎಚ್‌ಸಿಓ ಮಂಜುಳಾ, ಕಾವ್ಯ, ಆಶಾ ಕಾರ್ಯಕರ್ತೆಯರು, ಸಿಬ್ಬಂದಿ ವರ್ಗದವರು, ಸಾರ್ವಜನಿಕರು ಹಾಜರಿದ್ದರು.



ಉದಯವಾಹಿನಿ ಚಿತ್ರ

> ಪುರುಷ ಸಂತಾನ ನಿರೋಧ ಸೇವೆಗಳ ಬಲಪಡಿಸಲು ದೇಶದಾದ್ಯಂತ ಇದೇ ನವೆಂಬರ್ 21 ರಿಂದ 27ರವರೆಗೆ ಅರಿವು ಮೂಡಿಸುವುದು. ನವೆಂಬರ್ 28 ರಿಂದ ಡಿಸೆಂಬರ್ 4ರ ವರೆಗೆ ಸೇವಾ ಪಾಕ್ಷಿಕ ನಡೆಯಲಿದ್ದು, ತಾಲ್ಲೂಕ ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾದ ಶಸ್ತ್ರ ಚಿಕಿತ್ಸೆ ಸೌಲಭ್ಯವನ್ನು ಅರ್ಹ ಆಕಾಂಕ್ಷಿಗಳು ಪಡೆದುಕೊಳ್ಳಬಹುದು.
> -ಬಿ.ಮೂಗಪ್ಪ, ತಾಲ್ಲೂಕಾ ಆರೋಗ್ಯ ಶಿಕ್ಷಣಾಧಿಕಾರಿ

## ಹೋರಾಟ ನೆಪದಲ್ಲಿ ಬಂದ್ ಸರಿಯಲ್ಲ

• ಉದಯವಾಹಿನಿ ಲಕ್ಷ್ಮೇಶ್ವರ

ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರಕ್ಕಾಗಿ ರೈತರು ನಡೆಸುತ್ತಿರುವ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಆದರೆ, ಹೋರಾಟದ ನೆಪದಲ್ಲಿ ಊರು ಬಂದ್ ಮಾಡುವುದು ಸರಿ ಅಲ್ಲ' ಎಂದು ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ಹೇಳಿದರು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಬಲ ಬೆಲೆ ಘೋಷಿಸಿದ್ದರಿಂದ ರೈತರು ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಮೆಕ್ಕೆಜೋಳ ಬೆಳೆದಿದ್ದಾರೆ. ಈಗಾಗಲೇ ಖರೀದಿ ಕೇಂದ್ರ ಆರಂಭಿಸಬೇಕಿತ್ತು. ಆದರೆ ಗ್ಯಾರಂಟಿ ಯೋಜನೆಗಾಗಿ ಖಜಾನೆ ಖಾಲಿ ಆಗಿದ್ದು, ರಾಜ್ಯ ಸರ್ಕಾರದ ಬಳಿ ಹಣ ಇಲ್ಲ. ಈಗ ಮೆಕ್ಕೆಜೋಳ ಖರೀದಿಸುವುದು ಸರ್ಕಾರಕ್ಕೆ ಆಗದ ಕೆಲಸ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಚರ್ಚಿಸಿ, ನಿರ್ಧಾರ ತೆಗೆದುಕೊಂಡಾಗ ಮಾತ್ರ ಖರೀದಿ ಕೇಂದ್ರ ಆರಂಭವಾಗಬಹುದು. ಇಲ್ಲದಿದ್ದರೆ, ಎಷ್ಟೇ ಹೋರಾಟ ಮಾಡಿದರೂ ಪ್ರಯೋಜನ ಇಲ್ಲ' ಎಂದು ತಿಳಿಸಿದರು. ಪ್ರತಿಭಟನೆ ನಡೆಸಿದರೆ ಸಮಸ್ಯೆ ಇಲ್ಲ. ಆದರೆ, ಉಪವಾಸ ಸತ್ಯಾಗ್ರಹ ನಡೆಸುವುದು ಸರಿ ಅಲ್ಲ. ಅಮರಣಾಂತ ಉಪವಾಸ


ಉದಯವಾಹಿನಿ ಚಿತ್ರ

ನಡೆಸುತ್ತಿರುವ ಕುಮಾರ ಮಹಾರಾಜರಿಗೆ ಏನಾದರೂ ಸಮಸ್ಯೆ ಉಂಟಾದರೆ, ಇಡೀ ಊರಿಗೆ ಕೆಟ್ಟ ಹೆಸರು ಬರುತ್ತದೆ' ಎಂದರು. ಪದೇ ಪದೇ ಊರು ಬಂದ್ ಮಾಡುವುದರಿಂದ ಸಾರ್ವಜನಿಕರು, ಕೂಲಿಕಾರರು, ವ್ಯಾಪಾರಸ್ಥರಿಗೆ ತೊಂದರೆಯಾಗುತ್ತದೆ. ಬಂದ್‌ಗೆ ಕರೆ ನೀಡುವ ಮೊದಲು ಹೋರಾಟಗಾರರು ಸಾಕಷ್ಟು ಬಾರಿ ವಿಚಾರ ಮಾಡಬೇಕು.

ರೈತರ ನ್ಯಾಯಯುತ ಬೇಡಿಕೆಗೆ ಯಾವಾಗಲೂ ನಮ್ಮ ಬೆಂಬಲ ಇರುತ್ತದೆ' ಎಂದು ಹೇಳಿದರು. ಎಸ್.ಪಿ. ಪಾಟೀಲ, ವಿ.ಜಿ. ಪಡಿಗೇರಿ, ಸೋಮಣ್ಣ ಉಪನಾಳ, ಬಸವೇಶ ಮಹಾಂತಶೆಟ್ಟರ, ಅಪ್ಪಣ್ಣ ಸಾಲಿ ಮಾತನಾಡಿದರು. ಚಂಬಣ್ಣ ಬಾಳಿಕಾಯಿ, ಡಿ.ಬಿ. ಬಳಿಗಾರ, ನಿಂಗಪ್ಪ ಬನ್ನಿ, ಶಾಂತಣ್ಣ ಬಳ್ಳಾರಿ, ನಿಂಗಪ್ಪ ಹುನಗುಂದ, ವೀರಣ್ಣ ಪವಾಡದ ಇದ್ದರು.

## ವಾಹನಗಳಿಗೆ ಪ್ರತಿಫಲಕಗಳನ್ನು ಅಳವಡಿಸಲು ಸೂಚನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಬಕವಿ ಬನಹಟ್ಟಿ

ರಬಕವಿ ಬನಹಟ್ಟಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ರಾತ್ರಿ ಹೊತ್ತು ಕಬ್ಬು ಸಾಗಿಸುವ ಟ್ರ್ಯಾಕ್ಟರ್ ಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿವೆ. ಆದ್ದರಿಂದ ಕಬ್ಬು ಸಾಗಿಸುವ ಟ್ರ್ಯಾಕ್ಟರ್ ಚಾಲಕರು ತಮ್ಮ ಟ್ರಾಲಿಗಳಿಗೆ ಕಡ್ಡಾಯವಾಗಿ ರಿಫ್ಲೆಕ್ಟರ್ ಗಳನ್ನು ಅಳವಡಿಸುವಂತೆ ಬನಹಟ್ಟಿ ಪಿಎಸ್‌ಐ ಶಾಂತಾ ಹಳ್ಳಿ ಸೂಚನೆ ನೀಡಿದರು. ಅವರು ಇಲ್ಲಿನ ಆಸಂಗಿ ಕ್ರಾಸ್ ಹತ್ತಿರ ಜಮಖಂಡಿ ಕುಡಚಿ ರಾಜ್ಯ ಹೆದ್ದಾರಿಯ ಮೇಲೆ ಕಬ್ಬು ಸಾಗಿಸುವ ಟ್ರ್ಯಾಕ್ಟರಗಳಿಗೆ ರಿಫ್ಲೆಕ್ಟರ್ ಗಳನ್ನು ಅಳವಡಿಸುವಂತೆ ಚಾಲಕರಿಗೆ ಸೂಚನೆ ನೀಡಿ ಮಾತನಾಡಿದರು. ಅದೇ ರೀತಿಯಾಗಿ ಟ್ರ್ಯಾಕ್ಟರ್ ಚಾಲಕರು ಯಾವುದೇ ಧ್ವನಿ ವರ್ಧಕಗಳನ್ನು ಬಳಸದೆ ವಾಹನ ಚಾಲನೆ ಮಾಡಬೇಕು. ಧ್ವನಿ ವರ್ಧಕಗಳನ್ನು ಹಚ್ಚಿಕೊಂಡು ವಾಹನ ಚಲಾಯಿಸುವುದರಿಂದ ಹಿಂಬದಿಯ ವಾಹನ ಸವಾರರಿಗೆ ತೊಂದರೆಯಾಗುತ್ತದೆ.

ಆದ್ದರಿಂದ ಚಾಲಕರು ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ತಮ್ಮ ಟ್ರ್ಯಾಕ್ಟರ್‌ಗಳನ್ನು ಚಲಾಯಿಸಬೇಕು. ಚಾಲಕರು ಎಲ್ಲ ಸುರಕ್ಷತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

### ಎಪಿಎಂಸಿ ಮಳಿಗೆಗಳಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ದೂರು

# ಎಪಿಎಂಸಿ: ಪಾಳು ಬಿದ್ದ ಮಳಿಗೆಗಳು, ಸ್ವಚ್ಛತೆ ಮಾಯ

• ಉದಯವಾಹಿನಿ, ಕನಕಗಿರಿ

ಐದು ದಶಕಗಳ ಕಾಲದಿಂದ ಉಪ ಮಾರುಕಟ್ಟೆ ಸ್ಥಾನ ಹೊಂದಿದ್ದ ಇಲ್ಲಿನ ಎಪಿಎಂಸಿ 2024ರ ಆಗಸ್ಟ್‌ನಲ್ಲಿ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಾಗಿ ಮೇಲ್ದರ್ಜೆಗೊಂಡಿದೆ. ಆದರೆ ನೂತನ ಎಪಿಎಂಸಿ ಮೂಲ ಸೌಲಭ್ಯಗಳಿಂದ ಬಳಲುತ್ತಿದೆ.

ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ, ಅಧೀಕ್ಷಕ, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಸೇರಿದಂತೆ ಒಟ್ಟು ಆರೇಳು ಹುದ್ದೆಗಳು ಖಾಲಿ ಇದ್ದು, ಅಧಿಕಾರಿಗಳ ನಿಯೋಜನೆಯಿಂದ ಕಚೇರಿ ನಡೆಯುತ್ತಿದೆ. ಆಡಳಿತ ಕಚೇರಿ ಕಟ್ಟಡವು ಐದಾರು ದಶಕಗಳ ಹಿಂದೆ ನಿರ್ಮಾಣಮಾಡಿದ್ದು ಪೂರ್ಣ ಶಿಥಿಲಗೊಂಡು ಸೋರುತ್ತಿದೆ.

ಆವರಣದಲ್ಲಿರುವ ಎರಡು ಗೋದಾಮು ಕೂಡ ನಿರುಪಯುಕ್ತವಾಗಿದೆ. ಗೋದಾಮಿನಲ್ಲಿನ ದವಸಧಾನ್ಯ ಶುಚಿತ್ವಗೊಳಿಸುವ ಯಂತ್ರಗಳನ್ನು ಬಹಳಷ್ಟು ವರ್ಷಗಳಿಂದ ಬಳಸದ ಕಾರಣ ತುಕ್ಕು ಹಿಡಿದು ಹಾಳಾಗಿದೆ. ಗೋದಾಮು ನೆಲಸಮ ಮಾಡಿ ಹೊಸ ಕಟ್ಟಡ ನಿರ್ಮಾಣಕ್ಕೆ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗಂಗಾವತಿ ಎಪಿಎಂಸಿಯ ಏಜೆನ್ಸಿ ಮೂಲಕ ಒಟ್ಟು 3 ಜನ ಕಾವಲುಗಾರರು ಹಾಗೂ 2 ಜನ ಸ್ವಚ್ಛತಾ ಸಿಬ್ಬಂದಿ ನೇಮಕಗೊಂಡಿದ್ದು, ಈ ಸಿಬ್ಬಂದಿಗೆ ಸರಿಯಾಗಿ ವೇತನ ನೀಡುತ್ತಿಲ್ಲ ಎಂಬ ದೂರು ಕೇಳಿ ಬಂದಿದೆ. ವೇತನ ಅವರ ಖಾತೆಗೆ ನೇರವಾಗಿ ಹಾಕುವ ಬದಲು ನಗದು ಹಣ ನೀಡಲಾಗುತ್ತಿದೆ ಎಂದು ಸಿಬ್ಬಂದಿ ದೂರಿದ್ದಾರೆ.

ಕಲ್ಯಾಣ ಮಂಟಪ, ಕ್ಯಾಂಟೀನ್, ಶ್ರಮಿಕರ ಭವನ ಇತರೆ ಕಟ್ಟಡಗಳು ಸಹ ಎರಡು ದಶಕಗಳ ಹಿಂದೆ ನಿರ್ಮಾಣಗೊಂಡಿದ್ದು, ಎಲ್ಲಾ ಕಟ್ಟಡಗಳ ಚಾವಣಿ ಕುಸಿಯುತ್ತಿದೆ. ಗೋಡೆಗಳು ಬಿರುಕು ಬಿಟ್ಟಿವೆ. ಕ್ಯಾಂಟೀನ್ ಕಟ್ಟಡ ನಿರುಪಯುಕ್ತವಾಗಿದೆ. ದಲ್ಲಾಳಿ ವರ್ತಕರು ಹಾಗೂ ಹಮಾಲರಿಗೆ ಸಾಮೂಹಿಕ ಶೌಚಾಲಯವಿಲ್ಲ ಎಂದು ವರ್ತಕರು ತಿಳಿಸಿದರು.

ಆಡಳಿತ ಕಚೇರಿ ಕಟ್ಟಡದ ಪರಿಸರದಲ್ಲಿ ವಾರದ ಮೂರು ದಿನಗಳ ಕಾಲ ತರಕಾರಿ, ಕಾಯಿಪಲ್ಲೆ ಹರಾಜು ಪ್ರಕ್ರಿಯೆ ಹಾಗೂ ಮಾರಾಟ ನಡೆಯುತ್ತಿದೆ. ರೈತರಿಗೆ, ವ್ಯಾಪಾರಿಗಳಿಗೆ ಭದ್ರತೆ ಇಲ್ಲವಾಗಿದೆ. ಮಳೆಗಾಲದಲ್ಲಿ ರೈತರು, ವರ್ತಕರು ಮತ್ತು ಗ್ರಾಹಕರ ಪರಿಸ್ಥಿತಿ ಹೇಳತೀರದಾಗಿದೆ.

ಗೂಡಂಗಡಿಗಳನ್ನು ತೆರವುಗೊಳಿಸುವ ನೆಪದಲ್ಲಿ ಎಪಿಎಂಸಿಗೆ ಸೇರಿದ ಹೊರಗೋಡೆಯನ್ನು ಪಟ್ಟಣ ಪಂಚಾಯಿತಿಯವರು ಜೆಸಿಬಿ ಮೂಲಕ ಧ್ವಂಸ ಮಾಡಿದ್ದಾರೆ. ಆವರಣದಲ್ಲಿ ಅಲ್ಲಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು ಸ್ವಚ್ಛತೆ ಇಲ್ಲವಾಗಿದೆ. ರಾತ್ರಿ ವೇಳೆ ಅನೈತಿಕ ಚಟುವಟಿಕೆಗಳ ತಾಣವಾಗುತ್ತಿದೆ. ಮದ್ಯ ಸೇವಿಸಿ ಖಾಲಿ ಬಾಟಲಿಗಳು ಬಿಸಾಕಿದ್ದಾರೆ ಎನ್ನುವ ದೂರುಗಳು ಸಾಮಾನ್ಯವಾಗಿವೆ.

ಎಪಿಎಂಸಿ ಮಳಿಗೆಗಳಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ದೂರಿ ಸ್ಥಳೀಯರು ಲೋಕಾಯುಕ್ತರಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಪ್ರಭಾರಿಯಾಗಿ ಬಂದ ಅಧಿಕಾರಿಗಳು ಬಹಳ ದಿನಗಳ ಕಾಲ ಇಲ್ಲಿ ಉಳಿಯುತ್ತಿಲ್ಲ ಎಂದು ವಿವಿಧ ಸಂಘಟನೆಗಳ ಪ್ರಮುಖರು ತಿಳಿಸುತ್ತಾರೆ.

ಮಳಿಗೆಗಳ ನಿವೇಶನ ಹಂಚಿಕೆಯಲ್ಲಿ ಹಿರಿತನ ಹೊಂದಿರುವವರಿಗೆ ಅನ್ಯಾಯ ಮಾಡಲಾಗಿದೆ. ಪ್ರಭಾವಿಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ದಲ್ಲಾಳಿ ವರ್ತಕ ಶರಣಪ್ಪ ಭಾವಿಕಟ್ಟಿ ಅವರು ದೂರಿದರು. ಒಬ್ಬ ವರ್ತಕನಿಗೆ ಎರಡು ಮಳಿಗೆಗಳು ಸಿಕ್ಕಿವೆ. ಹಲವಾರು ವರ್ಷಗಳಿಂದಲೂ ಅಂಗಡಿ ಹೊಂದಿದ್ದು ತಮಗೆ ಇಲ್ಲಿ ವರೆಗೆ ನಿವೇಶನ ಸಿಕ್ಕಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

> ನೂತನ ಎಪಿಎಂಸಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ನೇಮಿಸುವ ಮೂಲಕ ಆಡಳಿತ ಸುಗಮವಾಗಿ ಸಾಗಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ರೈತರು ತಾವು ಬೆಳೆದ ಬೆಳೆಗಳನ್ನು ಎಪಿಎಂಸಿ ರಸ್ತೆ ಹಾಗೂ ಕಣದಲ್ಲಿ ಶುಚಿತ್ವಗೊಳಿಸುತ್ತಿದ್ದು ಬೆಳಕು ಹಾಗೂ ವಸತಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು.
> -ಕನಕಪ್ಪ, ರೈತ ಕನಕಗಿರಿ

**ಎಲ್ಲಾ ಕಟ್ಟಡಗಳ ಚಾವಣಿ ಕುಸಿತ**

> ಪ್ರಸಕ್ತ ಸಾಲಿನಲ್ಲಿ ರೂ.40 ಲಕ್ಷ ಸೆಸ್ ಸಂಗ್ರಹ ಗುರಿ ಹೊಂದಲಾಗಿದ್ದು ಇಲ್ಲಿಯವರೆಗೆ ರೂ.29 ಲಕ್ಷ ಸಂಗ್ರಹವಾಗಿದೆ. ಹಣಕಾಸಿನ ಲಭ್ಯತೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ.
> -ಸಾವಿತ್ರಿ ಪಾಟೀಲ, ಪ್ರಭಾರ ಕಾರ್ಯದರ್ಶಿ ಎಪಿಎಂಸಿ ಕನಕಗಿರಿ

## ಮಿನಿ ನ್ಯೂಸ್

### ಫೋನ್ ಪೇ ಮೂಲಕ ಲಂಚ: ಶಿಕ್ಷಣ ಇಲಾಖೆಯ ಸಿಬ್ಬಂದಿ ಲೋಕಾಯುಕ್ತ ಬಲೆಗೆ

• ಉದಯವಾಹಿನಿ ಕಲಬುರಗಿ

ನಿವೃತ್ತಿ ವೇತನ ಹಾಗೂ ಇತರೆ ಸರಕಾರಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಂದ 25,000ರೂ. ಲಂಚ ಪಡೆಯುತ್ತಿದ್ದ ವೇಳೆ ಶಿಕ್ಷಣ ಇಲಾಖೆಯ ಸಿಬ್ಬಂದಿಯೊಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ರೆಡ್ ಹ್ಯಾಂಡ್ ಆಗಿ ಬಿದ್ದಿರುವ ಘಟನೆ ಸೇಡಂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ನಡೆದಿದೆ.

ಬಿಇಓ ಕಚೇರಿಯಲ್ಲಿ ಪ್ರಥಮ ದರ್ಜೆಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಶಿವಲಿಂಗಪ್ಪ ಎಂಬಾತ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಸಿಬ್ಬಂದಿಯಾಗಿದ್ದಾರೆ. ಯಾದಗಿರಿ ನಗರದ ನಿವಾಸಿ ಅಫ್ರೀದಿ ಅವರ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು. ಆಫ್ರೀದಿ ಅವರ ತಾಯಿ ರಜಾಕ್ ಬೇಗಮ್ ಅವರ ನಿವೃತ್ತಿ ವೇತನ ಹಾಗೂ ಇತರೆ ಸರಕಾರಿ ಸೌಲಭ್ಯಗಳ ಲೆಕ್ಕ ಲೆಕ್ಕಾಚಾರಗಳ ದಾಖಲೆ ಸಲ್ಲಿಸಲು ಶಿವಲಿಂಗಪ್ಪ 28,500ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು. ಇದರಂತೆ 25,000ರೂ.ಫೋನ್ ಪೇ ಮೂಲಕ ಪಡೆಯುತ್ತಿದ್ದಾಗ ಶಿವಲಿಂಗಪ್ಪ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಕಲಬುರಗಿ ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಅರುಣಕುಮಾರ್ ಮುರಗುಂಡಿ ಮತ್ತಿತರ ಸಿಬ್ಬಂದಿಗಳ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು. ಇದೀಗ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಸಹಕಾರಿ ಸಂಘಗಳು ಆರ್ಥಿಕ ಸ್ವಾವಲಂಬನೆಗೆ ಸಹಕಾರಿ: ದಾನಯ್ಯ

• ಉದಯವಾಹಿನಿ ಅಮೀನಗಡ

ಸಹಕಾರಿ ಸಂಘಗಳು ಗ್ರಾಮೀಣ ಭಾಗದ ರೈತರು, ವ್ಯಾಪಾರಸ್ಥರು ಸೇರಿದಂತೆ ಬಡ ಜನರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ ಎಂದು ಸಹಕಾರಿ ಸಂಘಗಳ ಉಪ ನಿಬಂಧಕ ದಾನಯ್ಯ ಹಿರೇಮಠ ಹೇಳಿದರು. ಪಟ್ಟಣದ ಬನಶಂಕರಿ ದೇವಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಸಹಕಾರಿ ಯೂನಿಯನ್, ಹುನಗುಂದ ಹಾಗೂ ಇಳಕಲ್ ಅವಳಿ ತಾಲ್ಲೂಕುಗಳ ಪಿಕೆಪಿಎಸ್ ಸಹಕಾರಿ ಸಂಘಗಳು ಹಾಗೂ ವಿವಿಧ ಸಹಕಾರಿ ಸಂಘಗಳ ಸಹಯೋಗದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಹಕಾರಿ ಸಂಘಗಳು ವ್ಯಾಪಾರಸ್ಥರು, ನೇಕಾರರು ಹಾಗೂ ಆರ್ಥಿಕವಾಗಿ ಹಿಂದುಳಿದ ಬಡವರ್ಗದ ಜನತೆಗೆ ಬದುಕು ಕಟ್ಟಿಕೊಳ್ಳಲು ಆರ್ಥಿಕ ಸಹಾಯ ನೀಡುತ್ತಿವೆ ಎಂದು ಅಭಿಪ್ರಾಯಪಟ್ಟರು. ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ದ್ಯಾಮಣ್ಣಗಾಳಿ ಅಧ್ಯಕ್ಷತೆ ವಹಿಸಿದ್ದರು.

### ಮೀನು ಮಾರಾಟ; ವಾಹನ ಸೌಲಭ್ಯಕ್ಕೆ ಅರ್ಜಿ

• ಉದಯವಾಹಿನಿ ಹಾವೇರಿ

ಪ್ರಸಕ್ತ ಸಾಲಿನ ವಿಶೇಷ ಧರ್ತಿ ಆಭಾ ಯೋಜನೆಯಡಿ ಮೀನು ಸಾಗಾಣಿಕೆ ಮತ್ತು ಮಾರಾಟಕ್ಕಾಗಿ ಎರಡು-ಮೂರು ಚಕ್ರದ ವಾಹನ ಖರೀದಿಗೆ ಸಹಾಯಧನ ನೀಡಲು ಅರ್ಹ ಪರಿಶಿಷ್ಟ ಪಂಗಡ ಸಮುದಾಯದ ಜನರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಮೀನುಗಾರಿಕೆ ಸಹಕಾರಿ ಸಂಘದ ಸದಸ್ಯರಾದ ನೋಂದಾಯಿತ ಮೀನು ಮಾರಾಟಗಾರರು ಅರ್ಜಿ ಸಲ್ಲಿಸಲು ಅವಕಾಶವಿದೆ. ಶಿಗ್ಗಾವಿ ತಾಲ್ಲೂಕಿನ ಶಿಡ್ಲಾಪುರ, ಹಾನಗಲ್ ತಾಲ್ಲೂಕಿನ ಬಾದಾಮಗಟ್ಟಿ, ಹಾವೇರಿ ತಾಲ್ಲೂಕಿನ ಗೌರಾಪುರ ಎಂ. ಆಡೂರ, ತೇರದಹಳ್ಳಿ, ಬ್ಯಾಡಗಿ ತಾಲ್ಲೂಕಿನ ದುಮ್ಮಿಹಾಳ, ಅರಬಗೊಂಡ, ಹಿರೇಕೆರೂರು ತಾಲ್ಲೂಕಿನ ಆಲದಕಟ್ಟಿ, ರಾಣೆಬೆನ್ನೂರು ತಾಲ್ಲೂಕಿನ ಯಕಲಾಸಪೂರ, ನಲವಾಗಲ, ನಾಗೇನಹಳ್ಳಿ ಹಾಗೂ ಫತ್ತೇಪೂರ ಗ್ರಾಮದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಡಿ. 18ರೊಳಗಾಗಿ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ 9886689622 ಹಾಗೂ 8095792530 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಸಿಎಂ ಆಗಿ ಸಿದ್ಧರಾಮಯ್ಯನವರೇ ಮುಂದುವರಿಯಲಿ: ಪ್ರಿಯಾಂಕಾ ಜಾರಕಿಹೊಳಿ

• ಉದಯವಾಹಿನಿ ಹುಕ್ಕೇರಿ

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರಿಯಬೇಕು ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಮಾಧ್ಯಮದವರ ಜತೆ ಮಾತನಾಡಿ, ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನೀಡುತ್ತಿದ್ದಾರೆ. ಅವರೇ ಮುಂದುವರಿಯುವುದು ಸೂಕ್ತ. ಆದರೂ ಎಲ್ಲರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ' ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು 2028ಕ್ಕೆ ಮುಖ್ಯಮಂತ್ರಿ ಆಗುವ ಇಂಗಿತ ವ್ಯಕ್ತಪಡಿಸಿದ್ದಾರೆ. ಈಗಂತೂ ಸಚಿವರಿದ್ದಾರೆ. ಹೈಕಮಾಂಡ್ ಅವರಿಗೆ ಸಿ.ಎಂ ಹುದ್ದೆ ನೀಡಿದರೆ ನಿಭಾಯಿಸಬಲ್ಲರು' ಎಂದು ಹೇಳಿದರು.

### ಮೃತರ ಖಾತೆಗೆ ಗೃಹಲಕ್ಷ್ಮಿ ಹಣ

• ಉದಯವಾಹಿನಿ ಚಿಕ್ಕಮಗಳೂರು

ಮೃತಪಟ್ಟ ಗೃಹಲಕ್ಷ್ಮಿ ಫಲಾನುಭವಿಗಳ ಖಾತೆಗೂ ಹಣ ಹೋಗಿದೆ. ಇದನ್ನು ಕೂಡಲೇ ಪರಿಶೀಲಿಸಿ ಅಧಿಕಾರಿಗಳು ಕ್ರಮ ವಹಿಸಬೇಕು. ಮೃತರ ಖಾತೆಗೆ ಗೃಹಲಕ್ಷ್ಮಿ ಹಣ ಹೋಗದಂತೆ ತಡೆಯಬೇಕು' ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಸೂಚಿಸಿದರು. ನಗರದ ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಫಲಾನುಭವಿಗಳಿಗೆ ಮಧ್ಯವರ್ತಿಗಳು ಇಲ್ಲದೆ ನೇರವಾಗಿ ತಲುಪುವ ಕಾರ್ಯಕ್ರಮ ಇದಾಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಯೋಜನೆ ತಲುಪಬೇಕು ಎಂಬುವುದು ನಮ್ಮ ಆಶಯ. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ ಕೆಲವು ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಹೇಳಿದರು. ಕೋವಿಡ್ ಸಂದರ್ಭದಲ್ಲಿ ಜಿಲ್ಲೆಯ ಕೆಲ ಬಸ್ ಕಾರ್ಯಾಚರಣೆ ಸ್ಥಗಿತವಾಗಿತ್ತು. ಅವುಗಳ ಮರು ಸಂಚಾರ ಕಾರ್ಯ ಆರಂಭಿಸಲಾಗಿದೆ. ಜತೆಗೆ ಜಿಲ್ಲೆಗೆ ಹೊಸದಾಗಿ 15 ಬಸ್‌ಗಳು ಬಂದಿವೆ. ಸಿಬ್ಬಂದಿ ನೇಮಕ ಕೂಡ ಆಗಿದೆ. ಅನ್ನಭಾಗ್ಯ ಯೋಜನೆ ಅಡಿ ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಎದುರು ಪಡಿತರ ವಿತರಿಸುವ ದಿನಾಂಕ, ತೂಕ, ದಾಸ್ತಾನು ಸೇರಿ ಎಲ್ಲಾ ಮಾಹಿತಿ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ಸೂಚಿಸಿದರು. ಗೃಹಜ್ಯೋತಿ ಜಿಲ್ಲೆಯಲ್ಲಿ ಉತ್ತಮವಾಗಿ ನಡೆಯುತ್ತಿದೆ. ಹೊಸ ಸಂಪರ್ಕಕ್ಕೆ ಗ್ರಾಹಕರು ಮನವಿ ಸಲ್ಲಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದು ಈ ರಾಶಿಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು.

**ವೃಷಭ** ನಿಮ್ಮ ಅಧಿಕ ಚೈತನ್ಯವನ್ನು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಬಹಳ ಪ್ರಯೋಜನಕಾರಿ ದಿನವಲ್ಲ- ಆದ್ದರಿಂದ ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ ಮತ್ತು ನಿಮ್ಮ ವೆಚ್ಚಗಳ ಮೇಲೆ ಮಿತಿ ಹೇರಿ.

**ಮಿಥುನ** ನೀವು ನಿಮ್ಮ ಮನೆಯ ಯಾವುದೇ ಸದಸ್ಯರಿಂದ ಹಣವನ್ನು ಸಾಲ ತೆಗೆದುಕೊಂಡಿದ್ದರೆ ಅದನ್ನು ಇಂದು ಮರುಪಾವತಿಸಿ ಇಲ್ಲದಿದ್ದರೆ ನಿಮ್ಮ ವಿರುದ್ಧವಾಗಿ ಕಾನೂನು ಪ್ರಕರಣ ಮಾಡಬಹುದು.

**ಕರ್ಕಾಟಕ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ.

**ಸಿಂಹ** ನಿಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ ವಿಶೇಷವಾಗಿ ಮದ್ಯಪಾನ ಮಾಡಬೇಡಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಕನ್ಯಾ** ಸೃಜನಶೀಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ಸ್ವಲ್ಪ್ ಹೆಚ್ಚು ಹಣ ಮಾಡಲು ನವೀನ ಕಲ್ಪನೆಯನ್ನು ಬಳಸಿ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ.

**ತುಲಾ** ನೀವು ಕಾಳಜಿಯುಳ್ಳ ಮತ್ತು ತಿಳುವಳಿಕೆಯುಳ್ಳ ಸ್ನೇಹಿತರನ್ನು ಭೇಟಿ ಮಾಡುತ್ತೀರಿ. ನಿಮ್ಮ ನೋಟವನ್ನು ವರ್ಧಿಸುವ ಮತ್ತು ಪ್ರಬಲ ಪಾಲುದಾರರನ್ನು ಆಕರ್ಷಿಸಲು ಬದಲಾವಣೆಗಳನ್ನು ಮಾಡಿ.

**ವೃಶ್ಚಿಕ** ಮನೆಯಲ್ಲಿನ ಕೆಲವು ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿ ಸಬಹುದು- ಆದರೆ ನಿಮಗೆ ಮುಖ್ಯವಾದವರಿಗೆ ನೀವು ನಿಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಾಗುತ್ತದೆ.

**ಧನಸ್ಸು** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು.

**ಮಕರ** ನಿಮ್ಮ ಅಧಿಕ ಚೈತನ್ಯದ ಹೊರತಾಗಿಯೂ ನೀವು ನಿಮ್ಮೊಡನೆ ಇರಲಾರದ ಯಾರನ್ನಾದರೂ ನೆನಪಿಸಿಕೊಳ್ಳುತ್ತಿದ್ದೀರಿ. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ.

**ಕುಂಭ** ನೀವು ವಿಶ್ರಾಂತಿ ಪಡೆಯಬೇಕು ಮತ್ತು ನಿಕಟ ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ನಡುವೆ ಸಂತೋಷವಾಗಿರಲು ಪ್ರಯತ್ನಿಸಬೇಕು ಪ್ರೀತಿಯಲ್ಲಿ ನಿರಾಶೆ ನಿಮ್ಮನ್ನು ಕಂಗೆಡಿಸುವುದಿಲ್ಲ.

**ಮೀನ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.ಸ

### ಉ.ಕರ್ನಾಟಕ ಭಾಗದಲ್ಲಿ ಹೇರಳವಾದ ಸಂಪನ್ಮೂಲಗಳಿದ್ದರೂ ಸಂಕಷ್ಟಗಳ ಸರಮಾಲೆಯನ್ನೇ ಎದುರಿಸುವಂತಾಗಿದೆ

# ಉತ್ತರ ಕರ್ನಾಟಕಕ್ಕೆ ನಿರಂತರ ಅನ್ಯಾಯ: ಗೋಲಶೆಟ್ಟಿ ಆರೋಪ

• ಉದಯವಾಹಿನಿ, ವಿಜಯಪುರ

ಉತ್ತರ ಕರ್ನಾಟಕಕ್ಕೆ ನಿತ್ಯ ಅನ್ಯಾಯವಾಗುತ್ತಿದೆ, ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ, ಹೀಗಾಗಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಚನೆಯ ಹೋರಾಟವನ್ನು ನಾವು ಇನ್ನಷ್ಟು ತೀವ್ರಗೊಳಿಸಲಿದ್ದೇವೆ ಎಂದು ಉತ್ತರ ಕರ್ನಾಟಕ ಹೋರಾಟ ಸಮಿತಿಯ ಪ್ರಮುಖರಾದ ನಾಗೇಶ ಗೋಲಶೆಟ್ಟಿ ಹೇಳಿದರು.

ನಾವು ನಾಡು ವಿಭಜನೆ ಮಾಡುತ್ತಿಲ್ಲ, ಇದು ವಿಭಜನೆಯಲ್ಲ, ಕಳೆದ ಹಲವಾರು ವರ್ಷಗಳಿಂದ ಉತ್ತರ ಕರ್ನಾಟಕ ಭಾಗಕ್ಕೆ ದೊಡ್ಡ ಪ್ರಮಾಣದ ಅನ್ಯಾಯವಾಗುತ್ತಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೇರಳವಾದ ಸಂಪನ್ಮೂಲಗಳಿದ್ದರೂ ಉ.ಕ. ಭಾಗದ ಜನತೆ ದೊಡ್ಡ ಸಂಕಷ್ಟಗಳ ಸರಮಾಲೆಯನ್ನೇ ಎದುರಿಸುವಂತಾಗಿದೆ. ರಾಜು ಕಾಗೆ ಸೇರಿದಂತೆ ಅನೇಕ ಶಾಸಕರು ಈ ನಿಲುವಿನ ಪರವಾಗಿದ್ದಾರೆ ಎಂದರು.

ಇತ್ತೀಚೆಗೆ ಪ್ರತ್ಯೇಕ ಮೈಸೂರು ರಾಜ್ಯ ರಚನೆಗೆ ಆ ಭಾಗದ ಹೋರಾಟಗಾರರು ಆಗ್ರಹಿಸಿದ್ದು ಉತ್ತರ ಕರ್ನಾಟಕ ಹೋರಾಟ ಸಮಿತಿಯು ಸ್ವಾಗತಿಸಿದೆ. ಕಾಗೆಯವರ ಪತ್ರಕ್ಕೆ ಈಗಾಗಲೇ ಅನೇಕ ಶಾಸಕರು ಬೆಂಬಲವನ್ನು ವ್ಯಕ್ತಪಡಿಸಿದ್ದು ಉತ್ತರ ಕರ್ನಾಟಕ ಭಾಗದ ಎಲ್ಲಾ ಜನಪ್ರತಿನಿಧಿಗಳು ಬೆಂಬಲಿಸಬೇಕಾಗಿದೆ. ಈ ಹಿಂದೆ ಸಂಸದ ರಮೇಶ ಜಿಗಜಿಣಗಿ ಅವರು ರಾಜ್ಯಪಾಲರಿಗೆ ಪ್ರತ್ಯೇಕ ರಾಜ್ಯಕ್ಕೆ ಆಗ್ರಹಿಸಿ ಪತ್ರವನ್ನು ಬರೆದಿದ್ದಾರೆ.

ಪಕ್ಷಾತೀತವಾಗಿ ಉತ್ತರ ಕರ್ನಾಟಕ ಭಾಗದ ಎಲ್ಲಾ ಜನಪ್ರತಿನಿಧಿಗಳು ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ಹಾಗೂ ಲೋಕಸಭಾ ಸದಸ್ಯರು ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟಕ್ಕೆ ಬೆಂಬಲಿಸಬೇಕಾಗಿದೆ ಎಂದರು.

> ಈ ಭಾಗದ ಯುವಕರಿಗೆ ಉದ್ಯೋಗಾವಕಾಶಗಳು ಸಿಗಲು ಐಟಿಬಿಟಿ ಬಹುರಾಷ್ಟ್ರೀಯ ಕಂಪನಿಗಳು ಸ್ಥಾಪನೆಯಾಗಬೇಕು. ಈ ಭಾಗದ ನೀರಾವರಿ ಯೋಜನೆಗಳು ಪೂರ್ಣಗೊಳ್ಳಬೇಕು. ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ಸಿಗಬೇಕು. ಎಲ್ಲಾ ವರ್ಗದ ಜನರು ಸ್ವಾಭಿಮಾನ, ಸ್ವಾತಂತ್ರ್ಯ, ಸ್ವಾವಲಂಬನೆಯೊಂದಿಗೆ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಪ್ರತ್ಯೇಕ ರಾಜ್ಯ ಅನಿವಾರ್ಯ
> -ನಾಗೇಶ ಗೋಲಶೆಟ್ಟಿ

ಕೃಷ್ಣೆ ಕಾವೇರಿಗಿಂತ ಮೂರು ಪಟ್ಟು ದೊಡ್ಡದಾಗಿರುವ ನದಿ, ಆದರೂ ಜೀವ ನದಿ ಕಾವೇರಿ, ಮಂಡ್ಯಗಿಂತ ಅಧಿಕ ಕಬ್ಬು ನಮ್ಮ ಭಾಗದಲ್ಲಿ ಬೆಳೆಯುತ್ತದೆ. ಆದರೂ ಸಹ ಮಂಡ್ಯ ಸಕ್ಕರೆ ಕಣಜ. ಕೇವಲ ಒಂದು ನಗರವನ್ನು ನಿರ್ಮಿಸಿದ ಕೆಂಪೆಗೌಡರನ್ನು ನಾಡಪ್ರಭು ಎಂದು ಕರೆಯಲಾಗಿದೆ. ಹಾಗಾದರೆ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ಸಂಗೊಳ್ಳಿ ರಾಯಣ್ಣ ಅವರನ್ನು ಏನೆಂದು ಕರೆಯುತ್ತೀರಿ? ಅವರು ಉತ್ತರ ಕರ್ನಾಟಕದವರು ಎಂದು ನಿರ್ಲಕ್ಷ್ಯ ತೋರುತ್ತಿದ್ದೀರಾ ಎಂದು ಪ್ರಶ್ನಿಸಿದರು. ಐ.ಟಿ.-ಬಿಟಿ ಇಲ್ಲ ಎಂದು ನೀವು ತಿಳಿದುಕೊಂಡಿರಬಹುದು. ಐಟಿ ಕ್ಷೇತ್ರ ನಮ್ಮಲ್ಲಿ ಇಲ್ಲದಿರಬಹುದು. ಆದರೆ ನೈಸರ್ಗಿಕವಾದ ಹೇರಳ ಸಂಪನ್ಮೂಲಗಳು ನಮ್ಮಲ್ಲಿವೆ ಎಂದರು.


☛ ಉದಯವಾಹಿನಿ ಚಿತ್ರ

**ಉ.ಕರ್ನಾಟಕದ ಜನತೆಯ ಬಗ್ಗೆ ಮಲತಾಯಿ ಧೋರಣೆ**

ಉತ್ತರ ಕರ್ನಾಟಕದ ಜನತೆ ಏಕೀಕರಣಕ್ಕಾಗಿ ದೊಡ್ಡ ಹೋರಾಟ ಮಾಡಿದವರು. ಆದರೆ ಇಂದು ಅದೇ ಉತ್ತರ ಕರ್ನಾಟಕದ ಜನತೆಯ ಬಗ್ಗೆ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ. ರಾಜ್ಯೋತ್ಸವ ಪ್ರಶಸ್ತಿಯಲ್ಲಿಯೂ ತಾರತಮ್ಯ, ಅಲ್ಲಿಯೂ ಉತ್ತರ ಕರ್ನಾಟಕದವರಿಗೆ ಅನ್ಯಾಯ ಇದೆ. ಕರ್ನಾಟಕ ಏಕೀಕರಣ ಆದಾಗಿನಿಂದ ಇಲ್ಲಿಯವರೆಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ತಾರತಮ್ಯ, ಅನ್ಯಾಯ, ಮಲತಾಯಿ ಧೋರಣೆ ಮುಂದುವರೆದಿದೆ. ನಮ್ಮ ಯಾವ ಬೇಡಿಕೆಗಳನ್ನೂ ಯಾವ ಸರ್ಕಾರಗಳೂ ಈಡೇರಿಸಿಲ್ಲ. ಪ್ರತಿಯೊಂದಕ್ಕೂ ಹೋರಾಟ ಮಾಡಬೇಕಾದ ದುಸ್ಥಿತಿ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಪ್ರತ್ಯೇಕ ರಾಜ್ಯ ಅನಿವಾರ್ಯ**

ಹೋರಾಟಗಾರ ಎಸ್.ವಿ. ಪಾಟೀಲ ಸಿಂದಗಿ ಮಾತನಾಡಿ, ಎಲ್ಲಾ ಅಧಿಕಾರ ಬೆಂಗಳೂರಿಗಷ್ಟೇ ಕೇಂದ್ರಿಕೃತವಾಗಿವೆ. ಮಹಾರಾಷ್ಟ್ರದಲ್ಲಿ ನಾಗಪುರ, ಮುಂಬಯಿ ಎರಡು ರಾಜಧಾನಿಗಳಿವೆ. ಆದರೆ ನಮ್ಮಲ್ಲಿ ಎರಡು ರಾಜಧಾನಿಗಳಿದ್ದರೂ ಸಂಪೂರ್ಣ ಅಧಿಕಾರ ಕೇಂದ್ರಕೃತವಾಗಿದ್ದು ಬೆಂಗಳೂರಿಗೆ. ಬೆಂಗಳೂರಿಗೆ ಹೋಗಲು ಈ ಭಾಗದ ಜನತೆ ಕನಿಷ್ಠ 5000 ರೂ. ಬೇಕು. ಅಷ್ಟೊಂದು ಹಣ ಕೊಟ್ಟು ಈ ಭಾಗದ ಬಡಜನತೆ ರಾಜಧಾನಿಗೆ ಹೋಗಲು ಸಾಧ್ಯವೇ ಎಂದು ಅನೇಕ ಪ್ರಶ್ನೆಗಳನ್ನು ಕೇಳಿದರು.

ಬೆಳಗಾವಿಯಲ್ಲಿ ಸುವರ್ಣ ಸೌಧ ಎನ್ನುವುದು ಕೇವಲ ಪಕ್ಷಿಗಳ ಸೌಧವಾಗಿದೆ. ವಿಷಯ ಚರ್ಚೆ ನಾಮಕೆವಾಸ್ತೆಯಾಗುತ್ತಿದೆ. ನಾವು ಸಹಿಷ್ಣುಗಳು. ಇಲ್ಲಿಯವರೆಗೂ ಸಹಿಸಿಕೊಂಡಿದ್ದೇವೆ. ಎಷ್ಟು ದಿನ ಸಹಿಸಿಕೊಳ್ಳೋಣ ಎಂದರು.

ಸಚಿವ ಸ್ಥಾನ ಹಂಚಿಕೆಯಲ್ಲಿಯೂ ಈ ಭಾಗದ ಶಾಸಕರಿಗೆ ಅನ್ಯಾಯ, ಮೀನುಗಾರಿಕೆಯಂತಹ ಖಾತೆಗಳನ್ನು ಉತ್ತರ ಕರ್ನಾಟಕದ ಶಾಸಕರಿಗೆ ನೀಡಲಾಗುತ್ತಿದೆ. ಪ್ರಭಾವಿ ಸ್ಥಾನಗಳೆಲ್ಲವೂ ದಕ್ಷಿಣ ಕರ್ನಾಟಕದ ಪಾಲಿಗೆ ಸೀಮಿತ ಎಂದರು.

ಹಳೇ ಮೈಸೂರು ಹಾಗೂ ನಮ್ಮನ್ನು ಹೋಲಿಕೆ ಮಾಡಿದರೆ ನಾವು ಅವರಿಗಿಂತ 40 ವರ್ಷ ಹಿಂದೆ ಇದ್ದೇವೆ. ಇದಕ್ಕೆಲ್ಲವೂ ನಮ್ಮ ಭಾಗಕ್ಕೆ ತೋರಿದ ಮಲತಾಯಿ ಧೋರಣೆಯೇ ಕಾರಣ ಎಂದರು.

**ಸಹಿ ಸಂಗ್ರಹಣ ಅಭಿಯಾನ**

2018 ರಿಂದ ಉತ್ತರ ಕರ್ನಾಟಕ ಹೋರಾಟ ಸಮಿತಿಯು ಪ್ರತ್ಯೇಕ ರಾಜ್ಯಕ್ಕಾಗಿ ಲಿಖಿತ ಅಭಿಪ್ರಾಯ ಮತ್ತು ಸಹಿ ಸಂಗ್ರಹಣ ಅಭಿಯಾನವನ್ನು ಪ್ರಾರಂಭಿಸಿದ್ದು ಒಂದು ಕೋಟಿ ನಲವತ್ತು ಲಕ್ಷಕ್ಕೂ ಅಧಿಕ ಜನರ ಸಹಿ ಸಂಗ್ರಹ ಮಾಡಿದೆ. 2025 ನವೆಂಬರ್ ಒಂದರಿಂದ ಜನಪ್ರತಿನಿಧಿಗಳಿಂದ ಸಹಿ ಸಂಗ್ರಹ ಹಾಗೂ ಪತ್ರ ಚಳುವಳಿಯ ಅಭಿಯಾನವನ್ನು ಪ್ರಾರಂಭಿಸಿದ್ದು ಈಗಾಗಲೇ ಈ ಭಾಗದ ಅನೇಕ ಜನಪ್ರತಿನಿಧಿಗಳು ಇದನ್ನು ಬೆಂಬಲಿಸಿದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪತ್ರವನ್ನು ಕೂಡ ಬರೆದಿದ್ದಾರೆ ಎಂದರು.

## ಜಿಲ್ಲಾ ಖಜಾನೆಯಿಂದ ಅಧಿಕಾರಿಗಳಿಗೆ ಕಾರ್ಯಾಗಾರ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಬಟವಾಡೆ ಅಧಿಕಾರಿಗಳು (ಡಿಡಿಓ) ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹೆಚ್‌ಆರ್‌ಎಂಎಸ್-2 ಹಾಗೂ ಖಜಾನೆ-2 ತಂತ್ರಾಂಶ ಕುರಿತು ಕಾರ್ಯಾಗಾರ ನಡೆಸಲಾಯಿತು.

ಜಿಲ್ಲಾ ಖಜಾನೆ ಉಪನಿರ್ದೇಶಕ ಹೆಚ್.ಟಿ. ಅಶೋಕ ಅವರು ಸಸಿಗೆ ನೀರೆರೆಯುವುದರ ಮೂಲಕ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಖಜಾನೆ-2ರಲ್ಲಿ ಬಿಲ್ಲನ್ನು ಸೃಜಿಸಿ ಸಲ್ಲಿಸುವಾಗ ಅನುಸರಿಸಬೇಕಾದ ನಿಯಮಾಳಿಗಳ ಬಗ್ಗೆ ತಿಳಿಸಿದರು. ಪ್ರತಿ ಮಾಹೆ ವೆಚ್ಚ, ಜಿ.ಎಸ್.ಟಿ. ಸಮನ್ವಯೀಕರಣ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಲೆಕ್ಕ ಸಮನ್ವಯೀಕರಣವನ್ನು ನಿಗದಿತ ಅವಧಿಯೊಳಗೆ ಮಾಡುವಂತೆ ಸಲಹೆ ನೀಡಿದರು. ವರ್ಷಾಂತ್ಯ ಸಮೀಪಿಸುತ್ತಿರುವುದರಿಂದ ಡಿ.ಎಸ್.ಸಿ ನವೀಕರಣ, ಪ್ರಯಾಣ ಭತ್ಯೆ ಬಿಲ್ಲುಗಳು, ಜಿ.ಪಿ.ಎಫ್ ಬಿಲ್ಲುಗಳು, ಹೆಚ್‌ಆರ್‌ಎಂಎಸ್-2, ಎನ್.ಪಿ.ಎಸ್ ಹಾಗೂ ಆನ್‌ಲೈನ್ ಕಚೇರಿ ಆದೇಶ ಸೃಜನೆ ಬಗ್ಗೆ ವಿವರಿಸಿದರು.

ದಾವಣಗೆರೆ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನ ಸಂಪನ್ಮೂಲ ವ್ಯಕ್ತಿ ವೀರೇಶ್ ಅವರು, ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವರ್ಕ್ ಬಿಲ್ ಸೃಜನೆಯ ಬಗ್ಗೆ ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಖಜಾನೆ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಬೋರಯ್ಯ, ಸಹಾಯಕ ಖಜನಾಧಿಕಾರಿ ಬಿ.ವೀರಭದ್ರಪ್ಪ, ಕಾರ್ಯಪಾಲಕ ಅಭಿಯಂತರ ಹೆಚ್.ಪಿ.ಅಮರನಾಥ್ ಜೈನ್, ಅರಣ್ಯ ಇಲಾಖೆ ಎಸಿಎಫ್ ಎಂ.ಎಸ್.ನ್ಯಾಮತಿ ಇದ್ದರು.

## ಜೀವನದಲ್ಲಿ ಕೌಶಲ್ಯ ವೃದ್ದಿಸಿಕೊಂಡು ಉದ್ಯೋಗಿಗಳಾಗಿ: ರಾಠೋಡ

• ಉದಯವಾಹಿನಿ, ತಾಳಿಕೋಟೆ

ಇಂದಿನ ದಿನಮಾನಗಳಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಉದ್ಯೋಗದಾತರು ಕೌಶಲ್ಯನಿರತ ಉದ್ಯೋಗಿಗಳ ಹುಡುಕಾಟದಲ್ಲಿ ಇರುವುದರಿಂದ ಕೇವಲ ನಮ್ಮ ಪದವಿಯಿಂದಲ್ಲ ಜೀವನದಲ್ಲಿ ಕೌಶಲ್ಯ ವೃದ್ದಿಸಿಕೊಂಡು ಉದ್ಯೋಗಿಗಳಾಗುವತ್ತ ಗಮನ ಹರಿಸಬೇಕೆಂದು ಅಗಸ್ತ್ಯ ಫೌಂಡೇಶನ್‌ನ ವಿಜಯಪುರ ವಿಭಾಗದ ಕ್ಯಾಟಲೈಝರ್ ದಿನೇಶ್ ರಾಠೋಡ್ ಅವರು ಹೇಳಿದರು.

ಪಟ್ಟಣದ ವೀರಶೈವ ವಿದ್ಯಾವರ್ಧಕ ಸಂಘದ ಎಸ್.ಕೆ. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾ ವಿದ್ಯಾಲಯದಲ್ಲಿ ಇಂಗ್ಲೀಷ ವಿಭಾಗ ಹಾಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಕೋಶ ಹಾಗೂ ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಶನ್ ಇವುಗಳ ಸಹಯೋಗದಲ್ಲಿ ಏರ್ಪಡಿಸಲಾದ ''ಸೃಜನಾತ್ಮಕ ಕೌಶಲ್ಯ ತರಬೇತಿ'' ಕುರಿತು ಮೂರು ದಿನದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ನಾವೆಲ್ಲರೂ ತಂತ್ರಜ್ಞಾನದ ಜೊತೆಗೆ ಸಾಗಬೇಕಾಗಿದೆ.


☛ ಉದಯವಾಹಿನಿ ಚಿತ್ರ

ಕೃತಕ ಬುದ್ಧಿಮತ್ತೆ ಎಲ್ಲಾ ಕ್ಷೇತ್ರದಲ್ಲಿಯೂ ಪ್ರಭಾವ ಬೀರುತ್ತಿದ್ದು ಅದರೊಂದಿಗೆ ಹೊಂದಿಕೊಳ್ಳುವುದು ಅವಶ್ಯಕವಾಗಿದೆ ಪದವಿ ಮತ್ತು ಅಂಕಪಟ್ಟಿಗಳನ್ನು ಬದಿಗಿಟ್ಟು ಕೌಶಲ್ಯವನ್ನು ಅರಸುವ ದಿನಮಾನಗಳು ಹತ್ತಿರವಾಗಿದ್ದು ಬೇರೆ ಬೇರೆ ಕೌಶಲ್ಯಗಳಲ್ಲಿ ಪರಿಣಿತರಾಗಬೇಕು ಅದಕ್ಕಾಗಿ ನಿರಂತರ ಪ್ರಯತ್ನ ಮತ್ತು ಅಭ್ಯಾಸ ಅವಶ್ಯಕತೆ ಕೌಶಲ್ಯ ವೃದ್ದಿಗೊಂಡಷ್ಟು ದೇಶ ಅಭಿವೃದ್ಧಿಯತ್ತ ದಾಪುಗಾಲು ಹಾಕಲಿದೆ ಎಂದರು. ಡಾ.ಅಜೇಯ ಅಬ್ಬಾರ ಸ್ವಾಗತಿಸಿದರು. ಪ್ರೊ. ರಮೇಶ ಜಾಧವ ಅತಿಥಿಗಳನ್ನು ಪರಿಚಯಿಸಿದರು. ಕು.ಕಲ್ಪನಾ ಕಟ್ಟಿಮನಿ ನಿರೂಪಿಸಿದರು.

> ಪ್ರತಿಯೊಬ್ಬರ ಬಳಿಯೂ ವಿವಿಧ ಕೌಶಲ್ಯಗಳಿದ್ದು ಅವುಗಳನ್ನು ಹೊರಹಾಕುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳಸಿಕೊಳ್ಳಬೇಕು ಅಗಸ್ತ್ಯ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ಮೂರು ದಿನಗಳ ವಿಶೇಷ ತರಭೇತಿಯಲ್ಲಿ ಅತ್ಯುತ್ತಮವಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಗುವುದು.
> -ಅನೀಲಕುಮಾರ ಆಲಾಳಮಠ

## ವಸತಿನಿಲಯಗಳಲ್ಲಿ ಭ್ರಷ್ಟಾಚಾರ: ಉನ್ನತ ಮಟ್ಟದ ತನಿಖೆಗೆ ಆಗ್ರಹ

• ಉದಯವಾಹಿನಿ ಕಲಬುರಗಿ

ಜಿಲ್ಲೆಯ ಜೇವರ್ಗಿ, ಯಡ್ರಾಮಿ ತಾಲ್ಲೂಕಿನ ಅನೇಕ ವಸತಿನಿಲಯಗಳಿಗೆ ಸಮರ್ಪಕವಾಗಿ ಆಹಾರ ಮತ್ತು ಆಹಾರೇತರ ಸಾಮಗ್ರಿಗಳನ್ನು ಸರಿಯಾದ ರೀತಿಯಲ್ಲಿ ಸರಬರಾಜು ಮಾಡದೆ ಭ್ರಷ್ಟಾಚಾರ ವ್ಯಸಗಲಾಗಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿಯ ಅಧ್ಯಕ್ಷ ಎಂ.ಎಸ್. ಪಾಟೀಲ ನರಿಬೋಳ ಹಾಗೂ ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರವಣಕುಮಾರ ಡಿ ನಾಯಕ ರವರು ಜಂಟಿಯಾಗಿ ಒತ್ತಾಯಿಸಿದ್ದಾರೆ. ಒಂದು ವೇಳೆ ಈ ವಿಷಯವನ್ನು ನಿರ್ಲಕ್ಷ್ಯ ಮಾಡಿದಲ್ಲಿ, ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

## ವಿದ್ಯುತ್ ತಿದ್ದುಪಡಿ ಮಸೂದೆಗೆ ವಿರೋಧ

• ಉದಯವಾಹಿನಿ ದಾವಣಗೆರೆ

ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಕೈಬಿಡುವಂತೆ ಒತ್ತಾಯಿಸಿ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ನಗರದ ಹದಡಿ ರಸ್ತೆಯ ಬೆಸ್ಕಾಂ ಗ್ರಾಮಾಂತರ ವಿಭಾಗದ ಕಚೇರಿಯ ಎದುರು ಜಮಾಯಿಸಿದ ಪ್ರತಿಭಟನಕಾರರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಹುನ್ನಾರದಿಂದ ಈ ಮಸೂದೆ ರೂಪಿಸಲಾಗಿದೆ. ಇದು ಜಾರಿಗೆ ಬಂದರೆ ಸಾರ್ವಜನಿಕರಿಗೆ ದೊರೆಯುವ ವಿದ್ಯುತ್ ಸೇವೆಗಳು ಖಾಸಗಿ ಕಂಪನಿಗಳ ಲಾಭದಾಯಕ ವ್ಯವಹಾರವಾಗಿ ಮಾರ್ಪಡುವ ಅಪಾಯವಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಅಳವಡಿಸಿದ ಸ್ಮಾರ್ಟ್ ಮೀಟರ್‌ನಿಂದ ದೋಷಪೂರಿತ ಬಿಲ್‌ಗಳು ಹೆಚ್ಚಾಗಿವೆ. ಅನಿಯಂತ್ರಿತ ದರ ಏರಿಕೆ, ತಾಂತ್ರಿಕ ದೋಷಗಳು, ಅಸಮಂಜಸ ವಿದ್ಯುತ್ ಕಡಿತ ಕಂಡುಬಂದಿದೆ. ಗ್ರಾಮೀಣ ಪ್ರದೇಶದ ಮನೆ, ಕೃಷಿ ಪಂಪ್‌ಸೆಟ್‌ಗಳಿಗೆ ತೊಂದರೆ ಉಂಟಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಬಸ್ ನಿಲುಗಡೆಗೆ ವಾರದಲ್ಲಿ ಮತ್ತೊಂದು ಪ್ರತಿಭಟನೆ

• ಉದಯವಾಹಿನಿ ಕೊಪ್ಪಳ

ಜಿಲ್ಲಾಕೇಂದ್ರದ ಸಮೀಪದಲ್ಲಿರುವ ಬಸಾಪುರ ಗ್ರಾಮದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವೇಗದೂತ ಬಸ್‌ಗಳನ್ನು ನಿಲುಗಡೆ ಮಾಡಬೇಕು ಎಂದು ಆಗ್ರಹಿಸಿ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಬೆಳಿಗ್ಗೆ ದಿಢೀರ್ ಬಸ್ ತಡೆದು ಪ್ರತಿಭಟನೆ ನಡೆಸಿದರು.

ಇದೇ ಬೇಡಿಕೆ ಈಡೇರಿಕೆಗಾಗಿ ಒಂದು ವಾರದ ಹಿಂದೆಯಷ್ಟೇ ಬಸಾಪುರದಲ್ಲಿ ಪ್ರತಿಭಟನೆ ನಡೆದಿತ್ತು. ಆಗ ಸಾರಿಗೆ ಇಲಾಖೆ ಅಧಿಕಾರಿಗಳು ಬಸಾಪುರದಲ್ಲಿ ವೇಗದೂತ ಬಸ್‌ಗಳ ನಿಲುಗಡೆ ಮೊದಲಿನಿಂದಲೂ ಇದೆ. ಕೆಲ ಸಿಬ್ಬಂದಿ ಪಾಲಿಸುತ್ತಿರಲಿಲ್ಲ. ಈಗ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ’ ಎಂದಿದ್ದರು. ಆದರೂ ಬಸ್ ನಿಲ್ಲುತ್ತಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದರು. ಸುಮಾರು ಎರಡು ತಾಸಿಗೂ ಹೆಚ್ಚು ಹೊತ್ತು ನಡೆದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಬಸ್ ಮುಂಭಾಗದಲ್ಲಿ ಅಡ್ಡಲಾಗಿ ಕುಳಿತಿದ್ದರಿಂದ ಸಾಕಷ್ಟು ಬಸ್‌ಗಳು ಸರತಿಯಲ್ಲಿ ನಿಂತುಕೊಂಡಿದ್ದರಿಂದ ಗದಗ-ರಾಯಚೂರು, ಕೊಪ್ಪಳ -ವನಬಳ್ಳಾರಿ ಸೇರಿದಂತೆ ಎರಡೂ ಕಡೆಯಿಂದ ಓಡಾಡುವ ಬಸ್‌ಗಳನ್ನು ನಿಲ್ಲಿಸಿ ಪ್ರತಿಭಟನೆ ಮಾಡಿದರು. ನಮ್ಮ ಬೇಡಿಕೆ ಈಡೇರುವ ತನಕ ನಿರಂತರ ಹೋರಾಟ ಮಾಡುತ್ತಲೇ ಇರುತ್ತೇವೆ ಎನ್ನುವ ಎಚ್ಚರಿಕೆಯನ್ನೂ ನೀಡಿದರು.

## ಚಂದ್ರಂಪಳ್ಳಿ ಮುಖ್ಯ ಕಾಲುವೆಗಳಿಗೆ ನೀರು ಹರಿಸಲು ಮನವಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯದ ಮುಖ್ಯ ಕಾಲುವೆಗಳಿಗೆ ನೀರು ಹರಿಸಿದರೆ ರೈತರು ಬೆಳೆದ ಜೋಳ,ಕಡಲೆ,ತೊಗರಿಬೆಳೆಗಳಿಗೆ ನೀರು ಬಿಡಲು ಅನುಕೂಲವಾಗುತ್ತದೆ ಎಂದು ರೈತ ಮುಖಂಡ ಶಂಕರ ಭೋಗವಂತಿ ಮನವಿ ಮಾಡಿದ್ದಾರೆ.

ಚಂದ್ರಂಪಳ್ಳಿ ಜಲಾಶಯದಿಂದ ಬಲದಂಡೆ ಕಾಲುವೆಯು ಮತ್ತು ಎಡದಂಡೆ ಕಾಲುವೆಗಳಿಗೆ ಚಂದ್ರಂಪಳ್ಳಿ ಜಲಾಶಯ ಎಇಇ ಹಾಗೂ ಉನ್ನತಮಟ್ಟದ ಅಧಿಕಾರಿಗಳು ನೀರು ಬಿಟ್ಟರೆ ರೈತರು ಬೆಳೆದಿರುವ ಕಡಲೆ,ಜೋಳ,ತೊಗರಿ,ಬೆಳೆಗಳಿಗೆ ನೀರು ಬಿಡಲು ಅನುಕೂಲವಾಗುತ್ತದೆ, ಸುಮಾರು ತಿಂಗಳಿಂದ ಮಳೆ ಬರದೆ ಇರುವುದರಿಂದ ಬೆಳೆ ಒಣಗುವ ಸ್ಥಿತಿ ನಿರ್ಮಾಣವಾಗಿದೆ ಚಂದ್ರಂಪಳ್ಳಿ ಮುಖ್ಯ ಕಾಲುವೆ ಮರಿ ಕಾಲುವೆಗಳಿಗೆ ನೀರು ಬಿಟ್ಟರೆ ಒಂದು ತಿಂಗಳ ನಂತರ ರೈತರ ಜಮೀನುಗಳಿಗೆ ನೀರು ಬರುತ್ತವೆ,ಡಿಸೆಂಬರ್ ಕೊನೆಯಲ್ಲಿ ಬಂದರೆ ರೈತರಿಗೆ ಅನುಕೂಲ ಆಗುವುದಿಲ್ಲ ಅಕ್ಟೋಬರ್ ತಿಂಗಳಲ್ಲಿ ಬಿಟ್ಟರೆ ನವೆಂಬರ್‌ನಲ್ಲಿ ನೀರು ರೈತರಿಗೆ ಸರಿಯಾದ ಸಮಯಕ್ಕೆ ನೀರು ಸರಬರಾಜು ಆಗುತ್ತಿತ್ತು ಆದರೆ ಕಾಲುವೆ ಸ್ವಚ್ಛತಾ ಮಾಡದೆ ಇರುವುದರಿಂದ ನೀರು ಕಾಲುವೆಗಳಿಗೆ ಬರಲು ಸುಮಾರು ತಿಂಗಳು ಕಾಲ ಹಿಡಿಯುತ್ತದೆ ಇದರಿಂದ ರೈತರು ಹೇಗೆ ಉಪಯೋಗ ಪಡಿಸಿಕೊಳ್ಳಬೇಕು ಎಂದರು.


☛ ಉದಯವಾಹಿನಿ ಚಿತ್ರ

## ಬೀದಿನಾಯಿ ಹಾವಳಿ ತಡೆಗೆ ಚರ್ಚೆ: ಆಹಾರ ತ್ಯಾಜ್ಯ ಸುರಿದರೆ ಶಿಸ್ತು ಕ್ರಮ

• ಉದಯವಾಹಿನಿ, ಕಾರವಾರ

ಬೀದಿನಾಯಿಗಳಿಗೆ ಅನುಕೂಲವಾಗುವಂತೆ ಆಹಾರ ತ್ಯಾಜ್ಯಗಳನ್ನು ಸಾರ್ವಜನಿಕ ಸ್ಥಳದಲ್ಲಿ ಸುರಿಯುತ್ತಿರುವವರ ವಿರುದ್ಧ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿ ಪ್ರಿಯಾ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೀದಿನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ಆದೇಶಗಳ ಅನುಷ್ಠಾನದ ಕುರಿತು ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಸಾರ್ವಜನಿಕ ಸ್ಥಳಗಳು, ಹೆದ್ದಾರಿಯ ಅಂಚಿನಲ್ಲಿ ಕಸಗಳನ್ನು ಎಸೆಯಲಾಗುತ್ತಿದೆ. ನಿಯಂತ್ರಣಕ್ಕೆ ಸಾಕಷ್ಟು ಬಾರಿ ಸೂಚನೆ ನೀಡಿದ್ದರೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಜವಾಬ್ದಾರಿಯುತ ಕ್ರಮ ಜರುಗಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬೀದಿನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಕೋರ್ಟ್ ನೀಡಿರುವ ಆದೇಶಗಳು ಮತ್ತು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ಕೈಗೊಂಡ ಕ್ರಮಗಳ ಬಗ್ಗೆ ಶೀಘ್ರದಲ್ಲಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಬೇಕು. ವರದಿ ಸಲ್ಲಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದು ಅನಿವಾರ್ಯ ಆಗಲಿದೆ ಎಂದು ಎಚ್ಚರಿಸಿದರು.


☛ ಉದಯವಾಹಿನಿ ಚಿತ್ರ

> ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಬೀದಿನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಈ ಸ್ಥಳಗಳಲ್ಲಿ ಆಹಾರ ಪದಾರ್ಥಗಳನ್ನು ಚೆಲ್ಲುವುದು ಮತ್ತು ತ್ಯಾಜ್ಯ ನಿರ್ಮಾಣವಾಗದಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. -ಜಿಲ್ಲಾಧಿಕಾರಿ

## ಹದಗೆಟ್ಟ ವ್ಯವಸ್ಥೆ: ಪುರಸಭೆಗೆ ಮುತ್ತಿಗೆ, ತೀವ್ರ ತರಾಟೆ

• ಉದಯವಾಹಿನಿ ಸಂಕೇಶ್ವರ

ಸಾರ್ವಜನಿಕ ಸಮಸ್ಯೆಗಳ ಪರಿಹಾರಕ್ಕೆ ಪದೇ ಪದೇ ಆಗ್ರಹಿಸುತ್ತಿದ್ದರೂ ಸರಿಯಾಗಿ ಸ್ಪಂದಿಸದ ಜನಪ್ರತಿನಿಧಿಗಳ ಕಾರ್ಯವೈಖರಿಗೆ ಬೇಸತ್ತು ಪಟ್ಟಣದ ವಾರ್ಡ್ ನಂ-1ರ ನಿವಾಸಿಗಳು ಧಿಕ್ಕಾರದ ಘೋಷಣೆ ಕೂಗುತ್ತ ಪುರಸಭೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

**ಕೆಲ ಕಾಲ ಬಿಗುವಿನ ವಾತಾವರಣ**

ಕುಂದು ಕೊರತೆಗಳ ಪರಿಹಾರಕ್ಕೆ ಆಗ್ರಹಿಸಿ ಪುರಸಭೆ ಮುಖ್ಯಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದ ಪ್ರತಿಭಟನಕಾರರು ಪುರಸಭೆ ಅಧಿಕಾರಿಗಳನ್ನು, ಪುರಸಭೆ ಸದಸ್ಯರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಒಂದು ಗಂಟೆಗೂ ಹೆಚ್ಚು ಕಾಲ ಬಿಗುವಿನ ವಾತಾವರಣ ಸೃಷ್ಟಿಯಾಯಿತು.

ಪುರಸಭೆಯ ಸ್ವಚ್ಛತಾ ಕಾರ್ಯ ಸಮರ್ಪಕವಾಗಿ ನಡೆಯದೇ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ. ಒಳಚರಂಡಿ ವ್ಯವಸ್ಥೆ ಹದಗೆಟ್ಟಿದೆ. ಚರಂಡಿ ಬದಿಯ, ಖಾಲಿ ಪ್ರದೇಶಗಳಲ್ಲಿ ಕಸ ಕಡ್ಡಿ ತುಂಬಿದ್ದು ಸಂಬಂಧಪಟ್ಟವರು ಗಮನ ಹರಿಸುತ್ತಿಲ್ಲ. ಕೆಲವು ಬೀದಿಗಳಲ್ಲಿ ವಿದ್ಯುತ್ ದೀಪಗಳು ಕಾರ್ಯನಿರ್ವಹಿಸದೇ ಕತ್ತಲೆ ಆವರಿಸಿದೆ. ಬೀದಿ ದೀಪ ದುರಸ್ತಿ, ಎಲ್‌ಇಡಿ ಬಲ್ಬ್ ಅಳವಡಿಕೆ ಕೈಗೊಳ್ಳಬೇಕಾದ ಪುರಸಭೆ ಆಡಳಿತ ಕಣ್ಣು ಮುಚ್ಚಿ ಕುಳಿತಿದೆ’ ಎಂದು ದೂರಿದರು. ಅನಿಯಮಿತವಾಗಿ ಬರುವ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. 3 ದಿನಗಳ ಒಳಗೆ ನೀರು ಬಿಡುವ ವ್ಯವಸ್ಥೆ ಆಗಬೇಕು. ಮಗದುಮ್ಮ ಶಾಲೆ ಹಾಗೂ ರಾಯಲ್ ಕಾಲೋನಿ ಹತ್ತಿರವಿರುವ ತ್ಯಾಜ್ಯವನ್ನು ಕೂಡಲೇ ವಿಲೇವಾರಿ ಮಾಡಿ ಕಸದ ತೊಟ್ಟಿಗಳನ್ನು ಇಡಬೇಕು. ಪ್ರತಿದಿನ ಪುರಸಭೆಯ ತ್ಯಾಜ್ಯ ವಿಲೇವಾರಿ ವಾಹನ ಬರಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು. ನಿಡಸೋಸಿ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಕಾಮಗಾರಿ ವಿಳಂಬವಾಗುತ್ತಿದೆ. ಅಪಘಾತಗಳು ಸಂಭವಿಸುತ್ತಿದ್ದು ಸಾಮಾನ್ಯ ಜನರ ಜೀವಕ್ಕೆ ತೊಂದರೆಯಾದರೆ ಯಾರು ಹೊಣೆ ಎಂದು ಆಡಳಿತದ ವಿರುದ್ಧ ಹರಿಹಾಯ್ದರು.

ರಾಜು ಸಾನೆ, ದುಂಡಪ್ಪಾ ವಾಳಕಿ,ರಾಜು ಪಾಟೀಲ, ಚಿದು ನಿರ್ವಾಣಿಮಠ, ಮಹಾಂತೇಶ ಗುಮಚಿ, ಅನಿಲ ಪಾಟೀಲ ಇದ್ದರು.


☛ ಉದಯವಾಹಿನಿ ಚಿತ್ರ

# ನ.24 ರಿಂದ ಡಿ.9 ರವರೆಗೆ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಆಂದೋಲನ

### ಕುಷ್ಠರೋಗವು ಒಂದು ಸಾಂಕ್ರಾಮಿಕ ರೋಗ, ಇದು ಯಾವುದೇ ಶಾಪ ಪಾಪದಿಂದ ಬರುವುದಿಲ್ಲ: ಡಾ.ಗಿರೀಶ ಬದೋಲೆ

• ಉದಯವಾಹಿನಿ ಬೀದರ

ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಆಂದೋಲನ ನ.24 ರಿಂದ ಡಿ.9 ರವರೆಗೆ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದ್ದು, ಆಂದೋಲನವನ್ನು ಯಶಸ್ವಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಸೂಚಿಸಿದರು. ಅವರು ಸಂಜೆ ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜದಲ್ಲಿ ಯಾವುದೇ ವ್ಯಕ್ತಿಗಳಿಗೆ ಕುಷ್ಠರೋಗ ಲಕ್ಷಣಗಳಾದ ಸ್ಪರ್ಶ ಜ್ಞಾನ ನೋವು ನವೆ ಇಲ್ಲದ ತಿಳಿ ಬಿಳಿ ತಾಮ್ರ ಬಣ್ಣದ ಮಚ್ಚೆಗಳು, ಕೈ ಕಾಲು ಜೋಮು ಉಂಟಾಗುವುದು, ಮಚ್ಚೆಯ ಜಾಗದಲ್ಲಿ ಕೂದಲುಗಳು ಉದುರುವಿಕೆ ಇವು ಕುಷ್ಠರೋಗದ ಲಕ್ಷಣಗಳಾಗಿವೆ ಇದು ಒಂದು ನರ ಮತ್ತು ಚರ್ಮದ ಕಾಯಿಲೆಯಾಗಿದು ಕುಷ್ಠರೋಗದಿಂದ ಉಂಟಾಗುವ ಅಂಗವಿಕಲತೆಗಳ ಬಗ್ಗೆ ನೆರೆ-ಹೊರೆ ವ್ಯಕ್ತಿಗಳಿಗೆ ಸೂಕ್ತ ತಿಳುವಳಿಕೆ ನೀಡಿ, ಅವಶ್ಯಕ ಚಿಕಿತ್ಸೆ ನೀಡುವಾಗ ಬೇಧ-ಬಾವ ಮಾಡದೇ ಗೌರವಯುತವಾಗಿ ಉಪಚರಿಸಿ, ರೋಗಿ ಗುಣಮುಖ ಹೊಂದಲು ಸಹಕರಿಸಿ ಸಮಾಜದಲ್ಲಿ ರೋಗದ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ ಪ್ರಾರಂಭದ ಹಂತದಲ್ಲೆ ರೋಗ ಪತ್ತೆ ಮಾಡಿ ಬಹು ಔಷಧಿ ಚಿಕಿತ್ಸೆ ಪಡೆಯುವುದರಿಂದ ಸಂಪೂರ್ಣವಾಗಿ ಗುಣಮುಖರಾಗುವುದಲ್ಲದೆ, ಮುಂದಾಗಬಹುದಾದ ವಿಕಲಾಂಗತೆಯನ್ನು ಕೂಡ ತಡೆಗಟ್ಟಬಹುದು, ಇದಕ್ಕೆಲ್ಲಾ ಮಿಗಿಲಾಗಿ ಸಮಾಜದಲ್ಲಿರುವ ನಾವೆಲ್ಲರು ಒಗ್ಗಟ್ಟಾಗಿ ಈ ದಿಸೆಯಲ್ಲಿ ಕೆಲಸ ಮಾಡಿದರೆ ಗಾಂಧೀಜಿಯವರ ಕನಸು ಕುಷ್ಠರೋಗ ಮುಕ್ತ ಭಾರತವನ್ನು ನಿರ್ಮಿಸಬಹುದಾಗಿದೆ ಎಂದರು.


☛ ಉದಯವಾಹಿನಿ ಚಿತ್ರ

> ಕುಷ್ಠರೋಗವು ಒಂದು ಸಾಂಕ್ರಾಮಿಕ ರೋಗ, ಇದು ಯಾವುದೇ ಶಾಪ ಪಾಪ ದಿಂದ ಬರುವುದಿಲ್ಲ ಈ ಕಾಯಿಲೆ ಮೈಕೋ ಬ್ಯಾಕ್ಟೀರಿಯಾ ಲೆಪ್ರೆ ಎಂಬ ರೋಗಾಣುವಿನಿಂದ ಬರುತ್ತದೆ ,ಈ ಬ್ಯಾಕ್ಟೀರಿಯಾಗಳು ಬಹು ಔಷಧಿ ಚಿಕಿತ್ಸೆ ಪಡೆಯದೇ ಇದ್ದ ಸೋಂಕಿತ ವ್ಯಕ್ತಿ ಸೀನಿದಾಗ ಕೆಮ್ಮಿದಾಗ ಹೊರಬರುವ ತುಂತುರ ಹನಿಗಳ ಮೂಲಕ ರೋಗಾಣುಗಳು ಗಾಳಿಯಲ್ಲಿ ಸೇರಿಕೊಂಡು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಈ ಕಾಯಿಲೆಯಿಂದ ಹೆದರ ಬೇಕಾಗುವುದಿಲ್ಲಾ. ಅದನು ಗುಪ್ತವಾಗಿಡದೆ ತಮ್ಮ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾದಿಕಾರಿಗಳ ಗಮನಕ್ಕೆ ತಂದು, ಪ್ರಾರಂಭಿಕ ಹಂತದಲ್ಲೆ ಪತ್ತೆ ಹಚ್ಚಿ ಬಹು ಔಷಧಿಂದ ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ -ಡಾ.ಗಿರೀಶ ಬದೋಲೆ

ಬೀದರ ಜಿಲ್ಯಾದ್ಯಂತ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಂದೋಲನ್‌ದಲ್ಲಿ ಒಟ್ಟು 564 ತಂಡಗಳಿದ್ದು, ಇದರಲ್ಲಿ 1128 ಸದಸ್ಯರಿರುತ್ತಾರೆ. 56 ಮೇಲ್ವಿಚಾರಕರು ಕೆಲಸ ನಿರ್ವಹಿಸಲ್ಲಿದ್ದು, ಒಟ್ಟು 158005 ಮನೆಗಳಿಗೆ ಭೇಟಿ ನೀಡಿ 839128 ಜನರಿಗೆ ಪರೀಕ್ಷೆ ಮಾಡಲಿದ್ದಾರೆ. ಪ್ರತಿ ತಂಡಗಳ ಒಬ್ಬ ಮಹಿಳಾ ಮತ್ತು ಪುರುಷ ಸದಸ್ಯರುತ್ತಾರೆ. ಬೀದರ ಜಿಲ್ಲೆಯಲ್ಲಿ 66 ಕುಷ್ಠರೋಗಿಗಳು ಬಹು ಔಷಧಿ ಚಿಕಿತ್ಸೆ ಪಡೆಯುತ್ತಿದ್ದಾರೆಂದರು.

**ರೋಗಿ ಗುಣಮುಖ ಹೊಂದಲು ಸಹಕರಿಸಿ**

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನೆ ಕಾರ್ಯಕ್ರಮದಡಿಯಲಿ ಕುಷ್ಠ ರೋಗ ಪತ್ತೆ ಹಚ್ಚುವ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದ್ದು, ಈ ಕಾರ್ಯಕ್ರಮವನ್ನು ಭಾರತ ಸರ್ಕಾರದಿಂದ ಮರು ನೇಮಕ ಮಾಡಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆಯ ಸಮನ್ವಯದೊಂದಿಗೆ ಈ ಕಾರ್ಯಕ್ರಮವನ್ನು ಅಂತರ್ ಇಲಾಖಾ ಸಮನ್ವಯದೊಂದಿಗೆ, ಗ್ರಾಮ ಪಂಚಾಯಿತಿ ಮಟ್ಟದಿಂದ ಜಿಲ್ಲಾ ಮತ್ತು ರಾಜ್ಯ ಮಟ್ಟದವರೆಗೆ ಹಮ್ಮಿಕೊಳ್ಳಬೇಕಾಗಿರುತ್ತದೆ. ದಿನಾಂಕ:-24-11-2025 ರಿಂದ 09-12-2025ರ ವರೆಗೆ ಎಲ್ಲಾ ಗ್ರಾಮ ಪಂಚಾಯಿತಿ, ಪುರಸಭೆಗಳಲ್ಲಿ ಸಂಬಂಧಪಟ್ಟ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಕುಷ್ಠರೋಗ ನಿವಾರಿಸಲು ಗ್ರಾಮದಲ್ಲಿ ಟಂಟಂ ಮಾಡಿಸಿ ಜನರಲ್ಲಿ ಜಾಗ್ರತಿ ಮೂಡಿಸಿ ಸಮ್ಮಿಕ್ಷೆ ಮಾಡುವ ಸಿಭಂದಿಗಳಿಗೆ ಸಹಕಾರ ನೀಡುವದರೋಂದಿಗೆ ಕುಷ್ಠರೋಗಕೆ ಸಂಬಂದಿಸಿದಂತೆ ಸಮಾಜದಲ್ಲಿನ ಕಳಂಕವನ್ನು ಹಾಗೂ ಮಾಹಿತಿಯನ್ನು ಜನಸಾಮಾನ್ಯರಿಗೆ ಜನಪ್ರತಿನಿಧಿಗಳ ಮುಖಾಂತರ ತಿಳಿಸಬೇಕು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿ ಐಇಸಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಿಗೆ ಹೆಚ್ಚಿನ ಅರಿವು ಮೂಡಿಸಬೇಕೆಂದು ಹೇಳಿದರು.

### 350% ಸುಂಕ ಬೆದರಿಕೆ ಹಾಕಿ ನಾನೇ ಯುದ್ಧ ನಿಲ್ಲಿಸಿದ್ದು ಎಂದು ಸುಂಕ ಬೆದರಿಕೆ ಸಂಖ್ಯೆ ಹೆಚ್ಚಿಸಿದ ಟ್ರಂಪ್

# ಮೋದಿ ಫೋನ್ ಮಾಡಿ ಯುದ್ಧ ಬೇಡ ಎಂದ್ರು ಎಂದ ಟ್ರಂಪ್

**ವಾಷಿಂಗ್ಟನ್:** ಅಮೆರಿಕಾ ಅಧ್ಯಕ್ಷ ನಾನೇ ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲಾ ಯುದ್ಧಗಳನ್ನು ನಿಲ್ಲಿಸಿದ್ದು, ಎಂದು ಹೇಳಿಕೊಂಡು ಶಾಂತಿಯ ನಾಯಕ ಎಂದು ಹೇಳಿಕೊಳ್ಳುವ ಚಾಳಿಯನ್ನು ಇನ್ನು ಬಿಟ್ಟಂತಿಲ್ಲ. ಈಗಾಗಲೇ ಟ್ರಂಪ್ ನಾನು ಜಾಗತಿಕವಾಗಿ 8 ಯುದ್ಧಗಳನ್ನು ನಿಲ್ಲಿಸಿದ್ದೇನೆ ಅದರಲ್ಲಿ ಭಾರತ ಹಾಗೂ ಪಾಕಿಸ್ತಾನವೂ ಇದೆ ಎಂದು ಹಲವು ಬಾರಿ ಹೇಳಿಕೊಂಡಿದ್ದಾರೆ. ಅದಕ್ಕೆ ಪುಷ್ಟಿ ನೀಡಲೆಂದು ಪ್ರತಿಬಾರಿಯೂ ಹೊಸ ಅಂಶಗಳನ್ನು ಹೇಳಿಕೆಗೆ ಸೇರಿಸುತ್ತಿದ್ದಾರೆ. ಅದರಂತೆಯೇ ಈಗ ಸಹ ಮತ್ತೆ ನಾನೇ ಪಾಕ್‌- ಭಾರತದ ನಡುವಿನ ಯುದ್ಧ ನಿಲ್ಲಿಸಿದ್ದು ಎಂದು ಪುನರುಚ್ಚರಿಸಿದ್ದಾರೆ.

**ಯುದ್ಧ ನಿಲ್ಲಿಸಲು ಬೆದರಿಕೆ ಹಾಕಿದ್ದ 250% ಸುಂಕದ ಮಿತಿಯನ್ನು 350%ಕ್ಕೆ ಹೆಚ್ಚಿಸಿದ ಟ್ರಂಪ್:** ಆದರೆ ಮೋದಿಯವರೇ ನಾನು ಪಾಕಿಸ್ತಾನದೊಂದಿಗೆ ಯುದ್ಧಕ್ಕೆ ಹೋಗುವುದಿಲ್ಲ ಎಂದು ಫೋನ್ ಮಾಡಿ ಕೇಳಿಕೊಂಡಿದ್ದರು ಅಲ್ಲದೆ, ನಾನು ಯುದ್ಧ ನಿಲ್ಲಿಸಲು 2 ದೇಶಗಳ ಮೇಲೆ ಶೇ.350% ಸುಂಕ ವಿಧಿಸುವ ಬೆದರಿಕೆ ಹಾಕಿದ್ದೆ ಎಂದು ತಮ್ಮ ಹಿಂದಿನ ಹೇಳಿಕೆಯಲ್ಲಿ ಹೇಳಿದ್ದ 250% ಕ್ಕೆ ಹೆಚ್ಚುವರಿಯಾಗಿ ಸೇರಿಸಿದ್ದಾರೆ.

ಅಮೆರಿಕಾದ ಶ್ವೇತಭವನದಲ್ಲಿ ನಡೆದ ಅಮೆರಿಕ-ಸೌದಿ ಹೂಡಿಕೆ ವೇದಿಕೆಯಲ್ಲಿ ಮಾತನಾಡಿದ ಟ್ರಂಪ್ ಅವರು ತಮ್ಮನ್ನು ತಾವು ವಿವಾದಗಳನ್ನು ಬಗೆಹರಿಸುವಲ್ಲಿ ನಿಸ್ಸೀಮನೆಂದು ಹೇಳಿಕೊಂಡಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧದ ಕಾರ್ಮೋಡಗಳು ಕವಿದಿದ್ದಾಗ, ತಾನು ಮಧ್ಯಪ್ರವೇಶಿಸಿ, ಎರಡೂ ದೇಶಗಳು ಪರಮಾಣು ಅಸ್ತ್ರಗಳನ್ನು ಬಳಸುವುದನ್ನು ತಡೆದು, ಲಕ್ಷಾಂತರ ಜನರ ಜೀವ ಉಳಿಸಿದ್ದೇನೆ ಎಂದಿದ್ದಾರೆ. ಇನ್ನು, ನೀವು ಪರಸ್ಪರ ಹೊಡೆದಾಡಬಹುದು, ಆದರೆ ನಾನು ನಿಮ್ಮಿಬ್ಬರ ಮೇಲೂ ಶೇಕಡಾ 350% ರಷ್ಟು ಸುಂಕ ವಿಧಿಸುತ್ತೇನೆ. ಆಗ ಅಮೆರಿಕಾದೊಂದಿಗೆ ವ್ಯಾಪಾರ ಮಾಡುವುದು ನಿಮಗೆ ಕಷ್ಟವಾಗುತ್ತದೆ ಎಂದು ಬೆದರಿಕೆ ಹಾಕಿದ್ದೆ, ಆಗ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ತಮ್ಮ ಮೇಲೆ ಸುಂಕ ವಿಧಿಸದಂತೆ ಮನವಿ ಮಾಡಿದ್ದವು. ಆಗ ನಾನು ಯುದ್ಧ ನಿಲ್ಲಿಸಿ, ಅದನ್ನು ಬಿಟ್ಟು ನೀವು ಪರಮಾಣು ಅಸ್ತ್ರಗಳನ್ನು ಪರಸ್ಪರ ಹಾರಿಸಿಕೊಂಡು, ಲಕ್ಷಾಂತರ ಜನರನ್ನು ಕೊಲ್ಲುವುದನ್ನು ಮತ್ತು ಅಣು ಧೂಳು ಲಾಸ್ ಏಂಜಲೀಸ್ ಮೇಲೆ ತೇಲಿಕೊಂಡು ಬರುವುದನ್ನು ನಾನು ಸಹಿಸುವುದಿಲ್ಲ ಎಂದು ಯುದ್ದವಾದರೇ ಖಂಡಿತ ಸುಂಕ ಎದುರಿಸುತ್ತೀರಿ ಎಂದು ಬೆದರಿಕೆ ಹಾಕಿದ್ದೆ ಎಂದು ಹೇಳಿದ್ದಾರೆ. ಆದರೂ ಟ್ರಂಪ್ ಮಾತ್ರ ನಾನೇ ಯುದ್ದವನ್ನು ನಿಲ್ಲಿಸಿದ್ದು, ಹಾಗೂ ಮೋದಿಯವರೇ ನನಗೆ ಯುದ್ಧ ನಿಲ್ಲಿಸುವಂತೆ ಕರೆ ಮಾಡಿದ್ದರು ಹೇಳುವ ಮೂಲಕ ಪಾಕ್-ಭಾರತದ ನಡುವೆ ಪೆಹಲ್ಗಾಮ್ ದಾಳಿ ನಂತರ ಮೇ ತಿಂಗಳಿನಲ್ಲಿ ನಡೆದ ಸಂಘರ್ಷದ ಮಧ್ಯಸ್ಥಿಕೆ ವಹಿಸಿ ಲಕ್ಷಾಂತರ ಜನರ ಪ್ರಾಣವನ್ನು ಉಳಿಸದ್ದೇನೆ ಈಗಾಗಲೇ ಸುಮಾರು 60ಕ್ಕೂ ಹೆಚ್ಚ ಬಾರಿ ಪುನರುಚ್ಚರಿಸುವ ಮೂಲಕ ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ ಮಾಡುತ್ತಿರುವುದು ವಿಪರ್ಯಾಸವೇ ಸರಿ.

- ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧ ನಿಲ್ಲಿಸಿದ್ದ ನಾನೇ ಎಂದು ಪುನರುಚ್ಚರಿಸಿದ ಶಾಂತಿ ನಾಯಕ ಡೊನಾಲ್ಡ್ ಟ್ರಂಪ್.
- ಯುದ್ಧ ನಿಲ್ಲಿಸದಿದ್ದರೆ ಶೇ.350% ಸುಂಕ ಬೆದರಿಕೆ ಹಾಕಿದ್ದೆ, ಆಗ ಪಾಕಿಸ್ತಾನದೊಂದಿಗೆ ನಾವು ಯುದ್ಧಕ್ಕೆ ಹೋಗುವುದಿಲ್ಲ ಎಂದು ಪ್ರಧಾನಿ ಮೋದಿ ನನಗೆ ಕರೆ ಮಾಡಿದ್ದರು ಎಂದು ಬೊಗಳೆ ಬಿಟ್ಟ ಅಮೆರಿಕಾ ಅಧ್ಯಕ್ಷ.
- ಈಗಾಗಲೇ ಸ್ವತಃ ಪ್ರಧಾನಿ ನರೇಂದ್ರ ಮೋದಿಯವರೇ ನಾನು ಕರೆ ಮಾಡಿಲ್ಲ ಎಂದು ಟ್ರಂಪ್ ಹೇಳಿಕೆ ನಿರಾಕರಿಸದ್ದಾರೆ.

ಬೊಗಳೆ ಬಿಟ್ಟ ಅಮೆರಿಕಾ ಅಧ್ಯಕ್ಷ




**ಮೋದಿ ಕರೆ ಮಾಡಿ ಪಾಕ್‌ನೊಂದಿಗೆ ಯುದ್ಧಕ್ಕೆ ಹೋಗುವುದಿಲ್ಲ ಎಂದಿದ್ದರಂತೆ**

ಇದೇ ವೇಳೆ ಮುಂದುವರೆದು ಮಾತನಾಡಿದ ಟ್ರಂಪ್ ನನಗೆ ಪ್ರಧಾನಿ ಮೋದಿ ಅವರಿಂದ ಕರೆ ಬಂತು, ಅವರು ನಾವು ಮುಗಿಸಿದ್ದೇವೆ ಎಂದರು. ನಾನು ಯಾವುದನ್ನು ಮುಗಿಸಿದ್ದೀರಿ?' ಎಂದು ಕೇಳಿದೆ. ಆಗ ಅವರು, 'ನಾವು ಯುದ್ಧಕ್ಕೆ ಹೋಗುವುದಿಲ್ಲ' ಎಂದರು. ಆಗ ನಾನು ಅವರಿಗೆ ಒಳ್ಳೆಯದು ಒಪ್ಪಂದ ಮಾಡಿಕೊಳ್ಳೋಣ ಎಂದು ಹೇಳಿದ್ದೆ ಎಂದು ಹೇಳಿ ನಾನೇ ಎರಡು ಪರಮಾಣು ರಾಷ್ಟ್ರಗಳ ನಡುವಿನ ಸಂಭವನೀಯ ಯುದ್ದವನ್ನು ನಿಲ್ಲಿಸಿ ಲಕ್ಷಾಂತರ ಜನರ ಪ್ರಾಣವನ್ನು ಉಳಿಸಿದ್ದು ಎಂದು ಪುನರುಚ್ಚರಿಸಿದ್ದಾರೆ.

## ಬಾಂಗ್ಲಾದೇಶದಲ್ಲಿ ಭೂಕಂಪಕ್ಕೆ 6 ಮಂದಿ ಸಾವು

**ಢಾಕಾ:** ನೆರೆಯ ರಾಷ್ಟ್ರವಾದ ಬಾಂಗ್ಲಾದೇಶದಲ್ಲಿ ಶುಕ್ರವಾರ ಬೆಳಗ್ಗೆ 5.7 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, 6 ಮಂದಿ ಸಾವನ್ನಪ್ಪಿರುವುದಾಗಿ ವರದಿಗಳು ತಿಳಿಸಿವೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಮಾಹಿತಿಯ ಪ್ರಕಾರ, ರಿಕ್ಟರ್ ಮಾಪಕದಲ್ಲಿ 5.7 ತೀವ್ರತೆಯ ಭೂಕಂಪ ಸಂಭವಿಸಿದ್ದು, ಬಾಂಗ್ಲಾದೇಶದ ನರಸಿಂಗ್ಡಿ ಬಳಿ ಇದರ ಕೇಂದ್ರ ಬಿಂದು ಪತ್ತೆಯಾಗಿದೆ. ಭಾರತೀಯ ಕಾಲಮಾನದ ಪ್ರಕಾರ ಬೆಳಿಗ್ಗೆ 10:08ರ ಸುಮಾರಿಗೆ ಭೂಕಂಪ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದು ಢಾಕಾದಿಂದ ಆಗ್ನೇಯಕ್ಕೆ 10 ಕಿ.ಮೀ ದೂರದಲ್ಲಿ ಮತ್ತು ಭೂಮಿಯ 10 ಕಿ.ಮೀ ಆಳದಲ್ಲಿ ದಾಖಲಾಗಿದೆ.



ಭೂಕಂಪದ ತೀವ್ರತೆಗೆ ಕಟ್ಟಡದ ಮೇಲ್ಛಾವಣಿ ಹಾಗೂ ಗೋಡೆ ಕುಸಿದು ಮೂವರು ಸಾವನ್ನಪ್ಪಿದ್ದು, ಇನ್ನೂ ಮೂವರು ಕಟ್ಟಡದ ರೇಲಿಂಗ್ ಬಿದ್ದು ಮೃತಪಟ್ಟಿದ್ದಾರೆ ಎಂದು ಡಿಬಿಸಿ ಟೆಲಿವಿಷನ್ ವರದಿ ಮಾಡಿದೆ.ಕೇವಲ ಬಾಂಗ್ಲಾದಲ್ಲಿ ಮಾತ್ರವಲ್ಲದೇ ಈಶಾನ್ಯ ಭಾರತದ ರಾಜ್ಯಗಳಾದ ಮೇಘಾಲಯದ ಶಿಲ್ಲಾಂಗ್, ತ್ರಿಪುರಾ ಮತ್ತು ಮಿಜೋರಾಂನ ಐಜ್ವಾಲ್‌ನಲ್ಲೂ ಭೂಕಂಪದ ಅನುಭವವಾಗಿದೆ ಎಂದು ವರದಿಗಳು ತಿಳಿಸಿವೆ. ಕಂಪನದ ತೀವ್ರತೆಗೆ ಮನೆಯಲ್ಲಿನ ಫ್ಯಾನುಗಳು ಮತ್ತು ಗೋಡೆಗೆ ಹಾಕಿದ್ದ ವಸ್ತುಗಳು ಅಲುಗಾಡಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಭೂಕಂಪನವಾಗುತ್ತಿದ್ದಂತೆಯೇ ಕೋಲ್ಕತ್ತಾದಲ್ಲಿ ಜನ ತಮ್ಮ ಮನೆ ಮತ್ತು ಕಚೇರಿಗಳಿಂದ ಹೊರಬಂದು ರಸ್ತೆಯಲ್ಲಿ ಜಮಾಯಿಸಿದ್ದಾರೆ. ಅಲ್ಲದೇ ಭೂಕಂಪನದ ಅನುಭವವನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.


## 7 ಕಿ.ಮೀ ಉದ್ದ, 25 ಮೀಟರ್ ಆಳ, 80 ಕೊಠಡಿಗಳು
## ಹಮಾಸ್ ಸುರಂಗ ಪತ್ತೆ ಮಾಡಿದ ಇಸ್ರೇಲ್

**ಟೆಲ್ ಅವೀವ್:** ಇಸ್ರೇಲ್ ರಕ್ಷಣಾ ಪಡೆಗಳು ಗಾಜಾ ಪಟ್ಟಿಯಲ್ಲಿ ಒಂದು ಪ್ರಮುಖ ಹಮಾಸ್ ಸುರಂಗವನ್ನು ಪತ್ತೆಹಚ್ಚಿವೆ.

ಸುರಂಗದಲ್ಲಿ ಇತ್ತೀಚೆಗೆ ಭಯೋತ್ಪಾದಕ ಗುಂಪು ಲೆಫ್ಟಿನೆಂಟ್ ಹದರ್ ಗೋಲ್ಡಿನ್ ಅವರ ದೇಹವನ್ನು ಇಟ್ಟುಕೊಂಡಿತ್ತು. 2014 ರ ಇಸ್ರೇಲ್-ಹಮಾಸ್ ಯುದ್ಧದ ಸಮಯದಲ್ಲಿ ಗಾಜಾದಲ್ಲಿ ಹೊಂಚುದಾಳಿಯ ಸಮಯದಲ್ಲಿ ಲೆಫ್ಟಿನೆಂಟ್ ಗೋಲ್ಡಿನ್ ಹತ್ಯೆಗೀಡಾಗಿದ್ದರು. ಈ ತಿಂಗಳ ಆರಂಭದಲ್ಲಿ, ಇಸ್ರೇಲ್ ಅವರ ಅವಶೇಷಗಳನ್ನು ವಶಕ್ಕೆ ಪಡೆದಿದೆ.

ಐಡಿಎಫ್ ಗುರುವಾರ ಗೋಲ್ಡಿನ್ ಅವರ ದೇಹವನ್ನು ಇರಿಸಲಾಗಿದ್ದ ಸುರಂಗದ ವಿಡಿಯೋವನ್ನು ಹಂಚಿಕೊಂಡಿದೆ. ಸುರಂಗವು ಜನನಿಬಿಡ ರಫಾ ನೆರೆಹೊರೆಯ ಕೆಳಗೆ ಮತ್ತು ಯುನೈಟೆಡ್ ನೇಷನ್ಸ್ ಏಜೆನ್ಸಿ ಫಾರ್ ಪ್ಯಾಲೆಸ್ಟೀನಿಯನ್ ರೆಫ್ಯೂಜೀಸ್ ಕಾಂಪೌಂಡ್, ಮಸೀದಿಗಳು, ಚಿಕಿತ್ಸಾಲಯಗಳು ಮತ್ತು ಕಿಂಡರ್‌ಗಾರ್ಟನ್‌ಗಳ ಮೂಲಕ ಹಾದುಹೋಗುತ್ತದೆ ಎಂದು ಐಡಿಎಫ್ ತಿಳಿಸಿದೆ.






ಈ ಸುರಂಗವನ್ನು ಹಮಾಸ್ ಕಮಾಂಡರ್‌ಗಳು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು, ದಾಳಿಗಳನ್ನು ಯೋಜಿಸಲು ಮತ್ತು ವಾಸ್ತವ್ಯವನ್ನು ವಿಸ್ತರಿಸಲು ಬಳಸುತ್ತಿದ್ದರು. ಇದು ಏಳು ಕಿಲೋಮೀಟರ್‌ಗಳಿಗಿಂತ ಹೆಚ್ಚು ಉದ್ದ, 25 ಮೀಟರ್ ಆಳ ಮತ್ತು 80 ಕೊಠಡಿಗಳನ್ನು ಹೊಂದಿದೆ ಎಂದು ಐಡಿಎಫ್ ತಿಳಿಸಿದೆ. ಈ ಸುರಂಗವನ್ನು ಗಣ್ಯ ಯಹಲೋಮ್ ಯುದ್ಧ ಇಂಜಿನಿಯರಿಂಗ್ ಘಟಕ ಮತ್ತು ಶಾಯೆಟೆಟ್ 13 ನೌಕಾ ಕಮಾಂಡೋ ಘಟಕವು ಪತ್ತೆಹಚ್ಚಿದೆ.

## ವೈಫಲ್ಯಗಳ ನಡುವೆಯೂ ವಿಶ್ವಸಂಸ್ಥೆ ಅನಿವಾರ್ಯ: ಶಶಿ ತರೂರ್

**ಕೇಪ್ ಟೌನ್:** ಗಾಜಾ ಮತ್ತು ಉಕ್ರೇನ್‌ನ ವೈಫಲ್ಯಗಳ ನಡುವೆಯೂ ವಿಶ್ವಸಂಸ್ಥೆ ಅನಿವಾರ್ಯವಾಗಿದೆ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ, ತತ್ವಬದ್ಧ ಜಾಗತಿಕ ಸಹಕಾರದ ಅಗತ್ಯವಿರುವ ಜಗತ್ತಿನಲ್ಲಿ ಹೆಚ್ಚು ಪ್ರತಿನಿಧಿ ಮತ್ತು ಸ್ಪಂದಿಸುವುದು ವಿಶ್ವಸಂಸ್ಥೆಯ ಸವಾಲು ಎಂದು ಅವರು ಪ್ರತಿಪಾದಿಸಿದ್ದಾರೆ.



ಈ ಹಿಂದೆ ವಿಶ್ವಸಂಸ್ಥೆಯ ಅಧೀನ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ತರೂರ್ ಅವರು ವಿಶ್ವಸಂಸ್ಥೆಯನ್ನು ತ್ಯಜಿಸುವುದು ಸಾಮಾನ್ಯ ಮಾನವೀಯತೆಯ ಕಲ್ಪನೆಯನ್ನೇ ತ್ಯಜಿಸಿದಂತೆ ಎಂದು ಹೇಳಿದರು.


ನಿರಾಶ್ರಿತರನ್ನು ರಕ್ಷಿಸುವ ಅದರ ಪ್ರಯತ್ನಗಳಲ್ಲಿ ಮತ್ತು ಶಾಂತಿಯನ್ನು ನಿರ್ಮಿಸುವ ಅದರ ಹೋರಾಟಗಳಲ್ಲಿ ನಾನು ಭಾಗವಾಗಿದ್ದೇನೆ. ರುವಾಂಡಾದಲ್ಲಿ ವಿಶ್ವಸಂಸ್ಥೆ ವಿಫಲವಾಗುವುದನ್ನು, ಟಿಮೋರ್-ಲೆಸ್ಟೆ ಮತ್ತು ನಮೀಬಿಯಾದಲ್ಲಿ ಸಂದರ್ಭಕ್ಕೆ ತಕ್ಕಂತೆ ಎದ್ದು ನಿಲ್ಲುವುದನ್ನು ನಾನು ನೋಡಿದೆ. ಅದು ಅಧಿಕಾರಶಾಹಿ ಮತ್ತು ರಾಜಕೀಯದೊಂದಿಗೆ ಹೋರಾಡುವುದನ್ನು ನಾನು ನೋಡಿದೆ, ಆದರೆ ಹಸಿದವರಿಗೆ ಆಹಾರ ನೀಡುವ, ಸ್ಥಳಾಂತರಗೊಂಡವರಿಗೆ ಆಶ್ರಯ ನೀಡುವ ಮತ್ತು ಧ್ವನಿಯಿಲ್ಲದವರಿಗೆ ಧ್ವನಿ ನೀಡುವ ತನ್ನ ಧ್ಯೇಯದಲ್ಲಿ ನಿರಂತರವಾಗಿದೆ ಎಂದು ತರೂರ್ ಹೇಳಿದರು.

ಇಂದು, ಗಾಜಾ ಮತ್ತು ಉಕ್ರೇನ್‌ನಲ್ಲಿನ ಅದರ ವೈಫಲ್ಯಗಳನ್ನು ಜನರು ಖಂಡಿಸಿದಾಗ, ವಿಶ್ವಸಂಸ್ಥೆಯು ಪರಿಪೂರ್ಣವಾಗಿಲ್ಲ ಅಥವಾ ಅದು ಎಂದಿಗೂ ಪರಿಪೂರ್ಣವಾಗಲು ಉದ್ದೇಶಿಸಿರಲಿಲ್ಲ, ಆದರೂ ಅದು ಅನಿವಾರ್ಯವಾಗಿಯೇ ಉಳಿದಿದೆ ಎಂದು ನಾನು ಮತ್ತೊಮ್ಮೆ ಒಪ್ಪಿಕೊಳ್ಳುತ್ತೇನೆ ಎಂದು ಅವರು ಹೇಳಿದರು.

> ನಾವು ವಿಶ್ವಸಂಸ್ಥೆಗೆ ನಮ್ಮನ್ನು ಮತ್ತೆ ಬದ್ಧಗೊಳಿಸಿಕೊಳ್ಳಬೇಕು.
> 1978-2007ರವರೆಗೆ ಮೂರು ದಶಕಗಳ ಕಾಲ ವಿಶ್ವಸಂಸ್ಥೆಗೆ ಸೇವೆ ಸಲ್ಲಿಸಿದ ವ್ಯಕ್ತಿಯಾಗಿ, ಶೀತಲ ಸಮರದ ಯುದ್ಧಭೂಮಿಯಿಂದ ಜಾಗತಿಕ ಸಹಕಾರದ ಶೀತಲ ಸಮರದ ನಂತರದ ಪ್ರಯೋಗಾಲಯವಾಗಿ ಅದು ವಿಕಸನಗೊಂಡಿರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದೆ ಎಂದು ತಿರುವನಂತಪುರಂ ಸಂಸದರು ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ನಲ್ಲಿ 15 ನೇ ಡೆಸ್ಮಂಡ್ ಟುಟು ಅಂತರರಾಷ್ಟ್ರೀಯ ಶಾಂತಿ ಉಪನ್ಯಾಸ ನೀಡುತ್ತಾ ಹೇಳಿದರು.
> -ಶಶಿ ತರೂರ್, ಕಾಂಗ್ರೆಸ್ ಸಂಸದ

## ಕಲ್ಲಿದ್ದಲು ಮಾಫಿಯಾ; ಬಂಗಾಳ, ಜಾರ್ಖಂಡ್‌ನ 42 ಸ್ಥಳಗಳಲ್ಲಿ ಇ.ಡಿ ದಾಳಿ: ಭಾರೀ ಪ್ರಮಾಣದ ಚಿನ್ನ ಪತ್ತೆ

**ರಾಂಚಿ:** ಕಲ್ಲಿದ್ದಲು ಮಾಫಿಯಾ ವಿರುದ್ಧ ಹಣ ವರ್ಗಾವಣೆ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ ಶುಕ್ರವಾರ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ 42 ಸ್ಥಳಗಳ ಮೇಲೆ ದಾಳಿ ನಡೆಸಿದೆ. ದಾಳಿ ವೇಳೆ ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಪತ್ತೆಯಾಗಿದೆ.



ಬೆಳಿಗ್ಗೆ 6 ಗಂಟೆ ಸುಮಾರಿಗೆ ನಡೆದ ದಾಳಿಯಲ್ಲಿ ಫೆಡರಲ್ ತನಿಖಾ ಸಂಸ್ಥೆಯ ಸುಮಾರು 100 ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು. ದೊಡ್ಡ ಪ್ರಮಾಣದ ಕಲ್ಲಿದ್ದಲು ಮಾಫಿಯಾ ನಡೆದಿದ್ದು, ಇದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಜಾರ್ಖಂಡ್‌ನಲ್ಲಿ ಇಡಿ 18 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ದುರ್ಗಾಪುರ, ಪುರುಲಿಯಾ, ಹೌರಾ ಮತ್ತು ಕೋಲ್ಕತ್ತಾದಾದ್ಯಂತ 24 ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ. ದಾಳಿ ವೇಳೆ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಕೆಲವು ಡಿಜಿಟಲ್ ದಾಖಲೆಗಳನ್ನು ಇಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಅನಿಲ್ ಗೋಯಲ್, ಸಂಜಯ್ ಉದ್ಯೋಗ್, ಎಲ್‌ಬಿ ಸಿಂಗ್ ಮತ್ತು ಅಮರ್ ಮಂಡಲ್‌ಗೆ ಸಂಬಂಧಿಸಿದ ಪ್ರಕರಣಗಳೂ ಸೇರಿದ್ದು, ನರೇಂದ್ರ ಖಾರ್ಕಾ, ಅನಿಲ್ ಗೋಯಲ್, ಯುಧಿಷ್ಠೀರ್ ಘೋಷ್, ಕೃಷ್ಣ ಮುರಾರಿ ಕಾಯಲ್ ಮತ್ತು ಇತರರಿಗೆ ಸಂಬಂಧಿಸಿದ ಕಚೇರಿಗಳಲ್ಲೂ ಶೋಧ ಕಾರ್ಯಾಚರಣೆ ನಡೆಸುತ್ತಿದೆ.

## ಇಸ್ರೇಲ್-ಭಾರತದ ನಡುವಿನ ಹೂಡಿಕೆಗೆ ಎಫ್‌ಟಿಎ ಸಹಾಯ: ಬರ್ಕತ್


**ಟೆಲ್‌ಅವಿವ್:** ಇಸ್ರೇಲ್ ಮತ್ತು ಭಾರತದ ನಡುವಿನ ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಎರಡೂ ದೇಶಗಳಲ್ಲಿನ ಕೈಗಾರಿಕೆಗಳಿಗೆ ಗಮನಾರ್ಹ ವ್ಯಾಪಾರ ಅವಕಾಶಗಳನ್ನು ತೆರೆಯುತ್ತದೆ ಮತ್ತು ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಹರಿವನ್ನು ಹೆಚ್ಚಿಸುತ್ತದೆ ಎಂದು ಇಸ್ರೇಲ್ ಆರ್ಥಿಕತೆ ಮತ್ತು ಕೈಗಾರಿಕಾ ಸಚಿವ ನಿರ್ ಬರ್ಕತ್ ಹೇಳಿದರು. ಒಪ್ಪಂದಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಲು ಎರಡೂ ದೇಶಗಳು ನಿನ್ನೆ ತಮ್ಮ ಉಲ್ಲೇಖಗಳ ನಿಯಮಗಳಿಗೆ (ಟಿಒಆರ್) ಸಹಿ ಹಾಕಿವೆ ಎಂದು ಅವರು ಹೇಳಿದರು.

ಎಫ್‌ಟಿಎ ಮಾತುಕತೆಗಳಲ್ಲಿ ಸೂಕ್ಷ್ಮ ಕ್ಷೇತ್ರಗಳನ್ನು ಸೇರಿಸದಿರಲು ಎರಡೂ ದೇಶಗಳು ನಿರ್ಧರಿಸಿವೆ ಎಂದು ಬರ್ಕತ್ ಹೇಳಿದರು. ಎರಡೂ ದೇಶಗಳ ನಡುವಿನ ವ್ಯಾಪಾರ ಮತ್ತು ಹೂಡಿಕೆಗಳನ್ನು ಹೆಚ್ಚಿಸಲು ದೊಡ್ಡ ಅವಕಾಶಗಳಿವೆ. ನಾವು ವ್ಯವಹಾರದಲ್ಲಿ ಭಾರಿ ಬೆಳವಣಿಗೆಯನ್ನು ನೋಡಲಿದ್ದೇವೆ ಎಂದು ಬರ್ಕತ್ ಪಿಟಿಐಗೆ ತಿಳಿಸಿದರು. ಇಸ್ರೇಲಿ ಕಂಪನಿಗಳು ಭಾರತದಲ್ಲಿ ಅಂಗಸಂಸ್ಥೆಗಳನ್ನು ತೆರೆಯಲು ಆಸಕ್ತಿ ಹೊಂದಿವೆ, ಇದು ಅವರಿಗೆ ಏಷ್ಯಾಕ್ಕೆ ಹೆಬ್ಬಾಗಿಲಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅವರು ಹೇಳಿದರು. ಭಾರತದಲ್ಲಿ ದೊಡ್ಡ ಅವಕಾಶಗಳಿವೆ ಎಂದು ಜನರು ಈಗ ಅರ್ಥಮಾಡಿಕೊಂಡಿದ್ದಾರೆ ಏಕೆಂದರೆ ಭಾರತದ ನಾಳೆ ನಿನ್ನೆಯ ಭಾರತವಲ್ಲ ಎಂದು ಅವರು ಹೇಳಿದರು, ಭಾರತವು ಚೀನಾದೊಂದಿಗೆ ಸ್ಪರ್ಧಿಸಲು ಉತ್ತಮ ಸ್ಥಾನದಲ್ಲಿದೆ ಎಂದು ಹೇಳಿದರು. ಎಫ್‌ಟಿಎಗಳ ಅಂಶಗಳಲ್ಲಿ ಸುಂಕ ಮತ್ತು ಸುಂಕೇತರ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಸರಕುಗಳಿಗೆ ಮಾರುಕಟ್ಟೆ ಪ್ರವೇಶ, ಹೂಡಿಕೆ ಸೌಲಭ್ಯ, ಕಸ್ಟಮ್ಸ್ ಕಾರ್ಯವಿಧಾನಗಳ ಸರಳೀಕರಣ, ನಾವೀನ್ಯತೆ ಮತ್ತು ತಂತ್ರಜ್ಞಾನ ವರ್ಗಾವಣೆಗೆ ಸಹಕಾರವನ್ನು ಹೆಚ್ಚಿಸುವುದು ಮತ್ತು ಸೇವೆಗಳಲ್ಲಿ ವ್ಯಾಪಾರವನ್ನು ಉತ್ತೇಜಿಸಲು ಮಾನದಂಡಗಳನ್ನು ಸಡಿಲಿಸುವುದು ಸೇರಿವೆ. ಭಾರತ ಮತ್ತು ಇಸ್ರೇಲ್ ಮೇ 2010 ರಿಂದ ಇದೇ ರೀತಿಯ ಒಪ್ಪಂದದ ಕುರಿತು ಮಾತುಕತೆ ನಡೆಸುತ್ತಿದ್ದವು. ಎಂಟು ಸುತ್ತುಗಳು ನಡೆದವು, ಆದರೆ ನಂತರ ಮಾತುಕತೆಗಳು ಸ್ಥಗಿತಗೊಂಡವು. ಕೊನೆಯ ಸುತ್ತಿನ ಮಾತುಕತೆ ಅಕ್ಟೋಬರ್ 2021 ರಲ್ಲಿ ನಡೆಯಿತು. 2024-25 ರ ಅವಧಿಯಲ್ಲಿ, ಇಸ್ರೇಲ್‌ಗೆ ಭಾರತದ ರಫ್ತು 2023-24 ರಲ್ಲಿ 4.52 ಬಿಲಿಯನ್‌ನಿಂದ 52 ಪ್ರತಿಶತ ಕುಸಿದು 2.14 ಬಿಲಿಯನ್‌ಗೆ ತಲುಪಿತು. ಆಮದುಗಳು ಸಹ ಕಳೆದ ಹಣಕಾಸು ವರ್ಷದಲ್ಲಿ ಶೇಕಡಾ 26.2 ರಷ್ಟು ಕುಸಿದು 1.48 ಬಿಲಿಯನ್‌ಗೆ ತಲುಪಿತು. ದ್ವಿಪಕ್ಷೀಯ ವ್ಯಾಪಾರವು 3.62 ಬಿಲಿಯನ್‌ನಷ್ಟಿತ್ತು. ಭಾರತದಿಂದ ಇಸ್ರೇಲ್‌ಗೆ ರಫ್ತಿನ ಪ್ರಮುಖ ವಸ್ತುಗಳೆಂದರೆ ಮುತ್ತುಗಳು ಮತ್ತು ಅಮೂಲ್ಯ ಕಲ್ಲುಗಳು, ಆಟೋಮೋಟಿವ್ ಡೀಸೆಲ್, ರಾಸಾಯನಿಕ ಮತ್ತು ಖನಿಜ ಉತ್ಪನ್ನಗಳು, ಯಂತ್ರೋಪಕರಣಗಳು ಮತ್ತು ವಿದ್ಯುತ್ ಉಪಕರಣಗಳು, ಪ್ಲಾಸ್ಟಿಕ್‌ಗಳು, ಜವಳಿ, ಉಡುಪುಗಳು, ಮೂಲ ಲೋಹಗಳು ಮತ್ತು ಸಾರಿಗೆ ಉಪಕರಣಗಳು ಮತ್ತು ಕೃಷಿ ಉತ್ಪನ್ನಗಳು.

ಆಮದುಗಳಲ್ಲಿ ಮುತ್ತುಗಳು ಮತ್ತು ಅಮೂಲ್ಯ ಕಲ್ಲುಗಳು, ರಾಸಾಯನಿಕ ಮತ್ತು ಖನಿಜ, ರಸಗೊಬ್ಬರ ಉತ್ಪನ್ನಗಳು, ಯಂತ್ರೋಪಕರಣಗಳು ಮತ್ತು ವಿದ್ಯುತ್ ಉಪಕರಣಗಳು, ಪೆಟ್ರೋಲಿಯಂ ತೈಲಗಳು, ರಕ್ಷಣಾ, ಯಂತ್ರೋಪಕರಣಗಳು ಮತ್ತು ಸಾರಿಗೆ ಉಪಕರಣಗಳು ಸೇರಿವೆ.

**ವ್ಯಾಪಾರದಲ್ಲಿ ಹೆಚ್ಚಳ**

ಭಾರತವು ಏಷ್ಯಾದಲ್ಲಿ ಇಸ್ರೇಲ್‌ನ ಎರಡನೇ ಅತಿದೊಡ್ಡ ವ್ಯಾಪಾರ ಪಾಲುದಾರ. ದ್ವಿಪಕ್ಷೀಯ ಸರಕು ವ್ಯಾಪಾರವು ಮುಖ್ಯವಾಗಿ ವಜ್ರಗಳು, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ರಾಸಾಯನಿಕಗಳಿಂದ ಪ್ರಾಬಲ್ಯ ಹೊಂದಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಎಲೆಕ್ಟ್ರಾನಿಕ್ ಯಂತ್ರೋಪಕರಣಗಳು ಮತ್ತು ಹೈಟೆಕ್ ಉತ್ಪನ್ನಗಳು, ಸಂವಹನ ವ್ಯವಸ್ಥೆಗಳು ಮತ್ತು ವೈದ್ಯಕೀಯ ಉಪಕರಣಗಳಂತಹ ಕ್ಷೇತ್ರಗಳಲ್ಲಿ ವ್ಯಾಪಾರದಲ್ಲಿ ಹೆಚ್ಚಳ ಕಂಡುಬಂದಿದೆ.



## ಮಿನಿ ನ್ಯೂಸ್

### ವಿಯೆಟ್ನಾಂನಲ್ಲಿ ಭಾರೀ ಮಳೆಗೆ ಪ್ರವಾಹ, ಭೂಕುಸಿತ; 41 ಮಂದಿ ಸಾವು

**ಹನೋಯ್:** ವಿಯೆಟ್ನಾಂನಲ್ಲಿ ಧಾರಾಕಾರ ಮಳೆಯಿಂದ ಉಂಟಾದ ಪ್ರವಾಹ ಮತ್ತು ಭೂಕುಸಿತಗಳಲ್ಲಿ 41 ಜನರು ಸಾವನ್ನಪ್ಪಿದ್ದಾರೆ.

ಕಳೆದ ಮೂರು ದಿನಗಳಲ್ಲಿ ಮಧ್ಯ ವಿಯೆಟ್ನಾಂನ ಹಲವಾರು ಭಾಗಗಳಲ್ಲಿ 150 ಸೆಂ.ಮೀ (60 ಇಂಚು) ಗಿಂತ ಹೆಚ್ಚಿನ ಮಳೆಯಾಗಿದೆ. ಇದು ಪ್ರಮುಖ ಕಾಫಿ ಉತ್ಪಾದನಾ ವಲಯ ಮತ್ತು ದೇಶದ ಅತ್ಯಂತ ಜನಪ್ರಿಯ ಕಡಲತೀರಗಳಿಗೆ ನೆಲೆಯಾಗಿದೆ. ಇಲ್ಲಿ ವರೆಗೆ ಆರು ಪ್ರಾಂತ್ಯಗಳಲ್ಲಿ ಕನಿಷ್ಠ 41 ಜನರು ಸಾವನ್ನಪ್ಪಿದ್ದಾರೆ. 52,000 ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಸುಮಾರು 62,000 ಜನರನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಆದರೆ, ಭೂಕುಸಿತಗಳಿಂದಾಗಿ ಹಲವಾರು ಪ್ರಮುಖ ರಸ್ತೆಗಳು ಮುಚ್ಚಿಹೋಗಿವೆ.

10 ಲಕ್ಷಕ್ಕೂ ಹೆಚ್ಚು ಮಂದಿ ವಿದ್ಯುತ್ ಸಂಪರ್ಕ ಕಡಿತದ ಸಮಸ್ಯೆ ಎದುರಿಸುತ್ತಿದ್ದಾರೆ. ಲ್ಯಾಮ್ ಡಾಂಗ್ ಪ್ರಾಂತ್ಯದ ಡಾ. ನಿಮ್ ನದಿಯ ಮೇಲಿನ ತೂಗು ಸೇತುವೆ ಬೆಳಗ್ಗೆ ಕೊಚ್ಚಿ ಹೋಗಿದೆ ಎಂದು ವಿಯೆಟ್ನಾಂನೆಟ್ ಪತ್ರಿಕೆ ವರದಿ ಮಾಡಿದೆ. ನಗರದಲ್ಲಿ ನೆಲ ಅಂತಸ್ತಿನ ರೆಸ್ಟೋರೆಂಟ್‌ಗಳು ಮತ್ತು ಅಂಗಡಿಗಳು ಸುಮಾರು ಒಂದು ಮೀಟರ್ ನೀರಿನಲ್ಲಿ ಮುಳುಗಿವೆ.

### ಮೆಕ್ಸಿಕೋದ ಫಾತಿಮಾ ಬಾಷ್‌ಗೆ ವಿಶ್ವಸುಂದರಿ ಕಿರೀಟ

**ಥೈಲ್ಯಾಂಡ್:** ಮೆಕ್ಸಿಕೋದ ಫಾತಿಮಾ ಬಾಷ್ ಅವರು 2025ನೇ ಸಾಲಿನ ವಿಶ್ವ ಸುಂದರಿ ಕಿರೀಟವನ್ನು ಧರಿಸಿದ್ದಾರೆ. ಮಿಸ್ ಥೈಲ್ಯಾಂಡ್ ಮೊದಲ ರನ್ನರ್ ಅಪ್ ಆಗಿ ಮತ್ತು ಮಿಸ್ ವೆನೆಜುವೆಲಾ ಎರಡನೇ ರನ್ನರ್ ಅಪ್ ಆಗಿ ಹೊರಹೊಮ್ಮಿದರು. ಮಿಸ್ ಫಿಲಿಪ್ಪೈನ್ಸ್ ಮತ್ತು ಮಿಸ್ ಕೋಟ್ ಡಿ ಐವರಿ ಕ್ರಮವಾಗಿ ನಾಲ್ಕನೇ ಮತ್ತು ಐದನೇ ಸ್ಥಾನ ಪಡೆದರು.

ಮಿಸ್ ಯೂನಿವರ್ಸ್ 2025 ರ ಕೊನೆಯ ಸುತ್ತಿನಲ್ಲಿ 12 ಸ್ಪರ್ಧಿಗಳಿದ್ದರು. ಗ್ವಾಡೆಲೋಪ್, ಕೊಲಂಬಿಯಾ, ಕ್ಯೂಬಾ, ಮಾಲ್ಟಾ, ಕೋಟೆಡ್ ಐವೊಯಿರ್, ಮೆಕ್ಸಿಕೊ, ಪೋರ್ಟೊ ರಿಕೊ, ಚಿಲಿ, ಥೈಲ್ಯಾಂಡ್, ಫಿಲಿಪೈನ್ಸ್, ಚೀನಾ ಮತ್ತು ವೆನೆಜುವೆಲಾದ ಸುಂದರಿಯರು ಕಿರೀಟಕ್ಕಾಗಿ ಪೈಪೋಟಿ ನಡೆಸಿದ್ದರು. ಮೆಕ್ಸಿಕೊ, ಥೈಲ್ಯಾಂಡ್, ಕೋಟ್ ಡಿ ಐವರಿ, ಫಿಲಿಪೈನ್ಸ್ ಮತ್ತು ವೆನೆಜುವೆಲಾ ಸ್ಪರ್ಧಿಗಳು ಟಾಪ್ 5ರಲ್ಲಿ ಸ್ಥಾನ ಪಡೆದುಕೊಂಡರು. ತೀರ್ಪುಗಾರರಲ್ಲಿ ಭಾರತದ ಬ್ಯಾಡ್ಮಿಂಟನ್ ದಂತಕಥೆ ಸೈನಾ ನೆಹ್ವಾಲ್ ಇದ್ದರು.

### ಅಂಟು ತಯಾರಿಸುವ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟ 15 ಕಾರ್ಮಿಕರು ಸಾವು

**ಇಸ್ಲಾಮಾಬಾದ್:** ಅಂಟು ತಯಾರಿಸುವ ಕಾರ್ಖಾನೆಯೊಂದರ ಬಾಯ್ಲರ್ ಸ್ಫೋಟಗೊಂಡ ಪರಿಣಾಮ ಕನಿಷ್ಠ 15 ಕಾರ್ಮಿಕರು ಸಾವನ್ನಪ್ಪಿದ್ದು, ಏಳು ಮಂದಿ ಗಾಯಗೊಂಡಿರುವ ಘಟನೆ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಫೈಸಲಾಬಾದ್‌ನಲ್ಲಿ ನಡೆದಿದೆ.

ಘಟನೆ ಬಳಿಕ ಪೊಲೀಸರು ಕಾರ್ಖಾನೆ ವ್ಯವಸ್ಥಾಪಕರನ್ನು ಬಂಧಿಸಿದ್ದಾರೆ. ಸ್ಫೋಟದ ಬಳಿಕ ಕಾರ್ಖಾನೆ ಮಾಲೀಕ ತಲೆಮರೆಸಿಕೊಂಡಿದ್ದು, ಪೊಲೀಸರು ಆತನ ಪತ್ತೆಗೆ ಬಲೆಬೀಸಿದ್ದಾರೆ. ಸ್ಫೋಟದ ತೀವ್ರತೆಗೆ ಕಾರ್ಖಾನೆ ಕಟ್ಟಡ ಮತ್ತು ಹತ್ತಿರದ ಮನೆಗಳಿಗೆ ತೀವ್ರ ಹಾನಿಯುಂಟಾಗಿದೆ. ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ ಎಂದು ಸ್ಥಳೀಯ ಆಡಳಿತಾಧಿಕಾರಿ ರಾಜಾ ಜಹಾಂಗೀರ್ ಹೇಳಿದ್ದಾರೆ. ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಸ್ಥಳೀಯ ಪೊಲೀಸ್ ಅಧಿಕಾರಿ ಮೊಹಮ್ಮದ್ ಅಸ್ಲಾಂ ಹೇಳಿದ್ದಾರೆ.

### ಉದಯನಿಧಿ ಸ್ಟಾಲಿನ್ ಮತ್ತೆ ವಿವಾದ

**ಚೆನ್ನೈ:** ಕಳೆದ ವರ್ಷ ಸನಾತನ ಧರ್ಮ ಡೆಂಗ್ಯೂ, ಮಲೇರಿಯಾ ಇದ್ದಂತೆ ಎನ್ನುವ ಮೂಲಕ ಭಾರೀ ವಿವಾದ ಸೃಷ್ಟಿಸಿದ್ದ ತಮಿಳುನಾಡು ಡಿಸಿಎಂ ಉದಯನಿಧಿ ಸ್ಟಾಲಿನ್ ಇದೀಗ ತಮ್ಮ ಹೇಳಿಕೆಯಿಂದಲೇ ಮತ್ತೊಂದು ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಸಂಸ್ಕೃತ ಸತ್ತ ಭಾಷೆ ಅಂತ ಕರೆದಿದ್ದಾರೆ.

ಚೆನ್ನೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ, ಕೇಂದ್ರ ಸರ್ಕಾರ ಕಳೆದ 10 ವರ್ಷಗಳಲ್ಲಿ ಸಂಸ್ಕೃತಕ್ಕೆ 2,400 ಕೋಟಿ ರೂ. ಅನುದಾನ ಮೀಸಲಿಟ್ಟಿದೆ. ಆದ್ರೆ ತಮಿಳಿಗೆ 150 ಕೋಟಿ ರೂ. ಮಾತ್ರ ಮೀಸಲಿಟ್ಟಿದೆ. ಸಂಸ್ಕೃತವನ್ನ ಉತ್ತೇಜಿಸುತ್ತಾ ತಮಿಳು ಭಾಷೆಯನ್ನ ಕೇಂದ್ರವು ಕಡೆಗಣಿಸಿದೆ ಎಂದು ಹೇಳಿದ್ದಾರೆ. ಅಲ್ಲದೇ ಮಕ್ಕಳು ತಮಿಳು ಕಲಿಯಲು ಉತ್ಸುಕವಾಗಿದ್ದರೆ, ಹಿಂದಿ ಮತ್ತು ಸಂಸ್ಕೃತವನ್ನ ಕಲಿಯುವಂತೆ ಏಕೆ ಒತ್ತಡ ಹೇರುತ್ತಿದ್ದೀರಿ ಎಂದು ಪ್ರಧಾನಿ ಮೋದಿ ಅವರನ್ನ ನೇರವಾಗಿ ಪ್ರಶ್ನೆ ಮಾಡಿದ್ದಾರೆ. ಉದಯನಿಧಿ ಸ್ಟಾಲಿನ್ ಹೇಳಿಕೆ ಬಳಿಕ ರಾಜಕೀಯ ವಲಯದಲ್ಲೂ ಬಿರುಗಾಳಿ ಎದ್ದಿದೆ. ಬಿಜೆಪಿ ನಾಯಕರು ತೀವ್ರ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ನಾಯಕಿ ಮತ್ತು ತೆಲಂಗಾಣದ ಮಾಜಿ ರಾಜ್ಯಪಾಲ ತಮಿಳಿಸೈ ಸೌಂದರರಾಜನ್ ಪ್ರತಿಕ್ರಿಯಿಸಿ, ತಮಿಳು ಸಂಸ್ಕೃತಿಯು ಇತರ ಭಾಷೆಗಳನ್ನ ಕೀಳಾಗಿ ನೋಡುವುದನ್ನ ಒಪ್ಪುವುದಿಲ್ಲ. ನಾವು ನಮ್ಮ ಸ್ವಂತ ಭಾಷೆಯನ್ನ ಪ್ರೀತಿಸಬೇಕು, ಇತರ ಭಾಷೆಗಳನ್ನ ಗೌರವಿಸಬೇಕು ಎಂದು ತಿರುಗೇಟು ನೀಡಿದರು.

# ಚುನಾವಣೆಯಲ್ಲಿ ಹಣ ಹಂಚಿಕೆಯಿಂದ ಕಲ್ಯಾಣವು ಸಂಭವಿಸುವುದಿಲ್ಲ


### ಕರ್ನಾಟಕ, ಬಿಹಾರ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ವಾಸಿಸುವ ಜನರ ಆರ್ಥಿಕ ಬಲದಲ್ಲಿ ವ್ಯತ್ಯಾಸವಿದೆ

**ನವದೆಹಲಿ:** ಸಂವಿಧಾನದ ಆದೇಶವನ್ನು ಪೂರೈಸಲು ಎಲ್ಲಾ ರಾಜ್ಯಗಳ ಆರ್ಥಿಕ ಸಮಾನತೆ ಮತ್ತು ಸಮಾನ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ ಎಂದಿರುವ ಹಿರಿಯ ಬಿಜೆಪಿ ನಾಯಕ ಮುರಳಿ ಮನೋಹರ್ ಜೋಶಿ ಅವರು ಚುನಾವಣೆಯಲ್ಲಿ ಹಣ ಹಂಚಿಕೆಯಿಂದ ಕಲ್ಯಾಣವು ಸಂಭವಿಸುವುದಿಲ್ಲ ಎಂದು ಹೇಳಿದ್ದಾರೆ.

ಭಾರತದ ಮಾಜಿ ಚುನಾವಣಾ ಆಯೋಗ ಮತ್ತು ಮಾಜಿ ಕಾನೂನು ಕಾರ್ಯದರ್ಶಿ ಜಿ.ವಿ.ಜಿ. ಕೃಷ್ಣಮೂರ್ತಿ ಅವರ 91 ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಜೋಶಿ, ತಾರತಮ್ಯವನ್ನು ಕೊನೆಗೊಳಿಸಲು, ಪ್ರತಿಯೊಂದರಲ್ಲೂ ಸಮಾನ ಸಂಖ್ಯೆಯ ಕ್ಷೇತ್ರಗಳು ಮತ್ತು ಬಹುತೇಕ ಸಮಾನ ಜನಸಂಖ್ಯೆಯನ್ನು ಹೊಂದಿರುವ ಅಸ್ತಿತ್ವದಲ್ಲಿರುವ ರಾಜ್ಯಗಳಿಂದ ಸಣ್ಣ ರಾಜ್ಯಗಳನ್ನು ರಚಿಸಬೇಕು ಎಂದು ಸಲಹೆ ನೀಡಿದರು.

**ಒಂದೇ ರೀತಿಯ ಆರ್ಥಿಕ ಬಲವಿದೆಯೇ?**

ಪ್ರತಿಯೊಬ್ಬ ನಾಗರಿಕರಿಗೂ ಮತದಾನದ ಸಮಾನ ಹಕ್ಕಿದೆ, ಆದರೆ ಕರ್ನಾಟಕ, ಬಿಹಾರ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ವಾಸಿಸುವ ಜನರ ಆರ್ಥಿಕ ಬಲದಲ್ಲಿ ಭಾರಿ ವ್ಯತ್ಯಾಸವಿದೆ ಎಂದು ಮಾಜಿ ಕೇಂದ್ರ ಸಚಿವರು ಹೇಳಿದರು. ಕರ್ನಾಟಕದಲ್ಲಿ, ಒಬ್ಬ ವ್ಯಕ್ತಿಯ ಆರ್ಥಿಕ ಬಲ ಏನು? ಅವನು ನಿರ್ದಿಷ್ಟ ಆರ್ಥಿಕ ಬಲದೊಂದಿಗೆ ಮತ ಚಲಾಯಿಸುತ್ತಾನೆ ಮತ್ತು ನಂತರ ಮರುಭೂಮಿ, ಬೆಟ್ಟಗಳು ಅಥವಾ ಈಶಾನ್ಯದಲ್ಲಿ ವಾಸಿಸುವ ವ್ಯಕ್ತಿಯ ಆರ್ಥಿಕ ಬಲ ಏನು. ಅವನಿಗೆ ಒಂದೇ ರೀತಿಯ ಆರ್ಥಿಕ ಬಲವಿದೆಯೇ? ಅವನಿಗೆ ಇಲ್ಲ, ಎಂದು ಅವರು ಹೇಳಿದರು.



ಸಂವಿಧಾನವು ನ್ಯಾಯದ ಹಕ್ಕನ್ನು ಆರ್ಥಿಕ ಮತ್ತು ರಾಜಕೀಯ ಎಂದು ಜೋಶಿ ಹೇಳಿದರು.ಮತ್ತು ರಾಜಕೀಯ ಹಕ್ಕಿಗಾಗಿ, ನಿಮಗೆ ಮತದಾನದ ಹಕ್ಕನ್ನು ನೀಡಲಾಗಿದೆ. ಆದರೆ ನನಗೆ ಆರ್ಥಿಕ ನ್ಯಾಯ ಸಿಗದ ಹೊರತು ಈ ಮತದಾನದ ಹಕ್ಕನ್ನು ಚಲಾಯಿಸಲು ಸಾಧ್ಯವಿಲ್ಲ. ಅಂಬೇಡ್ಕರ್ ಕೂಡ ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ ಎಂದು ಅವರು ಹೇಳಿದರು.

ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ಸಮಾನವಾಗಿ ವಿತರಿಸುವ ಮತ್ತು ಅಭಿವೃದ್ಧಿಯಲ್ಲಿ ಸಮಾನತೆ ಇರುವ ಕೆಲವು ಕಾರ್ಯವಿಧಾನವನ್ನು ಕಂಡುಹಿಡಿಯುವ ಅವಶ್ಯಕತೆಯಿದೆ ಎಂದು ಅವರು ಹೇಳಿದರು.ಇದು ಸಂಭವಿಸದಿದ್ದರೆ, ಪ್ರಜಾಪ್ರಭುತ್ವಕ್ಕೆ ಎಲ್ಲಾ ಬದ್ಧತೆಗಳು, ಕಲ್ಯಾಣಕ್ಕೆ ಎಲ್ಲಾ ಬದ್ಧತೆಗಳೊಂದಿಗೆ, ನಾವು ನಿಜವಾದ ಪ್ರಜಾಪ್ರಭುತ್ವವಾದಿಯಾಗಲು ಹೋಗುವುದಿಲ್ಲ. ನಾವು ಜನರಿಗೆ ಸೇವೆ ಸಲ್ಲಿಸಲು ಹೋಗುವುದಿಲ್ಲ ಎಂದು ಅವರು ಹೇಳಿದರು.

ಆರ್ಥಿಕ ಸ್ಥಿತಿ ಮತ್ತು ಅಭಿವೃದ್ಧಿಯಲ್ಲಿನ ವ್ಯತ್ಯಾಸವು ತಾರತಮ್ಯ ಎಂದು ಜೋಶಿ ಹೇಳಿದರು. ಚುನಾವಣೆಗಳಲ್ಲಿ ಹಣವನ್ನು ವಿತರಿಸುವುದರಿಂದ ಕಲ್ಯಾಣವು ಸಂಭವಿಸುವುದಿಲ್ಲ ಎಂದು ಅವರು ಹೇಳಿದರು.

ಇಂದು ಜನರು ಚುನಾವಣೆಗೆ ಮೊದಲು ಹಣವನ್ನು ವಿತರಿಸಿದ್ದೀರಿ ಎಂದು ಪ್ರಶ್ನೆಯನ್ನು ಎತ್ತುತ್ತಿರುವಂತೆ.

ಸರ್ಕಾರವು ಕಲ್ಯಾಣಕ್ಕಾಗಿ ಹಣವನ್ನು ವಿತರಿಸಿದೆ ಎಂದು ಹೇಳುತ್ತದೆ. ಅವರು ಇಲ್ಲ ಎಂದು ಹೇಳುತ್ತಾರೆ, ನೀವು ಮತಗಳನ್ನು ಖರೀದಿಸಲು ಹಣವನ್ನು ವಿತರಿಸಿದ್ದೀರಿ ಎಂದು ಮಾಜಿ ಬಿಜೆಪಿ ಅಧ್ಯಕ್ಷರು ಬಿಹಾರ ಚುನಾವಣಾ ಫಲಿತಾಂಶಗಳ ಕುರಿತು ಆಡಳಿತ ಮತ್ತು ವಿರೋಧ ಪಕ್ಷದ ನಡುವಿನ ಮಾತಿನ ಯುದ್ಧವನ್ನು ಪರೋಕ್ಷವಾಗಿ ಉಲ್ಲೇಖಿಸುತ್ತಾ ಹೇಳಿದರು. ಇದು ಇಂದಿನ ಪ್ರಶ್ನೆ. ನಾವು ಇದಕ್ಕೆ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ? ರಾಜಕೀಯ ಪಕ್ಷಗಳು ಈ ಪ್ರಶ್ನೆಯನ್ನು ಪರಿಹರಿಸುವುದಿಲ್ಲ. ಅವರ ಪ್ರಶ್ನೆ ವಿಭಿನ್ನವಾಗಿದೆ. ಪಕ್ಷ ಯಾರೇ ಆಗಿರಲಿ, ಅವರು ಅಧಿಕಾರದಲ್ಲಿ ಮುಂದುವರಿಯಲು ಸಾಂವಿಧಾನಿಕ ನಿಬಂಧನೆಗಳನ್ನು ಬಳಸುತ್ತಿದ್ದಾರೆ. ಇಂದಿರಾ ಗಾಂಧಿ ಅದನ್ನು ಮಾಡಿದರು, ವಾಜಪೇಯಿ ಅದನ್ನು ಮಾಡಿದರು ಎಂದು ಅವರು ಹೇಳಿದರು. 10-20 ವರ್ಷಗಳ ನಂತರ, ಸ್ವಲ್ಪ ವಿಮರ್ಶೆ ಇರಬೇಕು ಎಂದು ಅವರು ಹೇಳಿದರು. ಜನಸಂಖ್ಯೆಯ ಅಸಮಾನ ಹಂಚಿಕೆ ಮತ್ತು ಆರ್ಥಿಕ ಅಭಿವೃದ್ಧಿಯ ಅಸಮಾನ ಹಂಚಿಕೆ ಸಂವಿಧಾನದ ಮೂಲ ತತ್ವದ ಪ್ರಕಾರವಲ್ಲ ಎಂದು ಜೋಶಿ ಹೇಳಿದರು. ಪರಿಣಾಮ ಈಗ ಕೆಲವು ರಾಜ್ಯಗಳು ಜನಗಣತಿ ಮಾಡಬೇಡಿ ಎಂದು ಹೇಳುತ್ತಿವೆ ಎಂದು ನೀವು ಕಂಡುಕೊಂಡಿದ್ದೀರಿ ಎಂದು ಅವರು ಹೇಳಿದರು.

**ಸಮಾನ ಆರ್ಥಿಕ ಶಕ್ತಿಯನ್ನು ಪಡೆಯಬೇಕು**

ಪಂಡಿತ್ ದೀನದಯಾಳ್ ಉಪಾಧ್ಯಾಯ ಒಮ್ಮೆ ಪ್ರಸ್ತಾಪಿಸಿದ ಸಣ್ಣ ರಾಜ್ಯಗಳನ್ನು ಹೊಂದಿರಿ ಎಂಬುದರಲ್ಲಿ ಸಮಸ್ಯೆಗೆ ಉತ್ತರವಿದೆ ಎಂದು ಜೋಶಿ ಹೇಳಿದರು. ಆದ್ದರಿಂದ ನೀವು ಇಂದು ನಿರ್ಧರಿಸಿದರೆ, 70 ರಾಜ್ಯಗಳು ಬಹುತೇಕ ಸಮಾನ ಜನಸಂಖ್ಯೆಯನ್ನು ಹೊಂದಿರಬೇಕು ಮತ್ತು ನಂತರ ಅವು ಸಮಾನ ಆರ್ಥಿಕ ಶಕ್ತಿಯನ್ನು ಪಡೆಯಬೇಕು ಮತ್ತು ಸಂಸತ್ತು ಪ್ರತಿಯೊಂದು ಸಂಸ್ಥೆಯ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅವರು ಹೇಳಿದರು. 10-20 ವರ್ಷಗಳ ನಂತರ, ಸ್ವಲ್ಪ ವಿಮರ್ಶೆ ಇರಬೇಕು ಎಂದು ಅವರು ಹೇಳಿದರು. ಜನಸಂಖ್ಯೆಯ ಅಸಮಾನ ಹಂಚಿಕೆ ಮತ್ತು ಆರ್ಥಿಕ ಅಭಿವೃದ್ಧಿಯ ಅಸಮಾನ ಹಂಚಿಕೆ ಸಂವಿಧಾನದ ಮೂಲ ತತ್ವದ ಪ್ರಕಾರವಲ್ಲ ಎಂದು ಜೋಶಿ ಹೇಳಿದರು.

# ಕರಾವಳಿ ಡಬ್ಬಿಂಗ್ ಮುಗಿಸಿದ ರಾಜ್ ಬಿ ಶೆಟ್ಟಿ!

ರಾಜ್ ಬಿ ಶೆಟ್ರ ಹೊಸ ಸಿನಿಮಾಗಳ ಸುದ್ದಿಗಳು ಒಂದೊಂದಾಗಿಯೇ ಹೊರ ಬರ್ತಿವೆ. 45 ಚಿತ್ರದ ಸಾಂಗ್ ರಿಲೀಸ್ ಆಗಿದೆ. ದೊಡ್ಡ ಸದ್ದು ಕೂಡ ಮಾಡಿದೆ. ಇದರ ಮಧ್ಯ ರಾಜ್ ಬಿ ಶೆಟ್ಟಿ ಒಪ್ಪಿಕೊಂಡ ಕರಾವಳಿ ಸಿನಿಮಾದ ಹೊಸ ಅಪ್ ಡೇಟ್ ಹೊರ ಬಂದಿದೆ. ಈಗಾಗಲೇ ಒಂದಷ್ಟು ಕುತೂಹಲ ಹುಟ್ಟುಹಾಕಿರೋ ಈ ಚಿತ್ರದ ಟೀಸರ್ ಮತ್ತು ಪೋಸ್ಟರ್ ಹೆಚ್ಚು ಭರವಸೆ ಮೂಡಿಸಿವೆ. ಕಾಂತಾರ ಬಂದ್ಮೇಲೆ ಕರಾವಳಿಯ ಕಲ್ಚರ್ ಕಟ್ಟಿಕೊಂಡು ಬರ್ತಿರೋ ಚಿತ್ರವೂ ಇದಾಗಿದೆ. ಇದರಲ್ಲಿ ರಾಜ್ ಬಿ ಶೆಟ್ಟಿ ಪ್ರಮುಖ ರೋಲ್ ಮಾಡಿದ್ದಾರೆ.

ಮಹಾವೀರ ಪಾತ್ರದಲ್ಲಿ ರಾಜ್ ಬಿ ಶೆಟ್ಟಿ ಬೇರೆ ರೀತಿ ಕಾಣಿಸುತ್ತಿದ್ದಾರೆ. ಇಲ್ಲಿವರೆಗಿನ ಅಷ್ಟು ಚಿತ್ರಗಳಲ್ಲಿ ರಾಜ್ ಬಿ ಶೆಟ್ಟಿ ತಾವು ಹೇಗೆ ಇದ್ದಾರೋ ಹಾಗೇನೆ ಕಾಣಿಸಿಕೊಂಡಿದ್ದಾರೆ. ಆಯಾ ಪಾತ್ರಕ್ಕೆ ಯಾವ ರೀತಿ ವರ್ತನೆ ಬೇಕೋ ಅದನ್ನ ಮೆಂಟೇನ್ ಮಾಡಿದ್ದಾರೆ. ಆದರೆ, ಕರಾವಳಿ ಚಿತ್ರದಲ್ಲಿ ಇವರು ವಿಗ್ ಧರಿಸಿದ್ದಾರೆ. ವಿಗ್ ಧರಿಸಿಕೊಂಡು ಗುರುತೇ ಸಿಗದಷ್ಟು ಬದಲಾಗಿದ್ದಾರೆ. ಇವರ ಪಾತ್ರಕ್ಕೆ ಇರೋ ಹೆಸರಲ್ಲೂ ವೈಬ್ರೇಷನ್ ಇದೆ. ಮಹಾವೀರ ಅನ್ನೋದು ಈ ಪಾತ್ರದ ಹೆಸರಾಗಿದೆ. ಮಹಾವೀರ ಚಿತ್ರದ ಪಾತ್ರ ಬೇರೆ ರೀತಿನೇ ಇದೆ. ಇದರ ಡಬ್ಬಿಂಗ್ ಕೂಡ ಈಗ ಕಂಪ್ಲೀಟ್ ಆಗಿದೆ. ಇದೇ ವಿಷಯವನ್ನ ಸಿನಿಮಾ ತಂಡ ಈಗ ಹೇಳಿಕೊಂಡಿದೆ. ಡಬ್ಬಿಂಗ್ ಸಮಯದಲ್ಲಿ ತೆಗೆದ ಒಂದು ಫೋಟೋವನ್ನು ಕೂಡ ಸಿನಿಮಾ ತಂಡ ಹಂಚಿಕೊಂಡಿದೆ.



ವಿಗ್ ಧರಿಸಿದ ರಾಜಣ್ಣ



# ನಾಗಚೈತನ್ಯ ಹುಟ್ಟುಹಬ್ಬದ ದಿನಕ್ಕೆ ಅಭಿಮಾನಿಗಳಿಗೆ ಭರ್ಜರಿ ನ್ಯೂಸ್

ಟಾಲಿವುಡ್‌ನ ಸೂಪರ್ ಸ್ಟಾರ್ ನಾಗಾರ್ಜುನ ಅಕ್ಕಿನೇನಿ ಅವರ ಪುತ್ರ ನಾಗಚೈತನ್ಯ ನಟನೆಯ 24ನೇ ಸಿನಿಮಾದ ಶೂಟಿಂಗ್ ಭರ್ಜರಿಯಾಗಿ ಶುರುವಾಗಿದೆ. ಸದ್ಯ ಈ ಸಿನಿಮಾ ಎನ್‌ಸಿ24 ವರ್ಕಿಂಗ್ ಟೈಟಲ್‌ನಲ್ಲಿ ಚಿತ್ರೀಕರಣ ಆರಂಭವಾಗಿದೆ. ಈ ಸಿನಿಮಾ ತಂಡದಿಂದ ಬೊಂಬಾಟ್ ನ್ಯೂಸ್‌ವೊಂದು ರಿವೀಲ್ ಆಗಿದೆ. ನಾಗಚೈತನ್ಯ ನಟನೆಯ 24ನೇ ಸಿನಿಮಾದ ಟೈಟಲ್ ಹಾಗೂ ಫಸ್ಟ್ ಲುಕ್ ರಿವೀಲ್ ಮಾಡಲಿದೆ ಚಿತ್ರತಂಡ. ಅಂದಹಾಗೆ ಇದೇ ನವೆಂಬರ್ 23ರಂದು ನಾಗಚೈತನ್ಯ ಅವ್ರ ಹುಟ್ಟುಹಬ್ಬವಿದ್ದು, ಇದೇ ದಿನ ಸಿನಿಮಾದ ಫಸ್ಟ್ ಲುಕ್ ಅದ್ದೂರಿಯಾಗಿ ರಿಲೀಸ್ ಆಗಲಿದೆ. ಮೈಥಾಲಾಜಿಕಲ್ ಹಾಗೂ ಅಡ್ವೆಂಚರಸ್ ಸಿನಿಮಾ ಇದಾಗಿದ್ದು, ಈ ಸಿನಿಮಾದ ಕಥೆಯನ್ನ ಪುಷ್ಪ ಸಿನಿಮಾ ನಿರ್ದೇಶಕ ಸುಕುಮಾರ್ ಬರೆದಿದ್ದು, ಕಾರ್ತಿಕ್ ದಂಡು ನಿರ್ದೇಶನ ಮಾಡುತ್ತಿದ್ದಾರೆ.

ಅಂದಹಾಗೆ ನಾಗಚೈತನ್ಯ ಅವರ ಎನ್‌ಸಿ-24 ಸಿನಿಮಾಗೆ ಅಜನೀಶ್ ಬಿ ಲೋಕನಾಥ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾ 2026ರಲ್ಲಿ ಅದ್ದೂರಿಯಾಗಿ ತೆರೆಗೆ ಬರಲು ಎಲ್ಲಾ ತಯಾರಿಯನ್ನ ಮಾಡಿಕೊಂಡಿದೆ.



2026ರಲ್ಲಿ ಅದ್ದೂರಿಯಾಗಿ ತೆರೆಗೆ

# ಕಂಗ್ರ್ಯಾಜುಲೇಷನ್ ಬ್ರದರ್ ಗ್ರ್ಯಾಂಡ್ ರಿಲೀಸ್..

ಸೋಷಿಯಲ್ ಮೀಡಿಯಾದಲ್ಲಿ ಒಂದು ಟೈಮಲ್ಲಿ ದೊಡ್ಡ ಸೆನ್ಸೇಷನ್ ಸೃಷ್ಟಿಸಿದ್ದ ಪದ ಕಂಗ್ರ್ಯಾಜುಲೇಷನ್ಸ್ ಬ್ರದರ್. ಈಗ ಆ ಸೆನ್ಸೇಷನಲ್, ವೈರಲ್, ಟ್ರೋಲ್ ಪದವೇ ಸಿನಿಮಾ ಟೈಟಲ್ ಆಗಿ ತೆರೆ ಮೇಲೆ ಬರ್ತಿದ್ದು, ಇಂದಿನಿಂದ 'ಕಂಗ್ರ್ಯಾಜುಲೇಷನ್ಸ್ ಬ್ರದರ್' ಅಬ್ಬರ ರಾಜ್ಯಾದ್ಯಂತ ಮಾರ್ಧನಿಸಲಿದೆ.. ಆಹಾ.. ಇಂಥಾ ಆಫರ್ ಕೊಟ್ರೇ ಯಾರ್ ತಾನೇ ಬೇಡ ಅಂತಾರೆ ಅಲ್ವಾ.. ಆದ್ರೆ ಈ 'ಬ್ರದರ್' ವರಸೆನೇ ಬೇರೆ.. ನೋಡೋಕೆ ಪಕ್ಕಾ 'ಜೆನ್ ಜಿ ಕಿಡ್ಸ್'ಗೆ ಮಾಡಿರೋ ಸಿನಿಮಾ ಥರಾ ಇದ್ರೂ.. ಮಕ್ಕಳಿಂದ ವಯಸ್ಸಾದವ್ರ ತನಕ ಕೂತು, ಎಂಜಾಯ್ ಮಾಡಬಹುದಾದ ಸಿನಿಮಾ ಇದು.. ಸಿನಿಮಾದ ಟೈಟಲ್ ಬಿಡುಗಡೆ ಆದಾಗಿನಿಂದಲೂ 'ಕಂಗ್ರ್ಯಾಜುಲೇಷನ್ಸ್ ಬ್ರದರ್'ಗೆ ಒಂದೊಳ್ಳೆ ಪಾಸಿಟಿವ್ ರೆಸ್ಪಾನ್ಸ್ ಕೇಳಿ ಬರ್ತಿತ್ತು.. ಆ ಪಾಸಿಟಿವ್ ರೆಸ್ಪಾನ್ಸ್ ಈಗ ಥಿಯೇಟರ್ ತನಕವೂ ಬಂದಿದ್ದು, ಇಂದಿನಿಂದ ರಾಜ್ಯಾದ್ಯಂತ ಗ್ರ್ಯಾಂಡ್ ರಿಲೀಸ್‌ಗೆ ಸಿದ್ಧವಾಗಿದೆ. ಒಬ್ಬ ಹುಡುಗ ಇಬ್ಬರು ಹುಡುಗೀರನ್ನ ಮದುವೆ ಆಗಿರೋ, ಪ್ರೀತಿಸಿರೋ ಸಾಕಷ್ಟು ಘಟನೆಗಳನ್ನು ನಾವ್ ನೋಡಿದ್ದೀವಿ.. ಆದ್ರೆ ಇಬ್ಬರು ಹುಡುಗೀರು ಒಬ್ಬನೇ ಹುಡುಗನನ್ನು ಮದುವೆ ಆಗ್ತೀನಿ ಅನ್ನೋದು ಹೊಸ ತರಹದ ಯೋಚನೆ.. ಇಂಥಾ ಸಂದರ್ಭ ಸೃಷ್ಟಿಯಾದಾಗ ಆ ಹುಡುಗ ಏನ್ ಮಾಡ್ತಾನೆ, ಆತನ ನಿರ್ಧಾರ ಏನಾಗಿರುತ್ತೆ.. ಆತ ಯಾರನ್ನ ಮದುವೆ ಆಗ್ತಾನೆ ಅನ್ನೋ ಸೀಟ್ ಎಜ್ಡ್ ಕ್ಯೂರಿಯಾಸಿಟಿ ಹುಟ್ಟಿಸೋ ಸಿನಿಮಾನೇ ಕಂಗ್ರ್ಯಾಜುಲೇಷನ್ಸ್ ಬ್ರದರ್.. ಕಂಪ್ಲೀಟ್ ಹೊಸಬರ ತಂಡವಾಗಿರೋ ಕಂಗ್ರ್ಯಾಜುಲೇಷನ್ಸ್ ಬ್ರದರ್ ರಿಲೀಸ್‌ಗೂ ಮುನ್ನ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿತ್ತು.. ಹೋದ ಕಡೆಯಲೆಲ್ಲಾ ಅದ್ದೂರಿ ಪ್ರಚಾರ ಮಾಡಿದ್ರು.... ಇದರಾಚೆಗೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ರಿಲೀಸ್‌ಗೂ ಮುನ್ನ, ಸಿನಿಮಾ ಸ್ಪೆಷಲ್ ಪ್ರೀಮಿಯರ್ ಆಯೋಜಿಸಲಾಗಿತ್ತು.. ಪ್ರೀಮಿಯರ್ ಶೋನಲ್ಲಿ ಜನ ನಿರೀಕ್ಷೆಗೂ ಮೀರಿದ ರಿಪೋರ್ಟ್ ಕೊಟ್ಟಿದ್ರು. ಈ ಸಿನಿಮಾಗೆ ಸ್ಕ್ರೀನ್ ಫಸ್ಟ್ ಪ್ರೊಡಕ್ಷನ್ಸ್, ಪೆನ್ ಪೇಪರ್ ಸ್ಟುಡಿಯೋ, ಕಲ್ಲೂರ್ ಸಿನಿಮಾಸ್ ಬಂಡವಾಳ ಹೂಡಿದ್ದು, ಹೊಸ ಕಲಾವಿದರನ್ನು, ತಂತ್ರಜ್ಞರನ್ನು ಸ್ಯಾಂಡಲ್ವುಡ್‌ಗೆ ಕೊಡುಗೆಯಾಗಿ ನೀಡುತ್ತಿವೆ.. ರಕ್ಷಿತ್ ನಾಗ್, ಅನುಷಾ, ಸಂಜನಾ ದಾಸ್ ಲೀಡ್ ರೋಲ್‌ನಲ್ಲಿ ನಟಿಸಿದ್ದು, ಈಗಾಗಲೇ ಬಿಡುಗಡೆ ಆಗಿರೋ ಕಂಟೆಂಟ್ ಮೂಲಕ ಜನರನ್ನ ರೀಚ್ ಆಗಿದ್ದಾರೆ.

ಸಿನಿ ವೀಕ್ಷಕರಿಂದ ಸೂಪರ್ ರೆಸ್ಪಾನ್ಸ್..!



# ಸೋಷಿಯಲ್ ಮೀಡಿಯಾದಲ್ಲಿ ಜನರ ವಿರೋಧ

ಉಪಾಸನಾ ಕೊನಿಡೆಲಾ ಮೊನ್ನೆ ಐಐಟಿ ಹೈದರಾಬಾದ್‌ಗೆ ಭೇಟಿಯನ್ನು ನೀಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಉಪಾಸನಾ, ನಟ ರಾಮಚರಣ್ ಪತ್ನಿ. ಮೆಗಾಸ್ಟಾರ್ ಚಿರಂಜೀವಿ ಸೊಸೆ. ಆದರೇ, ಉಪಾಸನಾ ಮಾತುಗಳು ಈಗ ಇಂಟರ್‌ನೆಟ್‌ನಲ್ಲಿ ಭಾರಿ ಚರ್ಚೆಗೆ ಕಾರಣವಾಗಿವೆ. ಸೋಷಿಯಲ್ ಮೀಡಿಯಾದಲ್ಲಿ ಪರ-ವಿರೋಧ ಚರ್ಚೆ ನಡೆಯುತ್ತಿದೆ. ಯುವಜನತೆ ಮದುವೆಯಾಗಿ ಮಕ್ಕಳನ್ನು ಪಡೆಯಬೇಕೇ ಮುಂದೂಡಬೇಕೇ ಎಂಬ ಬಗ್ಗೆ ಚರ್ಚೆಗೆ ಉಪಾಸನಾ ಮಾತುಗಳು ಕಾರಣವಾಗಿವೆ.

ಇಷ್ಟಕ್ಕೂ ಉಪಾಸನಾ ಆಡಿದ ಮಾತುಗಳು ಏನೆಂದರೇ, ನಿಮ್ಮಲ್ಲಿ ಎಷ್ಟು ಮಂದಿ ಮದುವೆಯಾಗಲು ಇಷ್ಟಪಡುತ್ತೀರಿ ಎಂದು ಕೇಳಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಹುಡುಗರು ಮದುವೆಯಾಗಲು ರೆಡಿಯಾಗಿದ್ದೇವೆ ಎಂದು ಕೈ ಎತ್ತಿದ್ದಾರೆ. ಆದರೇ, ಹುಡುಗಿಯರು ಕೇರಿಯಲ್ ಕಡೆಗೆ ಹೆಚ್ಚು ಫೋಕಸ್ ಆಗಿದ್ದರು. ಇದು ಹೊಸ ಪ್ರಗತಿದಾಯಕ ಭಾರತ ಎಂದು ಉಪಾಸನಾ ಹೇಳಿದ್ದಾರೆ. ನಿಮ್ಮ ಗುರಿಯನ್ನು ಆಯ್ಕೆ ಮಾಡಿಕೊಳ್ಳಿ. ನಿಮ್ಮ ಪಾತ್ರವನ್ನು ನೀವು ನಿಭಾಯಿಸಿ. ನಂತರ ನಿಮ್ಮನ್ನು ತಡೆಯೋಕೆ ಯಾರಿಂದಲೂ ಸಾಧ್ಯವಿಲ್ಲ ಎಂದು ಟ್ವೀಟರ್ ನಲ್ಲೂ ಉಪಾಸನಾ ಟ್ವೀಟ್ ಮಾಡಿದ್ದಾರೆ. ಜೊತೆಗೆ ತಾವು ಮಾತನಾಡಿದ ವಿಡಿಯೋವನ್ನು ಟ್ವೀಟ್ ನಲ್ಲಿ ಟ್ಯಾಗ್ ಮಾಡಿದ್ದಾರೆ.



# ತಾಯ್ತನದ ಫೋಟೋ ಹಂಚಿಕೊಂಡು ಶಾಕ್ ಕೊಟ್ಟ ನಿತ್ಯಾ ಮೆನನ್

ಬಹುಭಾಷಾ ನಟಿ ನಿತ್ಯಾ ಮೆನನ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ತಾಯ್ತನದ ಫೋಟೋ ಹಂಚಿಕೊಂಡಿದ್ದಾರೆ. ಈ ಫೋಟೋ ಈಗ ಸಖತ್ ವೈರಲ್ ಆಗ್ತಿದೆ. ಅಷ್ಟಕ್ಕೂ ನಿತ್ಯಾ ಮೆನನ್ ಹಂಚಿಕೊಂಡ ಫೋಟೋದ ಅಸಲಿಯತ್ತೇನು ಗೊತ್ತಾ.. ಚಿತ್ರದ ಸನ್ನಿವೇಶದ ಶೂಟಿಂಗ್‌ಗಾಗಿ ನಿತ್ಯಾ ಮೆನನ್ ಪ್ರಾಕ್ಟೀಸ್ ಮಾಡಿದ ತೆರೆಹಿಂದಿನ ಫೋಟೋಗಳನ್ನ ಹಂಚಿಕೊಂಡಿದ್ದಾರೆ. ಇವು ಈಗ ವೈರಲ್ ಆಗ್ತಿವೆ. ನಿತ್ಯಾ ಮೆನನ್ ಶೂಟಿಂಗ್ ದಿನಗಳಲ್ಲಿ ಕಳೆದ ಕೆಲ ಬ್ಯೂಟಿಫುಲ್ ಮೆಮೊರಿಯನ್ನ ಮೆಲುಕು ಹಾಕಿದ್ದಾರೆ. ವಿಶೇಷ ಅಂದ್ರೆ, ತಾಯ್ತನ, ಮಗುವಿನ ಆರೈಯಲ್ಲಿ ತೊಡಗಿದ ತಾಯಿಯ ಪಾತ್ರಕ್ಕಾಗಿ ನಟಿ ಮಾಡಿದ ಪ್ರಾಕ್ಟೀಸ್‌ನ ಆ ಸುಂದರ ಕ್ಷಣಗಳನ್ನ ಈಗ ಹಂಚಿಕೊಂಡಿದ್ದಾರೆ ನಟಿ ನಿತ್ಯ ಮೆನನ್. ಜೊತೆಗೆ ಸಿನಿಮಾ ಸೆಟ್‌ನಲ್ಲಿ ತಾವು ಅನುಭವಿಸಿದ ಸಿಹಿ ನೆನಪುಗಳು, ಒಂದೊಳ್ಳೆ ಟೀಂನ ಮಿಸ್ ಮಾಡಿಕೊಂಡ ರೀತಿಯನ್ನ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಕನ್ನಡದಲ್ಲಿ ಮೈನಾ, ಕೋಟಿಗೊಬ್ಬ-2 ಸೇರಿದಂತೆ ಮುಂತಾದ ಸಿನಿಮಾಗಳಲ್ಲಿ ನಟಿ ನಿತ್ಯಾ ಮೆನನ್ ನಟಿಸಿದ್ದಾರೆ. ಸೌತ್‌ನಲ್ಲಿ ಸೂಪರ್‌ಸ್ಟಾರ್ಸ್ ಜೊತೆ ತೆರೆಹಂಚಿಕೊಂಡಿರುವ ನಟಿ ನಿತ್ಯಾ ಮೆನನ್ ಶೂಟಿಂಗ್ ದಿನಗಳನ್ನ ಮಿಸ್ ಮಾಡಿಕೊಂಡ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

# 2ನೇ ಟೆಸ್ಟ್‌ಗೆ ಕ್ಯಾಪ್ಟನ್ ಆಗಿ ಪಂತ್..

ಕೊಲ್ಕತ್ತಾ ಟೆಸ್ಟ್ ಪಂದ್ಯದಲ್ಲಿ ತೀವ್ರ ಮುಖಭಂಗ. ಕ್ರಿಕೆಟ್ ಕಾಶಿಯಲ್ಲಿ ಹೋದ ಮಾನ, ಗುವಾಹಟಿಯಲ್ಲಿ ಹುಡುಕಾಟ.. ಹಾಲಿ ನಾಯಕ ಗಿಲ್ ಅಲಭ್ಯತೆ.. ಹಂಗಾಮಿ ನಾಯಕ ರಿಷಭ್ ಪಂತ್ ಮೇಲೆ ಒತ್ತಡ. ಇದೇ ಕಾರಣಕ್ಕೆ 2ನೇ ಟೆಸ್ಟ್ ಪಂದ್ಯ ತೀವ್ರ ಕುತೂಹಲ ಕೆರಳಿಸಿದೆ. ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ ವೈಟ್ ವಾಶ್ ಮುಖಭಂಗ ಅನುಭವಿಸಿರುವ ಟೀಮ್ ಇಂಡಿಯಾ ಮತ್ತೊಮ್ಮೆ ಅಂತಹದ್ದೇ ಕೆಟ್ಟ ಸ್ಥಿತಿಗೆ ಸಿಲುಕಿಕೊಂಡಿದೆ.

ಮೊದಲ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ, 30 ರನ್‌ಗಳ ಹೀನಾಯ ಸೋಲು ಅನುಭವಿಸಿತ್ತು. ಆ ಪಂದ್ಯದ ಸೋಲಿಗೆ, ರಿಷಭ್ ಪಂತ್ ನಾಯಕತ್ವ ಕೂಡ ಕಾರಣ. ಗಿಲ್ ಅಲಭ್ಯತೆಯಲ್ಲಿ ತಂಡವನ್ನ ಮುನ್ನಡೆಸಿದ್ದ ಪಂತ್, ಮ್ಯಾಚ್ ಟ್ಯಾಕ್ಟಿಕ್ಸ್ ಮಾಡೋದ್ರಲ್ಲಿ ವಿಫಲರಾದ್ರು. ಗುವಾಹಟಿಯಲ್ಲಿ ಪಂತ್, ಈಡನ್ ಗಾರ್ಡನ್ಸ್‌ನಲ್ಲಿ ಮಾಡಿದ ತಪ್ಪನ್ನ ಮಾಡೋ ಆಗಿಲ್ಲ. ಸದ್ಯ ಪಂತ್ ಮುಂದಿರೋದು ಒಂದೇ ಒಂದು ಆಪ್ಶನ್. ಅದು ಗೆಲುವು ಮಾತ್ರ. ಒಂದು ಗೆಲುವು ಪಂತ್ ಮತ್ತು ಟೀಮ್ ಇಂಡಿಯಾ ಮರ್ಯಾದೆಯನ್ನ ಉಳಿಸುತ್ತದೆ. ಅಪ್ಪಿತಪ್ಪಿ ಟೀಮ್ ಇಂಡಿಯಾ 2ನೇ ಟೆಸ್ಟ್ ಪಂದ್ಯವನ್ನೂ ಸೋತ್ರೆ ತಲೆದಂಡಕ್ಕೆ ಆಹ್ವಾನ ಮಾಡಿದಂತೆ.

ಹಂಗಾಮಿ ನಾಯಕ ಪಂತ್ ಮೇಲೆ ಬೆಟ್ಟದಷ್ಟು ನಿರೀಕ್ಷೆ ಇದೆ. ಒತ್ತಡ ಕೂಡ ಇದೆ. ಒಂದೆಡೆ ನಾಯಕನಾಗಿ ಪಂತ್ ಮೇಲೆ ಜವಾಬ್ದಾರಿ, ಮತ್ತೊಂದೆಡೆ ಬ್ಯಾಟ್ಸ್‌ಮನ್ ಆಗಿ ಒತ್ತಡ. ನಾಯಕ ಹಾಗೂ ಬ್ಯಾಟ್ಸ್‌ಮನ್ ಆಗಿ ಪಂತ್ ಎರಡನ್ನೂ ಬ್ಯಾಲೆನ್ಸ್ ಮಾಡಬೇಕಿದೆ. ಎರಡೂ ರೋಲ್‌ಗಳಲ್ಲೂ ಮಿಂಚಬೇಕಿದೆ. ನಾಯಕನಾಗಿ ಮಿಂಚಿ ಬ್ಯಾಟ್ಸ್‌ಮನ್ ಆಗಿ ಫೇಲ್ ಆದ್ರೂ ಪಂತ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಪಂತ್, ಡಬಲ್ ರೋಲ್ ಕ್ಯಾರೆಕ್ಟರ್‌ನ ಅತ್ಯುತಮವಾಗಿ ನಿಭಾಯಿಸಬೇಕು.

ಪಂತ್ ನ್ಯಾಚ್ಯುರಲಿ ಅಗ್ರೆಸಿವ್ ಪ್ಲೇಯರ್. ಕೋಚ್ ಗೌತಮ್ ಗಂಭೀರ್‌ಗೂ ಪಂತ್ ಅಗ್ರೆಸಿವ್‌ನೆಸ್ ತುಂಬಾ ಇಷ್ಟ. ಎಲ್ಲಾ ಟೈಮ್‌ನಲ್ಲೂ ಅಗ್ರೆಸಿವ್ ಆಗಿರೋದು. ಅಗ್ರೆಸಿವ್ ಆಗಿ ಆಡೋದು ಸರಿಯಲ್ಲ. ಕೆಲವೊಮ್ಮೆ ಪರಿಸ್ಥಿತಿಗೆ ತಕ್ಕಂತೆ ಜವಾಬ್ದಾರಿಯುತವಾಗಿ ಆಟವಾಡಬೇಕು. ಸ್ಮಾರ್ಟ್ ಗೇಮ್ ಕಡೆ ಕೂಡ ಗಮನ ಹರಿಸಬೇಕು. ಪಂತ್ ಅಗ್ರೆಸಿವ್ ಮತ್ತು ಸ್ಮಾರ್ಟ್ ಗೇಮ್‌ನ ಸೂಕ್ತ ಸಮಯದಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಹಂಗಾಮಿ ನಾಯಕ ಪಂತ್ ಮುಂದೆ ಇರೋ ಬಿಗ್ ಟಾಸ್ಕ್ ಪ್ಲೇಯಿಂಗ್ ಇಲೆವೆನ್ ಆಯ್ಕೆ. ಗಿಲ್ ಸ್ಥಾನಕ್ಕೆ ಯಾರು ಪೇಸರ್ಸ್ ಆಯ್ಕೆ, ಸ್ಪಿನ್ನರ್ಸ್ ಆಯ್ಕೆ, ಇವೆಲ್ಲವನ್ನೂ ಪಂತ್ ಪರ್ಫೆಕ್ಟ್ ಆಗಿ ಸೆಲೆಕ್ಟ್ ಮಾಡಬೇಕಿದೆ.



# ತಾಯಿ ಕಾಪಾಡಮ್ಮಾ..

## ಪವರ್‌ಫುಲ್ ಸ್ಥಳಕ್ಕೆ ಗಂಭೀರ್ ಭೇಟಿ..!

ಈಡನ್ ಗಾರ್ಡನ್ ಟೆಸ್ಟ್ ಪಂದ್ಯದ ಸೋಲು ವಿಶ್ವಕ್ರಿಕೆಟ್ ಮುಂದೆ ಟೀಮ್ ಇಂಡಿಯಾ ತಗ್ಗಿಸುವಂತೆ ಮಾಡಿದೆ. ಗುವಾಹಟಿ ಟೆಸ್ಟ್ ಗೆದ್ದು ವೈಟ್‌ವಾಷ್ ಮುಖಭಂಗದಿಂದ ಪಾರಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಡು ಆರ್ ಡೈ ಪಂದ್ಯಕ್ಕೂ ಮುನ್ನ ಹೆಡ್ ಕೋಚ್ ಗೌತಮ್ ಗಂಭೀರ್ ಪವರ್‌ಫುಲ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಇಂಡೋ-ಆಫ್ರಿಕಾ ಸೆಕೆಂಡ್ ಟೆಸ್ಟ್‌ಗೆ ಕೌಂಟ್‌ಡೌನ್ ಆರಂಭವಾಗಿದೆ. ಮೊದಲ ಟೆಸ್ಟ್‌ನಲ್ಲಿ ಹೀನಾಯ ಸೋಲುಂಡ ಟೀಮ್ ಇಂಡಿಯಾ ಇದೀಗ ಸರಣಿ ಸೋಲಿಂದ ಪಾರಾಗಬೇಕಾದ ಸಂಕಷ್ಟಕ್ಕೆ ಸಿಲುಕಿದೆ. ವೈಟ್‌ವಾಷ್ ಮುಖಭಂಗದಿಂದ ಪಾರಾಗಲು ಗುವಾಹಟಿಯಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಹೆಡ್ ಕೋಚ್ ಗಂಭೀರ್ ಅಂತೂ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿದ್ದು, ಸಂಕಷ್ಟ ನಿವಾರಣೆಗೆ ದೇವರ ಮೊರೆ ಹೋಗಿದ್ದಾರೆ.

**ಪವರ್‌ಫುಲ್ ಸ್ಥಳಕ್ಕೆ ಗಂಭೀರ್ ಭೇಟಿ:** ಈಡನ್ ಗಾರ್ಡನ್ ಟೆಸ್ಟ್ ಪಂದ್ಯ ಮುಗಿದ ಬಳಿಕವೂ ಕೊಲ್ಕತ್ತಾದಲ್ಲೇ ಬೀಡು ಬಿಟ್ಟಿದ್ದ ಟೀಮ್ ಇಂಡಿಯಾ ಅಲ್ಲೇ ಅಭ್ಯಾಸ ನಡೆಸಿದ್ರು. ಇದೀಗ ಗುವಾಹಟಿಗೆ ಬಂದಿಳಿದ ಬೆನ್ನಲ್ಲೇ ಹೆಡ್ ಕೋಚ್ ಗೌತಮ್ ಗಂಭೀರ್ ಪವರ್‌ಫುಲ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಗುವಾಹಟಿಯಲ್ಲಿರೋ ಪವಿತ್ರ ಸ್ಥಳವಾದ ಮಾ ಕಾಮಾಕ್ಯ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ ಒಳಿತಿಗಾಗಿ ಪ್ರಾರ್ಥಿಸಿದ್ದಾರೆ.

ಕಾಮಾಕ್ಯ ದೇವಿಯ ಪರಮ ಭಕ್ತ



ಕೋಚ್ ಗೌತಮ್ ಗಂಭೀರ್ ಕಾಮಾಕ್ಯ ದೇವಿಯ ಪರಮ ಭಕ್ತ. ಆಗಾಗ ಈ ದೇವಸ್ಥಾನಕ್ಕೆ ಭೇಟಿ ನೀಡ್ತಾರೆ. ಕೋಚ್ ಹುದ್ದೆಗೇರಿದ ಬೆನ್ನಲ್ಲೇ ಮೊದಲು ಇಲ್ಲಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ರು. ಪವಿತ್ರ ಸ್ಥಳಕ್ಕೆ ಪೂಜೆ ಸಲ್ಲಿಸಿ, ಪ್ರಾರ್ಥಿಸಿದ್ರೆ ಒಳಿತಾಗುತ್ತೆ ಅನ್ನೋದು ಗಂಭೀರ್ ನಂಬಿಕೆ. ಆ ನಂಬಿಕೆ ನಿಜವಾಗಿದೆ ಕೂಡ. ಈ ಹಿಂದೆ ಕೆಕೆಆರ್ ಮೆಂಟರ್ ಆಗಿದ್ದ ಗೌತಮ್ ಗಂಭೀರ್ 2024ರ ಐಪಿಎಲ್‌ಗೂ ಮುನ್ನ ಕಾಮಾಕ್ಯ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥಿಸಿದ್ರು. ಸೀಸನ್‌ನ ಅಂತ್ಯದಲ್ಲಿ ಕೆಕೆಆರ್ ಚಾಂಪಿಯನ್ ಆಗಿ ಹೊರ ಹೊಮ್ಮಿತ್ತು.

ನಮ್ಮ ದೇಶದಲ್ಲಿ ಹಲವು ದೇವ ಸನ್ನಿಧಿಗಳು ಅನನ್ಯತೆಯ ಕಾರಣದಿಂದಲೇ ಪ್ರಮುಖ ಧಾರ್ಮಿಕ ಕೇಂದ್ರಗಳಾಗಿ ಬೆಳೆದಿವೆ. ಅಂತಾ ಧಾರ್ಮಿಕ ಕೇಂದ್ರಗಳಲ್ಲಿ ಅಸ್ಸಾಂನ ಗುವಾಹಟಿಯಲ್ಲಿರುವ ಕಾಮಾಕ್ಯ ದೇವಸ್ಥಾನ ಕೂಡಾ ಒಂದು. ಅಸ್ಸಾಂಗೆ ಭೇಟಿ ನೀಡಿದ ಪ್ರವಾಸಿಗರು ಈ ದೇವಸ್ಥಾನಕ್ಕೆ ಹೋಗದೇ ಬರೋದು ತೀರಾ ಕಡಿಮೆ. ಕಾಮಾಕ್ಯ ದೇವಸ್ಥಾನ ದೇಶದ 51 ಶಕ್ತಿಪೀಠಗಳಲ್ಲಿ ಒಂದಾಗಿದೆ. ಈ ಪವಿತ್ರ ಸ್ಥಳಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿ ಭಕ್ತಿಯಿಂದ ಪ್ರಾರ್ಥಿಸಿದ್ರೆ, ದುಷ್ಟಶಕ್ತಿಗಳಿಂದ ಮುಕ್ತಿ ಸಿಗುತ್ತೆ ಅನ್ನೋದು ಭಕ್ತರ ನಂಬಿಕೆಯಾಗಿದೆ. ವಿಶೇಷವಾಗಿ ಮಾಟ ಮಂತ್ರದ ಬಾಧೆಯಿಂದ ಮುಕ್ತಿ ಪಡೆಯುವ ಸಲುವಾಗಿಯೇ ಸಾಕಷ್ಟು ಮಂದಿ ಇಲ್ಲಿಗೆ ಭೇಟಿ ನೀಡ್ತಾರೆ. ಟೀಮ್ ಇಂಡಿಯಾ ಹೆಡ್ ಕೋಚ್ ಗೌತಮ್ ಗಂಭೀರ್ ದೇವಿ ಭಕ್ತ. ಶಕ್ತಿ ದೇವತೆಗಳ ಆರಾಧಕ. ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್‌ಗೂ ಮುನ್ನ ಗಂಭೀರ್ ಕೊಲ್ಕತ್ತಾದ ಕಾಳಿ ಘಾಟ್‌ಗೆ ಭೇಟಿ ನೀಡದ್ರು. ಮಹಾಕಾಳಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದ್ರು.

# ವೈಟ್‌ವಾಷ್ ಭೀತಿ..

## ಕೆಟ್ಟ ಮೇಲೆ ಬುದ್ಧಿ ಕಲಿತ ಟೀಮ್ ಇಂಡಿಯಾ..!

ಒಂದು ಸೋಲು.. ಹೀನಾಯ ಸೋಲು.. ಕ್ರಿಕೆಟ್ ಲೋಕವೇ ಟೀಮ್ ಇಂಡಿಯಾ ಟೆಸ್ಟ್ ತಂಡದ ಸಾಮರ್ಥ್ಯವನ್ನ ಪ್ರಶ್ನಿಸುವಂತೆ ಮಾಡಿದೆ. ನ್ಯೂಜಿಲೆಂಡ್ ಎದುರಿನ ವೈಟ್‌ವಾಷ್ ಮುಖಭಂಗದ ಕಹಿ ಮಾಸುವ ಮುನ್ನವೇ ತವರಿನಲ್ಲಿ ಮತ್ತೊಂದು ಮಹಾಸೋಲನ್ನ ಟೀಮ್ ಇಂಡಿಯಾ ಕಂಡಿದೆ. ಈಡನ್ ಗಾರ್ಡನ್ ಅಂಗಳದಲ್ಲಿ ಸೌತ್ ಆಫ್ರಿಕಾ ಎದುರು ಸೋತ ಟೀಮ್ ಇಂಡಿಯಾವನ್ನೀಗ ಹೊಸ ಭೀತಿ ಆವರಿಸಿದೆ.

ಸರಣಿಯ ಮೊದಲ ಪಂದ್ಯವನ್ನ ಕೈ ಚೆಲ್ಲಿರುವ ಟೀಮ್ ಇಂಡಿಯಾ ಇದೀಗ ಸಂಕಷ್ಟಕ್ಕೆ ಸಿಲುಕಿದೆ. ಹಾಲಿ ಟೆಸ್ಟ್ ಚಾಂಪಿಯನ್ ಎಂಬ ಹೆಗ್ಗಳಿಕೆಗೆ ತಕ್ಕಂತೆ ಆಡಿರೋ ಸೌತ್ ಆಫ್ರಿಕಾ ಸರಣಿ ಗೆಲುವಿನ ಕನವರಿಕೆಯಲ್ಲಿದೆ. ಇತ್ತ ವೈಟ್‌ವಾಷ್ ಮುಖಭಂಗದ ಭೀತಿ ಟೀಮ್ ಇಂಡಿಯಾ ಡ್ರೆಸ್ಸಿಂಗ್ ರೂಮ್‌ನ ಆವರಿಸಿದೆ. ವೈಟ್‌ವಾಷ್ ಮುಖಭಂಗದಿಂದ ಪಾರಾಗೋಕೆ ಗಂಭೀರ್ ಅಂಡ್ ಟೀಮ್ ನಾನಾ ತಂತ್ರಗಳನ್ನ ಹೆಣೀತಿದ್ದಾರೆ.

ಮೊದಲ ಟೆಸ್ಟ್ ಪಂದ್ಯದಲ್ಲಿ ನಮಗೆ ಟರ್ನಿಂಗ್ ಟ್ರ್ಯಾಕೇ ಬೇಕು ಎಂದು ಪಟ್ಟು ಹಿಡಿದ ಮ್ಯಾನೇಜ್‌ಮೆಂಟ್ ಸ್ಪಿನ್ ಫ್ರೆಂಡ್ಲಿ ಟ್ರ್ಯಾಕ್ ರೆಡಿ ಮಾಡಿಸಿಕೊಂಡಿತ್ತು. ತಾವೇ ತೋಡಿದ ಹಳ್ಳಕ್ಕೆ ತಾವೇ ಬಿದ್ರು ಅನ್ನೋ ಮಾತಿದ್ಯಲ್ಲ.. ಹಂಗೇ ಅಯ್ತು. ಸ್ಪಿನ್ ಬಲೆಯಲ್ಲಿ ಟೀಮ್ ಇಂಡಿಯಾ ಬ್ಯಾಟ್ಸ್‌ಮನ್‌ಗಳೇ ಬಿದ್ರು. ಅಂತಿಮವಾಗಿ ಟೀಮ್ ಇಂಡಿಯಾ ಹೀನಾಯ ಸೋಲುಂಡಿತು. ಆ ಸೋಲಿನಿಂದ ಟೀಮ್ ಇಂಡಿಯಾ ಮ್ಯಾನೇಜ್‌ಮೆಂಟ್ ಇದೀಗ ಪಾಠ ಕಲಿತಂತಿದೆ.

ಕೊಲ್ಕತ್ತಾ ಟೆಸ್ಟ್‌ನಲ್ಲಿ ಟೀಮ್ ಇಂಡಿಯಾ ನಾಲ್ವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದ್ರೆ ಸೌತ್ ಆಫ್ರಿಕಾ ಇಬ್ಬರು ಸ್ಪಿನ್ನರ್ಸ್‌ಗೆ ಮಣೆ ಹಾಕಿತ್ತು. ಆದ್ರೆ, ಹೆಚ್ಚು ಸಕ್ಸಸ್ ಸಿಕ್ಕಿದ್ದು ಸೌತ್ ಆಫ್ರಿಕಾಗೆ. 12 ವಿಕೆಟ್‌ಗಳನ್ನ ಸೌತ್ ಆಫ್ರಿಕಾ ಸ್ಪಿನ್ನರ್ಸ್ ಬೇಟೆಯಾಡಿದ್ರು. ಸೋಲಿಗೆ ನೇರ ಹೊಣೆ ಟೀಮ್ ಇಂಡಿಯಾದ ಬ್ಯಾಟಿಂಗ್ ವಿಭಾಗ. ಸ್ಪಿನ್ ಟ್ರ್ಯಾಕ್‌ನಲ್ಲಿ ಬ್ಯಾಟಿಂಗ್ ನಡೆಸೋಕೆ ಇಂಡಿಯನ್ ಬ್ಯಾಟರ್ಸ್ ಪರದಾಡಿದ್ರು. ಹೀಗಾಗಿ ಇದೀಗ ಪಿಚ್‌ನಲ್ಲೇ ಬದಲಾವಣೆ ಮಾಡೋಕೆ ಟೀಮ್ ಮ್ಯಾನೇಜ್‌ಮೆಂಟ್ ಮುಂದಾಗಿದೆ.

ಕೊಲ್ಕತ್ತಾ ಟೆಸ್ಟ್ ಸೋಲು..





ಹಲ್ಲಾ ಬೋಲ್... ಹಲ್ಲಾ ಬೋಲ್... ರಾಜಸ್ಥಾನ್ ರಾಯಲ್ಸ್ ಹಲ್ಲಾ ಬೋಲ್.. ಅಂತ ಐಪಿಎಲ್‌ನಲ್ಲಿ ಎದುರಾಳಿಗಳ ವಿರುದ್ಧ ತೊಡೆತಟ್ಟುತ್ತಿದ್ದ ಪಿಂಕ್ ಆರ್ಮಿಯಲ್ಲಿ ಇದೀಗ ಗಲಾಟೆ, ಗೊಂದಲ, ಅಪಸ್ವರ ಶುರುವಾಗಿದೆ. ಮಿನಿ ಹರಾಜು ಹತ್ತಿರವಾಗ್ತಿದೆ. ಐಪಿಎಲ್ ಸೀಸನ್-19ಕ್ಕೂ ಮುನ್ನ ಬಲಿಷ್ಠ ತಂಡ ಕಟ್ಟಬೇಕಿದ್ದ ರಾಜಸ್ಥಾನ್ ರಾಯಲ್ಸ್, ಆಟಗಾರರನ್ನ ಸಮಾಧಾನ ಮಾಡುವ ಕೆಲಸದಲ್ಲಿ ಬ್ಯುಸಿಯಾಗಿದೆ.

# ರಾಜಸ್ಥಾನ್ ರಾಯಲ್ಸ್‌ನಲ್ಲಿ ನಾಯಕತ್ವಕ್ಕಾಗಿ ಕಿತ್ತಾಟ..!

ಸಂಜು ಸ್ಯಾಮ್ಸನ್ ಚೆನ್ನೈ ಸೂಪರ್‌ಕಿಂಗ್ಸ್ ತಂಡಕ್ಕೆ ಟ್ರೇಡ್ ಆದ್ಮೇಲೆ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ಯಾರು ಅನ್ನೋ ಪ್ರಶ್ನೆ ಶುರುವಾಗಿದೆ. ಮೂಲಗಳ ಪ್ರಕಾರ ಅನುಭವಿ ಆಲ್‌ರೌಂಡರ್ ಜಡೇಜಾ ಆರ್‌ಆರ್ ತಂಡದ ಸಾರಥ್ಯವಹಿಸಿಕೊಳ್ತಾರೆ ಎಂದು ಹೇಳಲಾಗ್ತಿದೆ. ಜಡೇಜಾಗೆ ನಾಯಕ ಪಟ್ಟ ಕೊಟ್ರೆ ವರ್ಷಗಳಿಂದ ತಂಡದಲ್ಲಿದ್ದ ಆಟಗಾರರು ಸುಮ್ಮನೆ ಇರ್ತಾರಾ ಅನ್ನೋ ಪ್ರಶ್ನೆ ಎದುರಾಗಿದೆ. ಆರ್ ಆರ್ ನಾಯಕ ಪಟ್ಟಕ್ಕಾಗಿ ಕಿತ್ತಾಟ ಶುರುವಾಗಿದೆ.

ಐಪಿಎಲ್ ಟ್ರೇಡ್ ಡೀಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್, ರವೀಂದ್ರ ಜಡೇಜಾರನ್ನ ತಂಡಕ್ಕೆ ಕರೆತಂದಿದೆ. ಜಡೇಜಾ ಆಗಮನ ಆರ್‌ಆರ್ ತಂಡಕ್ಕೆ, ಖುಷಿಗಿಂತ ಹೆಚ್ಚು ಟೆನ್ಶನ್ ನೀಡಿದೆ. ಜಡೇಜಾಗೆ ನಾಯಕತ್ವದ ಭರವಸೆ ನೀಡಿದ ಮೇಲೆಯೇ ಸಿಎಸ್‌ಕೆ ಮತ್ತು ಆರ್‌ಆರ್ ನಡುವೆ, ಮೆಗಾ ಡೀಲ್ ಫಿಕ್ಸ್ ಆಗಿದ್ದು ಅಂತ ಹೇಳಲಾಗ್ತಿದೆ. ಜಡೇಜಾ ಎಂಟ್ರಿ ರಾಯಲ್ಸ್ ಆಟಗಾರರಲ್ಲಿ ಮನಸ್ಥಾಪಕ್ಕೆ ಕಾರಣವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966